to give a final verdict on accepting this report ? I do not understand why when the report was handed over to the Home Minister it was kept in darkness for nearly 2 months and then it was released on the eve of the meeting of the Maharashtra legislature. Was it not the duty of the Prime Minister to take a decision and then publish it simultaneously with the release of the report ? Here the Home Minister has abused his power, and I will go to the extent of saying that there is a conspiracy with all the parties in Maharashtra. I am unable to understand what made the Home Minister and the Minister for State in the Central Government to express their opinion that way. I do not know whether it is the point of view of the Government of India or it was made in their individual capacity. If it was on behalf of the Government of India, what were our cabinet ministers doing ? Are they sleeping like our Chief Minister ? Is it the decision of the Government ? If it is so, are they party to this decision ? If they are patriots, they must resign immediately. So far as the conduct of the Government of India is concerned, it is partial. Whenever there are reports, the Government of India took a decision and placed it before the Parliament. It is the duty of the Government of India even to place the resolution or decision before the Parliament for its acceptance. It must clearly express whether it is accepting or altering the report. Instead of doing that, Sri Y. B. Chavan, the Home Minister has given opportunity to handle the situation as he likes and to suit his own ulterior purpose. Immediately before the publication of the report, Sri V. P. Naik made a statement in unequivocal terms that he is going to accept the report. Then within a week the opposition parties in Maharashtra took up this problem to suit their own political ends. They cried loudly that it is not acceptable and therefore, there was fear in the minds of the Congress and Sri Chavan sent a directive to oppose the report. So far as the conduct of the Government of India is concerned, it is very partial and it should be corrected as early as possible in the interest of the nation.

Sir, so far the way that this matter has been handled by the party in power in our State is also not honourable. I would say that before the Commission was appointed the Chief Minister should have consulted all the opposition parties in the State and taken action. He failed there. Thereafter when the report was published, then also without consulting the opposition parties a decision was taken and thereafter at the pressure of the opposition leaders the session was called. The resolution before the House was not moved by the Leader of the House. I raised a point of order and requested the leader of the House to move the resolution. In the fitness of things it should have been moved by the Leader. However, he made a statement yesterday and gave out his mind. I for one completely agree to the acceptance of the report *in toto*.

I would like to answer certain things that have been raised by our friends in the opposition, the M.E.S. members. Sri B. P. Kadam and his friends havs repeated all the arguments or points raised or spoken by Sri V. P. Naik, the Chief Minister of Maharashtra. There is nothing

(SRI S. R. BOMMAI)

new in their argument. Firstly, Sri Naik raised a very important point that is the opinion of the people of the border areas, *i.e.*, results of elections in Karwar, Belgaum, Khanapur. Sir, permit me to say here how the elections are fought in this country. Money plays a very important part in the elections. Thereafter, the individual's integrity, character, work done by him and all those things play a very important role. Sri B. P. Kadam is re-elected, because he is a very good worker and a man serving the cause of the poor. If anybody had been put in his place even on behalf of the M.E.S., that person would not have been elected. If Sri Kadam stood on M.E.S. ticket and won, it does not mean that the people are in favour of merger. That cannot be accepted. He was elected because of his popularity, So the result of the election cannot be accepted as an indication of the people for merger. If we take the instance of Goa, an opinion poll was taken. There was none for merger with Maharashtra. But immediately after elections the same party comes into power which is in favur of merger. If we take this point, it is clear that vote in favour Sri Kadam is not a vote in favour of merger.

The other point that has been said against the Report is that the Commission did not accept village as a unit. So far as this is concered, much has been argued and said by a number of authorities. The S. R. C. and a number of international authorities say that village cannot be taken as a unit for the demarcation of the boundaries. The hon'ble Member Sri Kadam said that there were no directives given to the Commission. In this connection, I would like to refer to the resolution of the Congress Working Committee ;

> "Taking into consideration the fundamental basis of the reorganisation of States in India and with a view to solving the existing border disputes between the States of Maharashtra and Mysore and the States of Mysore and Kerala, the Working Committee requests the Government to set up a Commission which shall hear concerned parties and give its final decision."

The S. R. C. has clearly laid down the principles on which the States Reorganisation is to be made. They say that "no proposals for reorganisation should be determined be a single test. Conclusions have to be reached after taking into consideration the circumstances in each case." So far as Mysore State is concerned, it is not a unilingual State. In Kolar, 80 per cent of the people speak Telugu and they are very happy with us. Mysore is a cosmopolitian State. There are people from all parts of the country here speaking different languages. If the composition of the city is taken into consideration, we are in a minority.

So far as the arguments of the M. E. S. people and Sri V. P. Naik about Belgaum City are concerned, I want to remind them what

they said about the inclusion of Bombay City in Maharashtra. In Bombay City they had no majority. There were other persons who had built Bombay City. In spite of that, they insisted on the inclusion of Bombay City in Maharashtra on economical, social and of other considerations and on the consideration of the financial stability Maharashtra. Those very arguments could be applied to Belgaum City. The argument for the retention of Belgaum City and certain villages in Karnataka has been very nicely advanced by Sri Mahajan. So far as the Report is concerned, Mysore State is a great sufferer. Already Nippani and Kanapur forests have been mentioned. Hindalgi which is a part of Belgaum City and where a jail has been built at a cost of not less than Rs. 8 crores and which is on the border of Maharashtra has been given to Maharashtra. Still, we Mysoreans except the report because we want to be good citizens of India. We have got to face a number of problems and we must devote our attention to them. So far as Belgaum City is concerned, the Kelkar Report, J. V. P. Report, Dhar Commission, S. R. C. and Mahajan Commission have all come to the conclusion that it should be retained in Mysore State. That being so, why should they not accept the Commission's Report? If our friends are not going to accept the decision of any commission, we cannot satisfy them even by giving Belgaum and Karwar. Still, they will go on agitating. Such agitation should not be heeded by the Government of India and they must come forward with a bold decision without giving scope for any further agitaticns my making an amendment to the Constltution. Thank you, Sir.

†ಶ್ರೀ ಎಸ್. ಭೀಮಣ್ಣ (ಭಲ್ಕಿ).—ಮಾನ್ಯ ಸಭಾಪತಿಗಳೇ, ಇದುವರೆಗೂ ಮಹಾಜನ್ ಅವರ ವರದಿ ಬಗ್ಗೆ ಎಷ್ಟೋ ವಿಚಾರಗಳು ಈ ಸದನದ ಮುಂದೆ ಚರ್ಚೆಯಾಗಿವೆ. ಇದಲ್ಲದೆ ಪಾರ್ಲಿಮೆಂಟಿನಲ್ಲಿಯೂ ಈ ಚರ್ಚೆ ನಡೆಯುತ್ತಾ ಇದೆ. ಈ ದೇಶದ ಗಲ್ಲಿ ಗಲ್ಲಿಯಲ್ಲಿಯೂ, ನಗರಗಳಲ್ಲಿಯೂ, ಗ್ರಾಮಗಳಲ್ಲಿಯೂ ಇದೇ ಚರ್ಚೆಯಾಗುತ್ತಿದಯೆಂದು ಮಾನ್ಯ ಶ್ರೀ ಘೋರ್ಪಡೆಯವರು ಹೇಳಿದರು. ಆ ಪ್ರಕಾರ ಈ ಚರ್ಚೆ ದೇಶದಲ್ಲಿ ನಡೆಯುತ್ತಾ ಇದೆ. ಈ ಸಂದರ್ಭದಲ್ಲಿ ಬೀದರ್ ಜಿಲ್ಲೆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಬೀದರ್ ಜಿಲ್ಲೆಯಲ್ಲಿ 146 ಹಳ್ಳಿಗಳಿವೆ. ಬೆಳಗಾಂ, ನಿಪ್ಪಾಣಿ ಮತ್ತು ಖಾನಾಪುರ ಜೊತೆಗೆ ಡಿಸ್‌ಪ್ಯೂಟೆಡ್ ಏರಿಯಾ ಇಂದು ಕಾಣುತ್ತಾ ಇದೆ. ಈ ಗಡಿ ಪ್ರಶ್ನೆಯ ಬಗ್ಗೆ ಈಗಾಗಲೇ ಮೂರು ಕಮಿಷನ್‌ಗಳು ಆಗಿವೆ. ಮೊದಲನೆಯ ಡಿಸ್‌ಪ್ಯೂಟ್ ಬಗ್ಗೆ ಎಸ್. ಆರ್. ಸಿ. ಆಯಿತು. ಮೊದಲನೆಯ ವರದಿ ಆಗ ಪಾಸ್ ಮಾಡಿದ್ದರೂ ಅದರಮೇಲೆ ಚರ್ಚೆಯಾಗಿ ಪಾರ್ಲಿಮೆಂಟ್ ನಿರ್ಣಯ ಕೊಟ್ಟನಂತರ ಬೇರೆ ಬೇರೆ ಸರ್ಕಾರಗಳ ಮುಖ್ಯ ಮಂತ್ರಿಗಳಿಬ್ಬರೂ ಕಲೆತು ಹೊಂದಾಣಿಕೆಗೆ ಬರಬೇಕೆಂದು ವಿಚಾರ ನಡೆದು ಒಂದು ತೀರ್ಮಾನವಾಯಿತು. ಆಗ ಮತ್ತೊಂದು ಫೋರ್‌ಮ್ಯಾನ್ ಕಮಿಷನ್ ಮೈಸೂರು—ಮಹಾರಾಷ್ಟ್ರ ಗಡಿ ಬಗ್ಗೆ ನೇಮಕವಾಯಿತು. ಅದರಿಂದೇನೂ ಆಗಲಿಲ್ಲ. ಕಡೆಗೆ ಸೇನಾಪತಿ ಬಾಪಟ್ ಅವರು ಉಪವಾಸ ಮಾಡಿದನಂತರ ಈ ಮಹಾಜನ್ ಅವರ ಕಮಿಷನ್ ನೇಮಕವಾಯಿತು. ಈ ಪ್ರಕಾರ ಮೂರು ಕಮಿಷನ್‌ಗಳು ಆದರೂ ಆ ಕಮಿಷನ್‌ಗಳ ವರದಿ ಪ್ರಕಾರ ಈ ಪ್ರಶ್ನೆ ಇನ್ನೂ ಕೊಳೆಯುತ್ತಲೇ ಬರುತ್ತಿದೆಯೆಂಬ ಸಂಶಯ ಬಂದಿದೆ. ಇದರ ನಂತರಬೇರೆ ಕಮಿಷನ್ ಮಾಡಬೇಕೊ ಅಥವಾ ಇದನ್ನೇ ಜಾರಿಗೆ ತರಬೇಕೋ ಎಂಬ ಅಭಿಪ್ರಾಯವೂ ಕೇಂದ್ರದಲ್ಲಿ ಉಂಟಾಗುತ್ತಿದೆ. ಎಷ್ಟೋ ವಿಚಾರಗಳು ಕೇಂದ್ರದಲ್ಲಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದರ ಬಗ್ಗೆ ನಾನು ಹೇಳುವುದಿಷ್ಟೆ: ವಿಶೇಷವಾಗಿ ಈ ವಿಚಾರದಲ್ಲಿ ಹೇಳಬೇಕಾದದು ಏನೂ ಇಲ್ಲ. ಈ ಪ್ರಶ್ನೆ ಗಾಂಭೀರ್ಯವಾಗಿ ಮತ್ತು ವಿವರವಾಗಿ ಈ ಸಭೆಯಲ್ಲಿ ಬಂದಿದೆ. ಆದರೆ ಒಂದು ಮಾತು. ಈ ಸದನದ ಮುಂದೆ ವೃಥಾ ಈ ಪ್ರಶ್ನೆಯನ್ನು ವಿಚಾರಮಾಡವುದು ಆಗಿದೆ. ಏಕೆಂದರೆ 20 ವರ್ಷಗಳ ಹಿಂದೆ ಭಾರತ

(ಶ್ರೀ ಎಸ್. ಭೀಮಣ್ಣ)

ಪಾರ್ಟಿಷನ್ ಅದನಂತರ ಪಾಕೀಸ್ತಾನದೊಡನೆ ಇರುವ ದೊಡ್ಡ ಸಮಸ್ಯೆಯನ್ನು ಇಪ್ಪತ್ತು ವರ್ಷಗಳಾದರೂ ನಿರ್ಣಯಮಾಡಿಲ್ಲ. ನಮ್ಮ ರಾಷ್ಟ್ರದಲ್ಲಿ ಈಗ ಈ ಎರಡು ಪ್ರಾಂತಗಳ ಪ್ರಶ್ನೆ ಸುಮಾರು 10—12 ವರ್ಷಗಳಿಂದಲೂ ಕೊಳೆಯುತ್ತಲೇ ಇದೆ. ಈ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಮಹಾರಾಷ್ಟ್ರದವರು ನ್ಯಾಯ, ನೀತಿ, ಸತ್ಯವನ್ನೇ ಮರೆತರು. ಆದರೂ ಮೈಸೂರಿನವರ ಒಂದು ಸೌಜನ್ಯ ಮಿತಿಮೀರಿ ಹೋಗಿದೆ. ಪಾಪ, ನಮ್ಮವರು ನಾಗರೀಕರು, ಅವರು ಏನು ಮಾಡಿದರೂ ನಾವು ಸಹಿಸುವ ಪ್ರಸಂಗ ಈಗ ಬಂದಿದೆ. ಈಗ ಒಂದು ಚಿಕ್ಕ ಅಂಶ ನನ್ನ ಗಮನಕ್ಕೆ ಬಂದಿದೆ. ಭಾಷಾವಾರು ಪ್ರಾಂತ ರಚನೆ ಮಾಡುವಾಗ ಮಹಾರಾಷ್ಟ್ರದವರಿಗೆ ಏನೇನು ಅನುಕೂಲಗಳನ್ನು ಕೇಂದ್ರಸರ್ಕಾರದವರು ಮಾಡಬೇಕು ಎಂದು ಹೇಳಿದ್ದರೋ ಆ ಪ್ರಕಾರ ಮಹಾರಾಷ್ಟ್ರದವರು ಬಂದನ್ನೂ ಮಾಡುತ್ತಾ ಬಂದಿಲ್ಲ. 1953 ರಲ್ಲಿ ಆಂಧ್ರ ಪ್ರದೇಶದವರಾದ ಪೊಟ್ಟಿ ಶ್ರೀರಾಮುಲು ಅವರು ಉಪವಾಸಮಾಡಿ ಸತ್ತರು. ಆಗ ಕೇಂದ್ರ ಸರ್ಕಾರದವರು ಅದಕ್ಕೆ ಬಾಗಿ ಅದನ್ನು ಒಪ್ಪಿಕೊಂಡರು. ಅದೇ ರೀತಿಯಾಗಿ ಮುಂಬೈ ಪ್ರಾಂತದಲ್ಲಿಯೂ ಮಹಾರಾಷ್ಟ್ರದವರು ಇಂತಹ ಅಸ್ತ್ರವನ್ನೇ ಉಪಯೋಗ ಮಾಡಿದರು. ಅವರು ಪದೇ ಪದೇ ಗಲಾಟೆ ಮಾಡಿ ದೇಶದಲ್ಲಿ ಅಶಾಂತಿ ನಿರ್ಮಾಣ ಮಾಡಿ ಅವರ ತೀರ್ಮಾನವನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿದರು. ಆಮೇಲೆ ಪಂಜಾಬಿನಲ್ಲಿ ಸಂತ್ ಫತೇಸಿಂಗ್ ಅವರು ಪಂಜಾಬ್ ಸುಭಾ ರಚನೆಯಾಗಬೇಕು, ಆ ರೀತಿ ಆಗದಿದ್ದರೆ ದೇಶದಲ್ಲಿ ಅಶಾಂತಿಯನ್ನುಂಟುಮಾಡುತ್ತೇವೆಂದು ಹೇಳಿದರು. ಅದಕ್ಕೆ ಹೆದರಿ ಈ ಪ್ರಕಾರ ಭಾಷಾವಾರು ಪ್ರಾಂತವನ್ನು ನಿರ್ಮಾಣ ಮಾಡಿದರು.

ಅದೂ ಅಲ್ಲದೆ ಗೋವಾ ಸಂಬಂಧದಲ್ಲಿ ದಿವಂಗತ ಪಂಡಿತ್ ನೆಹರೂ ಅವರು ಏನು ಹೇಳಿದ್ದರು ಎಂದರೆ, 10 ವರ್ಷಗಳ ನಂತರ ಇದರ ಬಗ್ಗೆ ವಿಚಾರ ಮಾಡಬೇಕು. ಅದಕ್ಕೆ ಮೊದಲು ಇದರ ಬಗ್ಗೆ ಯಾವ ವಿಚಾರವನ್ನೂ ತೆಗೆದುಕೊಳ್ಳಬಾರದು ಎಂದು ಹೇಳಿದ್ದರು. ಆದರೂ ಅದರ ಬಗ್ಗೆ ಮಹಾರಾಷ್ಟ್ರದವರು ಕೈಹಾಕಿ ಮುಖಭಂಗ ಮಾಡಿಕೊಂಡರು. ಈಗ ಕರ್ನಾಟಕ ರಾಜ್ಯ ರಚನೆಯಾಗಿ 10 ವರ್ಷಗಳಾದಮೇಲೆ ಈ ಗಡಿ ಪ್ರಶ್ನೆಯನ್ನು ಮಹಾರಾಷ್ಟ್ರದವರು ತೆಗೆದುಕೊಂಡಿದ್ದಾರೆ. ಈ ಪ್ರಶ್ನೆಯನ್ನು ಶ್ರೀಮಾನ್ ಚವಾನರೇ ಕೇಂದ್ರದಲ್ಲಿ ಒತ್ತಾಯ ಹಾಕಿ ತೆಗೆದುಕೊಂಡಿದ್ದಾರೆ. ಇಂಥಾ ಒಂದು ಕೆಲಸಕ್ಕೆ ಕೇಂದ್ರ ಸರ್ಕಾರದವರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಪಶ್ಚಾತ್ತಾಪಪಡುತ್ತೇನೆ. ಈ ಗಡಿ ಸಮಸ್ಯೆಯ ವಿಚಾರದಲ್ಲಿ ಮಹಾರಾಷ್ಟ್ರದವರು ತಾಳಿರತಕ್ಕಂಥ ಒಂದು ಮನೋಭಾವ, ನಿಲುವು ಏನಿದೆ ಇದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಮಹಾರಾಷ್ಟ್ರದ ಒತ್ತಾಯಕ್ಕೆ ಬಲಿಯಾಗಿ ಕರ್ನಾಟಕಕ್ಕೆ ಪಕ್ಷಪಾತ ಮಾಡುತ್ತಿದ್ದಾರೆ. ಮಹಾಜನ್ ಕಮಿಷನ್ನಿನವರು ಬೀದರ್ ಜಿಲ್ಲೆಗೆ ಬಂದಿದ್ದಾಗ್ಯೆ ಈ ಗಡೀ ಸಮಸ್ಯೆಗೆ ಸಂಬಂಧಪಟ್ಟಂತೆ ಸಾಕ್ಷ್ಯವನ್ನು ಕೊಡುವಾಗ ಕೆಲವು ಅಕ್ರಮಗಳು ಮತ್ತು ಗಲಾಟೆಗಳು ನಡೆದಿವೆ. ಅಲ್ಲಿ ಕಾಸರ್‌ತೂಗಾಹಳ್ಳಿಯಲ್ಲಿ ಸೇಕಡ 80ರಷ್ಟು ಕನ್ನಡಿಗರು ಇದ್ದಾರೆ. 1951ನೇ ಇಸವಿ ಸೆನ್ಸಸ್ ಪ್ರಕಾರ ಅಲ್ಲಿ 400 ಜನ ಕನ್ನಡಿಗರು, 600 ಜನ ಮರಾಠೆಯವರು ಇದ್ದಾರೆಂದು ಹೇಳಿದ್ದಾರೆ. 1961ನೇ ಇಸವಿಯ ಸೆನ್ಸಸ್ ಪ್ರಕಾರ ನೋಡಿದರೆ 1,500 ಜನ ಮರಾಠೆಯವರು, 300 ಜನ ಕನ್ನಡಿಗರು ಇದ್ದಾರೆಂದು ತಪ್ಪು ಸೆನ್ಸಸ್ ಮಾಡಿದ್ದಾರೆ. ಅದು 85 ಪರ್ಸೆಂಟ್ ಕನ್ನಡಿಗರು ಮತ್ತು 15 ಪರ್ಸೆಂಟ್ ಮರಾಠಿಯವರು ಎಂದು ಇರಬೇಕು. ಇದನ್ನೆಲ್ಲಾ ಮಹಾಜನ್ ಕಮಿಷನ್ನಿನವರು ಬರೆದುಕೋಂಡು ಬಂದಿದ್ದಾರೆ. ಕನ್ನಡನಾಡು, ಕರ್ನಾಟಕ ಇನ್ನೂ ಪೂರ್ಣವಾದ ಕರ್ನಾಟಕ ಆಗಿಲ್ಲ. ಮಹಾಜನ್ ಕಮಿಷನ್ನಿನವರು ಬೀದರ್‌ನಲ್ಲಿದ್ದಾಗ ಮಹಾರಾಷ್ಟ್ರದ ಡಿ.ಐ.ಜಿ.ಯವರು ಗಡಿಯಲ್ಲಿರತಕ್ಕ ಕೆಲವು ಕನ್ನಡ ಪ್ರದೇಶದಲ್ಲಿ ಕೆಲವರನ್ನು ಅರೆಸ್ಟ್ ಮಾಡಿಕೊಂಡು ಹೋಗಿದ್ದಾರೆ, ಕೆಲವರನ್ನು ಹೆದರಿಸಿದ್ದಾರೆ. ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಈ ಗಡೀ ಪ್ರದೇಶಗಳಲ್ಲಿರತಕ್ಕ ಕನ್ನಡ ಪ್ರದೇಶಗಳಲ್ಲಿ ಗಲಾಟೆ ಮಾಡಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರದವರು ಯಾವ ಒಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರದವರು ಭಾವೈಕ್ಯತೆ ಬೆಳೆಯಬೇಕೆಂದು ಹೇಳುತ್ತಾರೆ. ಆದರೆ ಈಗ ನಮ್ಮ ಮೈಸೂರಿನ ಗಡಿ ಸಮಸ್ಯೆಯನ್ನು ನೋಡಿದರೆ ಇಲ್ಲಿಯೇ ಭಾವೈಕ್ಯತೆ ಬೆಳೆದಿಲ್ಲ. ಸಣ್ಣಪುಟ್ಟ ವಿಚಾರಗಳಿಗೆ ಮಹಾರಾಷ್ಟ್ರದವರು ನಮ್ಮನ್ನು ವಿರೋಧಮಾಡುತ್ತಾರೆ. ಇನ್ನೂ ಯಾವ ವಿಚಾರವನ್ನುತಾನೆ ನಾವು ಹೇಳುವುದಕ್ಕಾಗುತ್ತದೆ ? ಈಗ ನಮ್ಮ ರಾಜ್ಯದ ವಿಚಾರವನ್ನೇ ತೆಗೆದುಕೊಂಡರೆ ನಮ್ಮ ಕರ್ನಾಟಕ ರಾಜ್ಯ ರಚನೆಯಾಗಿ ಸುಮಾರು 10 ವರ್ಷಗಳಾದುವು. ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡುವುದಕ್ಕೆ ಇನ್ನೂ ಆಗಿಲ್ಲ. ಇದು ಈ ಸಭೆಯಲ್ಲಿ ಎಷ್ಟೋ ಸಾರಿ ಚರ್ಚೆಗೆ ಬಂದು ಅದು ನಿಂತುಹೋಯಿತು.

ಕರ್ನಾಟಕ ಎಂದು ಹೆಸರಿಟ್ಟರೆ ಈ ರಾಜ್ಯವನ್ನು ಎರಡು ರಾಜ್ಯಗಳನ್ನಾಗಿ ಮಾಡಲು ಈ ಸಭೆಯು ಮುಂದೆ ನಿರ್ಣಯವನ್ನು ತರುತ್ತೇವೆಂದು ಹೇಳಿದರು. ಇದನ್ನೆಲ್ಲಾ ನೋಡಿದರೆ ನಮ್ಮಲ್ಲಿ ಭಾವೈಕ್ಯತೆ ಎಷ್ಟರಮಟ್ಟಿಗೆ ಉಂಟಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ವಾತಾವರಣದಲ್ಲಿ ಮಹಾರಾಷ್ಟ್ರದವರು ಬೇರೆ ಗಡಿ ಸಮಸ್ಯೆಯನ್ನು ತೆಗೆದುಕೊಂಡು ನಮಗೆ ಅನ್ಯಾಯ ಮಾಡು ತ್ತಿದ್ದಾರೆ. ಮತ್ತು ಕೇಂದ್ರ ಸರ್ಕಾರದಲ್ಲಿ ತಮ್ಮ ಪ್ರಭಾವವನ್ನು ಬೀರಿ ಗಡಿ ವಿಚಾರದಲ್ಲಿ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದಾಗಿ ನಮ್ಮಲ್ಲಿ ಭಾವೈಕ್ಯತೆ ಉಂಟಾಗಿಲ್ಲ. ಕೇಂದ್ರ ಸರ್ಕಾರದವರು ಯಾರು ಶಕ್ತರಿದ್ದಾರೆಯೋ, ಅವರಿಗೆ ನ್ಯಾಯವನ್ನು ಕೊಡಬೇಕೆಂಬ ಉದ್ದೇಶದಿಂದ ಇದನ್ನು ರಾಜಕೀಯ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಗೊತ್ತಾಗುತ್ತದೆ. ಒಂದು ವೇಳೆ ಕೇಂದ್ರದವರೇನಾದರೂ ಈ ಮಹಾಜನ್ ಕಮಿಷನ್ನಿನ ವರದಿಯನ್ನು ಒಪ್ಪದಿದ್ದರೆ ಅದು ರಾಷ್ಟ್ರದ್ರೋಹ ಎಂದು ಹೇಳುವುದಕ್ಕೆ ಅಡ್ಡಿಯಿಲ್ಲ. ಈ ವರದಿಯ ಬಗ್ಗೆ ನಮ್ಮಲ್ಲಿ ಯಾರೂ ಭಿನ್ನಾಭಿಪ್ರಾಯ ಇರಬಾರದು. ಈ ಗಡಿ ಸಮಸ್ಯೆಯ ವಿಚಾರವನ್ನು ನ್ಯಾಯ ರೀತಿಯಿಂದ ಇತ್ಯರ್ಥ ಮಾಡಬೇಕಾಗಿದೆ. ನಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಕೇಂದ್ರದಲ್ಲಿ ಯಾರ ಒತ್ತಾಯಕ್ಕೂ ಮಣಿಯದೆ ಈ ವರದಿಯನ್ನು ಒಪ್ಪಿಕೊಳ್ಳುವಂತೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಾನು ಇಷ್ಟು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾಲ್ಕು ತಾಲ್ಲೂಕುಗಳು ಕರ್ನಾಟಕಕ್ಕೆ ಬರಲಿ, ಮೂರು ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಸೇರಲಿ, ಪುನಃ ಪುನಃ ಇದನ್ನು ವಿಚಾರಮಾಡಿಕೊಂಡು ಹೋದರೆ ಎಷ್ಟೇ ಕಮಿಷನ್‌ಗಳನ್ನು ನೇಮಕ ಮಾಡಿದರೂ ಈ ಗಡಿ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಈ ವರದಿ ಯಾವ ವಾತಾವರಣದಲ್ಲಿ ಬಂದಿದೆ ಎಂಬುದನ್ನು ಗಮನಿಸಿ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಪ್ರಕಾರವಾಗಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಪ್ರಯತ್ನ ಮಾಡಿ ಕೇಂದ್ರ ಸರ್ಕಾರದವರು ಈ ವರದಿಯನ್ನು ಒಪ್ಪುವಂತೆ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

12-00 NOON

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಈ ಮಹಾಜನ್ ವರದಿಯನ್ನು ಒಪ್ಪಬೇಕೇ, ಬಿಡಬೇಕೇ ಎನ್ನತಕ್ಕಂಥ ಒಂದು ತೀರ್ಮಾನವನ್ನು ಕೈಕೊಳ್ಳುವುದಕ್ಕೆ ಈ ಸಭೆಯನ್ನು ಕರೆಯಬೇಕೆಂಬ ನಮ್ಮ ಕಡೆಯಿಂದ ಒತ್ತಾಯ ಬಂದಮೇಲೆ ಈ ಸಭೆಯನ್ನು ಸರ್ಕಾರದವರು ಕರೆದಿದ್ದಾರೆ. ಈ ಸಭೆಯನ್ನು ಕರೆಯುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದಂಥ ಶ್ರೀ ಎಸ್. ನಿಜಲಿಂಗಪ್ಪನವರು ಈ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಇಡೀ ದೇಶದಾದ್ಯಂತ ತಮಟೆ ಹೊಡೆದುಕೊಂಡು ಸಾರುತ್ತಿದರು. ಯಾರನ್ನು ಕೇಳಿ ಮುಖ್ಯಮಂತ್ರಿಗಳು ಈ ಮಾತನ್ನು ಹೇಳುತ್ತಿದ್ದರು ಎಂದು ನನಗೆ ವ್ಯಥೆಯಾಯಿತು. ಈ ಮಹಾಜನ್ ಆಯೋಗ ನೇಮಕವಾಗಬಾರದು, ನಮಗೆ ಯಾವ ಆಯೋಗವೂ ಬೇಡ ಎನ್ನತಕ್ಕಂಥ ಒಂದು ಪ್ರಚಂಡ ಚಳುವಳಿಯನ್ನು ಇಡೀ ಕರ್ನಾಟಕ ರಾಜ್ಯದಾದ್ಯಂತ ನಡೆಸಿದ್ದಾಯಿತು. ಶ್ರೀಮಾನ್ ನಿಜಲಿಂಗಪ್ಪನವರು ಕನ್ನಡ ಜನತೆಯ ಚಳುವಳಿಯನ್ನು, ಕನ್ನಡ ಜನತೆಯ ಅಭಿಮಾನವನ್ನು ಒಂದು ರೀತಿಯಿಂದ ಧಿಕ್ಕರಿಸಿ ಪಾಳೆಯಗಾರಿಕೆ ದೃಷ್ಟಿಯಲ್ಲಿ ಮಹಾರಾಷ್ಟ್ರದ ರಾಜಕಾರಿಣಿಗಳ ಒತ್ತಾಯಕ್ಕೆ ಮಣಿದು ಈ ಆಯೋಗದ ನೇಮಕಕ್ಕೆ ಒಪ್ಪಿಕೊಂಡು ಬಂದರು. ಆಯೋಗ ರಚನೆಯಾಗಬಾರದೆಂಬ ಕಾರಣಕ್ಕಾಗಿ ನಮ್ಮ ಕನ್ನಡನಾಡಿನಲ್ಲಿ ಇಬ್ಬರು ಸತ್ತಂಥಹ ವರದಿ ಇಡೀ ರಾಜ್ಯಕ್ಕೆ, ಇಡೀ ದೇಶಕ್ಕೆ ಗೊತ್ತಿದೆ. ನಾನಾದರೂ ಇವತ್ತು ಈ ವರದಿಯನ್ನು ತಯಾರು ಮಾಡಿದಂಥ ಶ್ರೀ ಮಹಾಜನ್ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಅವರು ಬಹಳ ದೊಡ್ಡವರು, ಸತ್ಯವಂತರು, ಮೇಧಾವಿಗಳು ಮತ್ತು ತಿಳಿದಂಥವರು. ಅವರು ತಯಾರು ಮಾಡಿದಂಥ ವರದಿಗೆ ನಾನು ಬಹಳ ಗೌರವವನ್ನು ಕೊಡುತ್ತಿದ್ದೇನೆ. ಈ ಮಹಾಜನ್ ಆಯೋಗ ನೇಮಕವಾಗಬಾರದು ಎಂದು ದೊಡ್ಡ ಚಳುವಳಿಯನ್ನು ಮಾಡಿದವರಲ್ಲಿ ನಾನೂ ಒಬ್ಬ. ಈ ಊರಿಗೆ ಮಹಾಜನ್ ಅವರು ಬಂದಾಗ, ಈ ಆಯೋಗ ಬೇಡ ಎಂದು ಅವರಿಗೆ ಕಪ್ಪು ಬಾವುಟವನ್ನು ಕನ್ನಡ ಚಳುವಳಿಗಾರರಾದಂಥ ನಾವು ಹಿಡಿದೆವು. ಇದನ್ನೆಲ್ಲಾ ನಾವು ನೋಡಿದಾಗ ತಿಳಿಯುತ್ತದೆ, ಮಹಾಜನ್ ಅವರು ಕನ್ನಡಿಗರ ನೆಂಟರೇನಲ್ಲ ಅಥವಾ ಮಹಾರಾಷ್ಟ್ರದವರ ದ್ವೇಷಿಗಳೇನಲ್ಲ, ಮಹಾರಾಷ್ಟ್ರಕ್ಕೂ, ಕರ್ನಾಟಕಕ್ಕೂ ಮತ್ತು ಕೇರಳಕ್ಕೂ ಸಂಬಂಧಿಯಲ್ಲದ ಮನುಷ್ಯ ಮಹಾಜನ್ ಅವರು ಎಂಬುದು. ಯಾವ ಒಂದು ಮಹಾಜನ್ ಆಯೋಗವಾಗಬೇಕೆಂದು ಇಡೀ ಮಹಾರಾಷ್ಟ್ರದಾದ್ಯಂತ ಮಹಾರಾಷ್ಟ್ರಿಗರು ಮಾಡ

(ಶ್ರೀ ವಾಟಾಳ್ ನಾಗರಾಜ್)

ಬಾರದಂತಹ, ಆಗಬಾರದಂತಹ, ನಡೆಯಬಾರದಂತಹ ಕಾರ್ಯವನ್ನು ನಡೆಸಿ, ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ರಾತ್ರಿ 11 ಗಂಟೆಯಲ್ಲಿ ನಿದ್ದೆಮಾಡುವ ಸಮಯದಲ್ಲಿ ಎಚ್ಚರಿಸಿ, ಮಹಾರಾಷ್ಟ್ರದಲ್ಲಿದ್ದ ಕಾಂಗ್ರೆಸ್ ನಾಯಕರುಗಳು ಸುತ್ತುವರಿದು ಏಕಸದಸ್ಯ ಆಯೋಗಕ್ಕೆ ಒಪ್ಪಿಸಿದರು. ಈ ಒಂದು ವಿಷಯದ ಹಿನ್ನೆಲೆಯಲ್ಲಿ ನನಗನ್ನಿಸುತ್ತದೆ, ಮಹಾರಾಷ್ಟ್ರದವರ ಒಂದು ವಾದ ಏನೆಂದರೆ ಅವರಿಗೆ ಬೇಕಾದಂಥ, ಅವರು ಕೇಳುವಂತಹ ಎಲ್ಲಾ ಪ್ರದೇಶಗಳನ್ನು ಕೊಡಿಸುವಂತಹ ಆಯೋಗ ರಚನೆಯಾದರೆ, ಆಗ ಅವರು ಅಂತಹ ಆಯೋಗದ ವರದಿಯನ್ನು ಒಪ್ಪಿಕೊಳ್ಳುತ್ತಾರೆ. ಅದು ಹೊರತು, ಅವರ ಮನಸ್ಸಿಗೆ ಯಾವುದು ವಿರುದ್ಧವಾಗಿರುತ್ತದೆ ಅಂಥ ವರದಿಯನ್ನು ಅವರು ಯಾವ ಕಾಲಕ್ಕೂ ಒಪ್ಪುವುದಿಲ್ಲ. ಅವರು ಹೇಳತಕ್ಕಂಥ ವಾದ ನ್ಯಾಯವಾಗಿದೆ, ಒಳ್ಳೆಯ ತತ್ವದಿಂದ ಕೂಡಿದೆಯೆಂದು ಹೇಳುತ್ತಾರೆ. ಶ್ರೀಮಾನ್ ನಾಯಕ್ ಅವರು ಮತ್ತು ಶ್ರೀಮಾನ್ ವೈ. ಬಿ. ಚವಾಣ್ ಅವರು ಈ ವರದಿಯ ಅಥವಾ ಈ ಆಯೋಗದ ದುರಂತ ನಾಟಕದ ಖಳನಾಯಕರಾಗಿದ್ದಾರೆ. ಶ್ರೀ ಮಹಾಜನ್ ಅವರು ತಮ್ಮ ವರದಿಯಲ್ಲಿ ಮಹಾರಾಷ್ಟ್ರದವರಿಗೆ ದ್ರೋಹ ಮಾಡಿದ್ದಾರೆಂದು ಅವರುಗಳು ಹೇಳುತ್ತಿದ್ದಾರೆ. ನಾನು ಮೊದಲೇ ಹೇಳಿದಂತೆ ಮಹಾಜನ್ ಅವರು ಏನೂ ನಮ್ಮ ಪ್ರಾಂತ್ಯಕ್ಕೆ ಸೇರಿದವರಲ್ಲ, ನಮ್ಮ ಸಂಬಂಧಿಯೂ ಅಲ್ಲ. ಕೇಂದ್ರ ಸರ್ಕಾರದ ಗೃಹ ಮಂತ್ರಿಗಳಾದ ಶ್ರೀ ಚವಾಣ್ ಅವರು ಮಹಾರಾಷ್ಟ್ರದವರು. ಅವರು ಈ ಆಯೋಗದ ಪರಿಪೂರ್ಣವಾದ ಹಕ್ಕನ್ನು ಹೊಂದತಕ್ಕವರು. ಈ ಆಯೋಗದ ಬಗ್ಗೆ ಅವರು ಮಹಾರಾಷ್ಟ್ರದ ಪಕ್ಷಪಾತಿಗಳಾಗಿದ್ದಾರೆ. ಅವರು ಕೇಂದ್ರದ ಗೃಹಸಚಿವರಂತೆ ವರ್ತನೆ ಮಾಡುತ್ತಿಲ್ಲ. ಅವರು ಕೂಡಲೇ ರಾಜೀನಾಮೆಯನ್ನು ಕೊಟ್ಟು ಮಹಾರಾಷ್ಟ್ರಕ್ಕೆ ಬರುವವರೆಗೆ ನಮಗೆ ನ್ಯಾಯ ದೊರಕುವುದಿಲ್ಲ. ಇಡೀ ಕನ್ನಡ ಜನರ ರಕ್ತಪಾತವಾದರೂ ಸರಿಯೆ, ಶ್ರೀ ಚವಾಣ್ ಅವರು ರಾಜೀನಾಮೆಯನ್ನು ಈ ವರದಿಯ ಬಗ್ಗೆ ಕೊಡಲೇಬೇಕೆಂದು ಈ ಸಭೆಯಲ್ಲಿ ಹೇಳುತ್ತೇನೆ. ಅವರು ರಾಜೀನಾಮೆಯನ್ನು ಕೊಡದಿದ್ದರೆ ಮಹಾರಾಷ್ಟ್ರದ ಪಕ್ಷಪಾತಿಗಳಾಗುತ್ತಾರೆ. ಅವರು ಕೇಂದ್ರ ಸರ್ಕಾರದ ಗೃಹ ಸಚಿವರಾಗಿರುವವರೆಗೂ ಕನ್ನಡ ನಾಡಿಗೆ ಅನುಕೂಲವಾಗುತ್ತದೆಂದು ಶ್ರೀ ನಿಜಲಿಂಗಪ್ಪನವರಂತಹ ನೂರೆಂಟು ಮಂದಿ ಅಪ್ಪಂದಿರು ಬಂದು ಹೇಳಿದರೂ ಸಹ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದನ್ನೇ ಮತ್ತು ಹೇಳಿ ಅದನ್ನೇ ಪುನರಾವೃತ್ತಿ ಮಾಡುತ್ತಿದ್ದಾರೆ. ಒಂದು ಸಲ ಹೇಳಿದರೆ ಸಾಕು. ಇನ್ನೂ ಬೇರೆ ಸದಸ್ಯರು ಮಾತನಾಡತಕ್ಕಂಥವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾವು ಕನ್ನಡಿಗರು ಚಳವಳಿಗಾರರು ಅಲ್ಲ, ನಮ್ಮಲ್ಲಿ ಅಂಥ ಶಕ್ತಿ ಇಲ್ಲ, ನಾವು ಏನು ಹೇಳಿದರೂ ಕೇಳುತ್ತೇವೆ ಎಂದು ಮಹಾರಾಷ್ಟ್ರದವರು ತಿಳಿದು ಕೊಂಡಿದ್ದಾರೆ. ಅವರು ತಿಳಿದುಕೊಂಡದ್ದು ತಪ್ಪು, ಈ ವಿಚಾರದಲ್ಲಿ ನಾವು ಅವರಿಗಿಂತಲೂ ನೂರು ಪಾಲು ಮೇಲ್ಮಟ್ಟದಲ್ಲಿದ್ದೇವೆ. ನಾವು ನಮ್ಮ ರಾಜ್ಯದ ಒಂದು ಅಂಗುಲ ಭೂಮಿಯನ್ನೂ ಬಿಟ್ಟು ಕೊಡುವುದಿಲ್ಲ. ಬಿಟ್ಟು ಕೊಡುವುದಕ್ಕೆ ನಾವು ತಯಾರಿಲ್ಲ ಎಂಬುದನ್ನು ಅವರು ತಿಳಿದುಕೊಳ್ಳಲಿ ಮಹಾರಾಷ್ಟ್ರದವರಿಗೆ ಬುದ್ಧಿ ಬರಲಿ ಎಂದು ಹೇಳುತ್ತೇನೆ. 1920ರಿಂದ ಇವತ್ತಿನವರೆಗೆ ನೇಮಕವಾದ ಯಾವ ಆಯೋಗವೂ ಅವರ ಬೇಡಿಕೆಯನ್ನು ಖಂಡಿತವಾಗಿ ಒಪ್ಪಿಲ್ಲ, ಒಪ್ಪಿಕೊಳ್ಳುತ್ತಾ ಇಲ್ಲ. ಮಹಾರಾಷ್ಟ್ರದವರ ದೃಷ್ಟಿ ಯಾವಾಗಲೂ ಜಗಳ ಎಬ್ಬಿಸಬೇಕು ಗಲಾಟೆ ಮಾಡಬೇಕು ಎಂಬ ರಾಜಕೀಯ ಉದ್ದೇಶ ಇಟ್ಟುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಸಾಮಾನ್ಯ ಜನರು ಗಡಿಯ ಬಗ್ಗೆ ಯಾವುದೇ ಆಸಕ್ತಿ ವಹಿಸಿಲ್ಲ ಎಂಬುದನ್ನು ಹೇಳುತ್ತೇನೆ.

ಸ್ವಾಮಿ, ಇವತ್ತು ನಮ್ಮ ದುರ್ದೈವದಿಂದ ಶ್ರೀಮಾನ್ ನಿಜಲಿಂಗಪ್ಪನವರು ಈಗ ಈ ಸಭೆಯಲ್ಲಿ ಹಾಜರಿಲ್ಲ. ಅವರು ದೆಹಲಿಗೆ ಹೋಗಿದ್ದಾರೆ. ಅವರು ನಿನ್ನೆ ಈ ಸಭೆಯಲ್ಲಿ ಒಂದು ಮಾತು ಹೇಳಿದರು. ಈ ವರದಿಯನ್ನು ಒಪ್ಪಿಕೊಂಡು ಬಿಡಿ, ಬಹುಶಃ ಈ ಸಭೆ ಒಪ್ಪುತ್ತದೆ ಎಂಬ ದೃಷ್ಟಿಯಿಂದ ಹೇಳಿದರು ಎಂದು ಕಾಣುತ್ತದೆ. ಅವರು ಈ ಮಾತನ್ನು ಮೊದಲಿನಿಂದ ಇಲ್ಲಿಯವರೆಗೆ ಹೇಳುತ್ತಲೇ ಬಂದಿದ್ದಾರೆ. ಅವರಲ್ಲಿ ಒಂದು ಸರಿಯಾದ ನಿಲುವು ಇಲ್ಲದೇ ಇರುವುದರಿಂದ ಕನ್ನಡ ನಾಡು ಇಂಥ ಒಂದು ಘೋರ ಪರಿಸ್ಥಿತಿ ಅನುಭವಿಸಬೇಕಾಗಿ ಬಂದಿದೆ. ನಮಗೆ ಇನ್ನೂ ಬರಬೇಕಾದ ಅನೇಕ ಭಾಗಗಳು ಇವತ್ತು ಬಿಟ್ಟು ಹೋಗಿವೆ. ನ್ಯಾಯವಾಗಿ ನಮಗೆ ಬರಬೇಕಾದಂಥ ಸೊಲ್ಲಾಪುರ, ಚಂದಗಡ, ಉತ್ತರ ಸೊಲ್ಲಾಪುರ ಇವು ಅತಿ ಮುಖ್ಯವಾದ ಪ್ರದೇಶ. ಈ ಪ್ರದೇಶ ನಮಗೆ ಬರಲೇಬೇಕು. ಬರಬೇಕಾದಂಥ ಈ ಪ್ರದೇಶದ ಬಗ್ಗೆ ನಮ್ಮ ಹೋರಾಟ ಇದೆ ಎಂಬ ಮಾತನ್ನು ನಾನು

ಹೇಳುತ್ತೇನೆ. ಮಹಾರಾಷ್ಟ್ರದವರಿಗೆ ಏನಾಗಿದೆ ಅಂದರೆ, ಅವರ ಭಾಷೆಯಲ್ಲಿ ಹೇಳುವುದಾದರೆ, ಅವರಿಗೆ ಚಾಳೀಸ್ ಬಂದಿವೆ. ಚಾಳೀಶ್ ಅಂದರೆ ಕಣ್ಣಿಗೆ ಹಾಕುವ ಕನ್ನಡಕ. ನಾಲ್ವತ್ತು ವರ್ಷಗಳಾದ ಮೇಲೆ ಸಾಮಾನ್ಯವಾಗಿ ಮನುಷ್ಯನಿಗೆ ಕನ್ನಡಕ ಹಾಕುವ ಅವಶ್ಯಕತೆ ಬರುತ್ತದೆ. ಅವರಿಗೆ ಚಾಳೀಸ ಬಂದಿದೆ. 40 ವರ್ಷ ಅಲ್ಲ 50 ವರ್ಷಗಳಾದರೂ ಕೂಡ ಈ ಮರಾಠಿ ಮೊಂಡುತನ ಬಿಟ್ಟಿದ್ದಿಲ್ಲ ಎಂದು ಹೇಳುತ್ತೇನೆ. ದೇಶಕ್ಕೋಸ್ಕರ ತ್ಯಾಗ ಮಾಡಿದಂಥ ಸೇನಾಪತಿ ಬಾಪಟ್ ಅವರನ್ನು ಕೊನೆಯ ಕಾಲದಲ್ಲಿ ಅವರು ಅಸು ನೀಗುವ ಕಾಲದಲ್ಲಿ ಸತ್ಯಾಗ್ರಹ ಚಳವಳಿಯಲ್ಲಿ ಎಳೆದು ಕಪಟ ನಾಟಕಕ್ಕೆ ಎಳೆದರು. ಅವರು ಯಾವ ಮಟ್ಟಕ್ಕಾದರೂ ಹೋಗುತ್ತಾರೆ. ಅವರಿಗೆ ಇರತಕ್ಕಂಥ ನೆಲದ ದಾಹ ವಿಸ್ತರಣಾ ವಾದ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಮಹಾರಾಷ್ಟ್ರದವರಿಗೆ ಇರುವಷ್ಟು ಬೇರೆ ಯಾರಿಗೂ ಇಲ್ಲ ಎಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ನ್ಯಾಯಮೂರ್ತಿ ಮಹಾಜನರ ಬಗ್ಗೆ ಅವರು ಅನೇಕವಾದಂಥ ಕೆಟ್ಟ ಕೆಟ್ಟ ಮಾತುಗಳನ್ನು ಹೇಳಿದ್ದಾರೆ. ಮಹಾಜನ ವರದಿಯನ್ನು ಹರಿದಿದ್ದಾರೆ, ಸುಟ್ಟು ಹಾಕಿದ್ದಾರೆ ಎಲ್ಲವನ್ನೂ ಮಾಡಿದ್ದಾರೆ. ಯಾವ ಮರಾಠಿ ಜನ ಮೊದಲು ಮಹಾಜನ ಕಮಿಷನ್ ನೇಮಕ ಸ್ವಾಗತ ಮಾಡಿದ್ದರೋ ಅದೇ ಜನ ಇವತ್ತು ಅವರ ವರದಿಯನ್ನು ಹರಿದುಹಾಕಿ ಸುಟ್ಟುಹಾಕಿದ್ದಾರೆ.

ಮೊನ್ನೆಯ ದಿವಸ ಮಹಾರಾಷ್ಟ್ರದ ವಿಧಾನ ಸಭೆಯ ವಿರೋಧೀ ಪಕ್ಷದ ಸದಸ್ಯರಾದ ಆಚಾರ್ಯ ಪ್ರಹ್ಲಾದ ಕೇಶವ ಅತ್ರೆ ಅವರ ಸಂಪಾದಕತ್ವದಲ್ಲಿ ಬೊಂಬಾಯಿಯಿಂದ ಪ್ರಕಟವಾಗುವ ಮರಾಠಿ ದಿನ ಪತ್ರಿಕೆಯಾದ ಮರಾಠಾ ಪತ್ರಿಕೆಯ 15-12-1967ರ ಸಂಚಿಕೆಯಲ್ಲಿ ದಿವಂಗತ ಮೆಹರಚಂದ್ ಮಹಾಜನರ ಬಗ್ಗೆ ಸಂಪಾದಕೀಯದ ತಲೆಬರಹ ಹೀಗಿದೆ—ಕೊನೆಗೊಮ್ಮೆ ಮಹಾರಾಷ್ಟ್ರದ ದ್ವೇಷಿ ಮಹಾಜನ ಮಗ ಸತ್ತನು—ಸಂಪಾದಕೀಯದ ಪೂರ್ತಿ ಪಾಠ ಹೀಗೆ ಇದೆ:

"ಮಹಾರಾಷ್ಟ್ರಾಜ್ಯಾ ಸೀಮಾ ಭಾಗಾತೀಲ ಲಕ್ಷಾವಧೀ ಮರಾಠಿ ಭಾಷಿಕಾವರ ರಾಕ್ಷಸೀ ಅನ್ಯಾಯ ಕರಣಾರಾ ಮಹಾಜನ ಕಮಿಶನ್‌ಚಾ ನಿರ್ಮಾತಾ ಖಲಪುರುಷ ಮೆಹರಚಂದ ಮಹಾಜನ ಸೋಮವಾರೀ ಮಧ್ಯ ರಾತ್ರೀ ಚಂದೀಗಡ ಯೆಥ ಹೃದಯ ವಿಕಾರಾನೆ ಮರಣ ಪಾವಲಾ. ತ್ಯಾಚ್ಯಾ ಮರಣಾನೆ ಕೋಣಾಲಾ ದುಃಖ ಹೋಣಾರ ಅಸೇಲ ತೇ ಹೋವೋ. ಪಣ ನಿದಾನ ಏಕಹೀ ಮರಾಠಿ ಭಾಷಿಕಾಲಾ ತ್ಯಾ ಮುಳೆ ವಾಯಿಟ್ ವಾಟಣಾರ ನಾಹಿ. ಲಾಖೋ ಮರಾಠಿ ಬಾಂಧವಾಂಚೆ ಎವಢೆ ಶಿವ್ಯಾಶಾಪ ಖಾಲ್ಯಾ ನಂತರ ತ್ಯಾಲಾ ಅಶಾ ಧರೇನೆ ಅಕಸ್ಮಾತ್ ಮೃತ್ಯು ಯಾವಾ ಹೇ ಸಾಹಜಿಕಚ ಹೊತೆ. ನ್ಯಾ. ಮಹಾಜನಚಾ ಹಾ ಸೈತಾನ ಯಶವಂತರಾವ ಚವಾಣ ಅಣಿ ವಸಂತರಾವ ನಾಯಿಕ ಯಾನಿ ಮಹಾರಾಷ್ಟ್ರಾಚ್ಯಾ ಟೋಕಾಂಡೀ ಬಸವಿಲೀಲಾ ಹೋತಾ. ತ್ಯಾನಿ ಮಾತ್ರ ಅಪಲ್ಯಾ ಛಾತ್ಯಾ ಪಿಟೂನ ಮಹಾಜನ ಮೇಲ್ಯಾ ಬದ್ದಲ ಖುಶಾಲ ಆಕ್ರೋಶ ಕರಾವಾ. ಪರಮೇಶ್ವರ ನ್ಯಾ. ಮೂ. ಮಹಾಜನ ಯಾಂಚ್ಯಾ ಆತ್ಮ್ಯಲಾ ಕಧೀಹಿ ಶಾಂತಿ ದೇಣಾರ ನಾಹಿ."

ಇದರ ಕನ್ನಡ ಅನುವಾದ ಹೀಗೆ ಇದೆ. ಕೊನೆಗೊಮ್ಮೆ ಮಹಾರಾಷ್ಟ್ರ ದ್ವೇಷಿ ಮಹಾಜನ ಮಗ ಸತ್ತನು. ಮಹಾರಾಷ್ಟ್ರದ ಸೀಮಾ ಭಾಗದಲ್ಲಿರುವ ಲಕ್ಷಾವಧೀ ಮರಾಠಿ ಭಾಷಿತರಮೇಲೆ ರಾಕ್ಷಸೀ ಅನ್ಯಾಯವನ್ನು ಎಸಗಿದ ಮಹಾಜನ ಸಮಿತಿಯ ನಿರ್ಮಾತೃ ಖಲ ಪುರುಷ ಮೆಹರಚಂದ ಮಹಾಜನ ಇವನು ಸೋಮವಾರ ರಾತ್ರಿ ಹೃದಯ ವಿಕಾರದಿಂದ ಮರಣ ಹೊಂದಿದನು. ಅವನ ಮರಣದಿಂದ ಯಾರಿಗಾದರೂ ದುಃಖವಾಗುವಂತಿದ್ದರೆ ಆಗಲಿ. ಆದರೆ ಒಬ್ಬ ಮರಾಠಿ ಭಾಷಿಕನಿಗೂ ಯಾವುದೇ ದುಃಖವಾಗಲಾರದು. ಲಕ್ಷಾವಧೀ ಮರಾಠಿ ಭಾಷಿಕರ ಬೈಗಳನ್ನೂ ಶಾಪಗಳನ್ನೂ ತಿಂದ ಮಹಾಜನನಿಗೆ, ಈ ತರಹದ ಅಕಸ್ಮಾತ್ ಮರಣ ಒದಗಿದ್ದು ಸಾಹಜಿಕವೇ ಆಗಿದೆ. ಈ ಮಹಾಜನ ಸೈತಾನನನ್ನು ಯಶವಂತರಾವ ಚವಾಣ ಹಾಗೂ ವಸಂತರಾವ್ ನಾಯಿಕ ಇವರು ಮಹಾರಾಷ್ಟ್ರದ ಕುತ್ತಿಗೆಯಮೇಲೆ ಕೂಡ್ರಿಸಿದ್ದರು. ಅವರಿಬ್ಬರೂ ಬೇಕಾದರೆ ತಮ್ಮ ಎದೆಯನ್ನು ಬಡೆದುಕೊಂಡು ತಮ್ಮ ದುಃಖವನ್ನು ತೋಡಿಕೊಳ್ಳಲಿ. ಪರಮೇಶ್ವರನು ನ್ಯಾಯಮೂರ್ತಿ ಮಹಾಜನನ ಆತ್ಮಕ್ಕೆ ಎಂದಿಗೂ ಶಾಂತಿಯನ್ನು ಕೊಡಲಾರನು.

ಮರಾಠಿ ಜನರಲ್ಲಿ ಎಷ್ಟು ಸೌಜನ್ಯ ಇದೆ ಎನ್ನುವುದು ಈ ಪತ್ರಿಕೆಯಿಂದ ಅರ್ಥವಾಗುತ್ತದೆ. ಮಹಾರಾಷ್ಟ್ರ ವಿಧಾನ ಸಭೆಯ ಒಬ್ಬ ಸದಸ್ಯರಾದ ಅತ್ರೆಯವರ ಸಂಪಾದಕತ್ವದಲ್ಲಿ ಈ ಪತ್ರಿಕೆ ಪ್ರಕಟವಾಗುತ್ತದೆ. ಸತ್ತಂಥವರ ಬಗ್ಗೆ ಶತ್ರು ಕೂಡ ಸಾಮಾನ್ಯವಾಗಿ ಕೆಟ್ಟ ಮಾತು ಆಡುವುದಿಲ್ಲ. ಇವರು ಇಂಥ ಕೆಟ್ಟ ಮಾತು ಆಡಿದ್ದಾರೆ.

Sri P. B. NANDIHALI (Uchagaon).—A point of order, Sir. The hon'ble Member is criticising the Marathi people as he likes. He has mentioned some version from some newspaper. I do not want to argue that it is not correct. But it may be the opinion of some person.

(SRI P. B. NANDIHALI)

Secondly, we have not got the version of it in this House. When a serious national loss took place by earthquake in Maharashtra, the Hon'ble Home Minister Sri Rama Rao stated in the Legislative Council that because some people blamed Mr. Mahajan, God has given punishment to the Maharashtrians by earthquake.

Sri A. R. PANCHAGAVI (Arabhavi).—Can any Member quote what has been spoken by a Member of the Council in the Council, here ?

Mr. SPEAKER.—All this is eating into the time available before us.

Sri P. B. NANDIHALI.—Yet we cannot appreciate it. I appeal to the hon'ble Chair, to look to the statement of Sri Nagaraj, and ask him to withdraw.

Mr. SPEAKER.—Now the point of Order has been reduced to an appeal. It is now for Sri Vatal Nagaraj to withdraw. He has appealed to the Member to withdraw it. I cannot give direction. Regarding the second point, Mr. Panchagavi was right in saying that whatever is stated in the sister wing of the Legislature, should not be referred to here. If it is only for the purpose of making some observations or to reinforce arguments, it is something. What is stated in the other House cannot be referred to here for offering remarks or for criticising it.

ಶ್ರೀ ವಾಟಾಳ್ ನಾಗರಾಜ್.—ಇನ್ನು ಹತ್ತು ನಿಮಿಷ ಕೊಡಿ, ಸ್ವಾಮಿ.

Mr. SPEAKER.—I am sorry I cannot give him any more time.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಟೈಂ ಲಿಮಿಟ್ ಪ್ರಕಾರ ನಡೆಯದೆ ಹೋದರೆ ಇನ್ನೂ ಮಾತನಾಡುವವರು ಬಹಳ ಇರುವುದರಿಂದ ತೊಂದರೆಯಾಗುತ್ತದೆ, ಸ್ವಾಮಿ.

Mr. SPEAKER.—His whip also agrees with me that I should not extend his time. Mr. Koujalgi will speak now.

ಶ್ರೀ ವಾಟಾಳ್ ನಾಗರಾಜ್.—ಇಷ್ಟೆಲ್ಲ ಇದರ ಹಿನ್ನೆಲೆ ಇದ್ದರೂ ನಮಗೆ ಬಹಳ ಚರಿತ್ರೆ ಇದೆ, ಇತಿಹಾಸವಿದೆ ಎಂದು ಮಾನ್ಯ ಕದಂ ಅವರು ಹೇಳಿದರು. ಕೇಂದ್ರದ ಗೃಹ ಮಂತ್ರಿಗಳು ಹೇಳು ತ್ತಾರೆ, ಇದಕ್ಕೆ ಒಂದು ರಾಷ್ಟ್ರೀಯ ಅಭಿಪ್ರಾಯವನ್ನು ಕೇಳಬೇಕು ಎಂದು. ಶ್ರೀ ವೈ. ಬಿ. ಚವಾಣ್ ಅವರಿಗೆ ಹೇಳುತ್ತೇನೆ, ಅವರಿಗೆ ಏನಾದರೂ ಧೈರ್ಯವಿದ್ದರೆ ರಾಷ್ಟ್ರೀಯ ಸರ್ಕಾರವನ್ನು ರಚನೆ ಮಾಡಲಿ, ಈ ಒಂದು ತೀರ್ಮಾನವನ್ನು ಕೈಗೊಳ್ಳಲಿ ಎಂದು ಹೇಳುತ್ತಿದ್ದೇನೆ.

Mr. SPEAKER.—I ask the Whip to use his good offices and help me to control this member. ಇಲ್ಲದೆ ಇದ್ದರೆ ಅದರ ಪ್ರತಿಫಲ ಏನಾದರೂ ಆಗಲಿ, ನನಗೇನು ? This is not the time to throw challenge.

ಶ್ರೀ ವಾಟಾಳ್ ನಾಗರಾಜ್.—ಅತಿ ಮುಖ್ಯವಾದ ಸಬ್ಜೆಕ್ಟ್. ನೀವು ಏಕೆ ಕೋಪಿಸಿಕೊಳ್ಳು ತ್ತಿದ್ದೀರಿ ಸ್ವಾಮಿ ? ಇದು ಬಹಳ ಮುಖ್ಯವಾದುದು.

Mr. SPEAKER.—The Member will control himself. Is he finding fault with the Chair ?

ಶ್ರೀ ವಾಟಾಳ್ ನಾಗರಾಜ್.—ತಾವು ಏಕೆ ಇಷ್ಟು ಕೋಪಿಸಿಕೊಳ್ಳುತ್ತಿದ್ದೀರಿ ?

Mr. SPEAKER.—He will kindly resume his seat. Order, order.

ಶ್ರೀ ವಾಟಾಳ್ ನಾಗರಾಜ್.—ಏನು ಸ್ವಾಮಿ, ಇಷ್ಟು ಕೋಪಿಸಿಕೊಂಡರೆ ನನಗೆ ಅರ್ಥ ವಾಗುವುದಿಲ್ಲ. ನಾವು ಮಾಡಿದ ಅಪರಾಧವೇನು ಸ್ವಾಮಿ ?

Mr. SPEAKER.—When I am on my legs, the Member must know that he must sit. Either he will concede or retire from the House.

ಶ್ರೀ ವಾಟಾಳ್ ನಾಗರಾಜ್.—ನನ್ನ ಅಭಿಪ್ರಾಯವನ್ನು ತಿಳಿಸಲು ಬಹಳ ವಿಷಯಗಳನ್ನು ಸಂಗ್ರಹ ಮಾಡಿದ್ದೇನೆ ಸ್ವಾಮಿ......

Mr. SPEAKER.—The Member will retire from the House.

ಶ್ರೀ ವಾಟಾಳ್ ನಾಗರಾಜ್.—ನಾನು ಈ ವರದಿಯ ಬಗ್ಗೆ ಇನ್ನೂ ಮಾತನಾಡಬೇಕಾಗಿದೆ, ಸ್ವಾಮಿ.

Mr. SPEAKER.—Mr. Koujalagi, will kindly commence his speech.

Sri H. V. KOUJALGI (Parasgad).—Mr. Speaker Sir, before I make my observations.........

Mr. SPEAKER.—The Whips may co-ordinate. What is wanted is, if the Whips feel that a particular member has made a special study of a subject, they can accommodate him. But I cannot tolerate this kind of remark.

ಶ್ರೀ ವಾಟಾಳ್ ನಾಗರಾಜ್.—ಈ ನೀತಿಯನ್ನು ವಿರೋಧಿಸಿ ನಾನು ವಾಕ್ ಔಟ್ ಮಾಡುತ್ತಿದ್ದೇನೆ. ಇದು ನನ್ನ ಸಬ್ಜೆಕ್ಟ್. ಗಡಿ ಬಗ್ಗೆ ಮಾತನಾಡಬೇಕಾದ್ದು ಬಹಳವಿದೆ. ಆದ್ದರಿಂದ ನನಗೆ ಬಹಳ ವ್ಯಥೆಯಾಗುತ್ತಿದೆ. ಇಡೀ ಕನ್ನಡಿಗರ ಪರವಾಗಿ ನಾನು ಸಭೆಯಿಂದ ಹೊರಗೆ ಹೋಗುತ್ತಿದ್ದೇನೆ.

(*Sri Vatal Nagaraj left the House*).

Mr. SPEAKER.—I asked him to retire because of his disobedience to the direction of the Chair persistently. Is that the way to maintain discipline ? Is that courtesy, good behaviour and decorum ? Is that the way to maintain discipline in the House ? Should there not be a limit ? Expressions are carried to the extreme and ridiculous extent. After all, there must be respect for the House. Ventiliation of ideas in that fashion and using that kind of language is not absolutely conducive to the dignity of the House. He has been given 15 minutes. He was called upon at 12 noon. It is now 12.25 P.M. Either the Whips will put time limit and adhere to it by persuading the Members or not put it at all. When I am trying to co-ordinate, more time is spent in throwing challenges to the Home Minister. Is that a part of the debate here ? I would appeal again to the Members to adhere to the time limit.

Sri H. V. KOUJALGI.—Since it is already 12-30 P. M. and we are likely to adjourn, I may be permitted to speak when we reassemble again for the day.

Mr. SPEAKER.—I am prepared to sit. Let the House extend the time. Is the House adjourning at 12-30 P. M. or do we sit for some more time and finish the work ?

Sri B. D. JATTI (Minister for Food and Civil Supplies).—Since the Hon'ble Members are interested in speaking, we can sit up to one O'Clock.

† **Sri H. V. KOUJALGI.**—Mr. Speaker, Sir, Before I make my observations on this Report, I want to say that this Report should be accepted *in toto* as it is given by an impartial and eminent Jurist, knowing fully well that it is not entirely to our satisfaction.

12-30 P.M.

The object to end the dispute once for all. As soon as the report was released I thought the Maharashtrian leaders would accept it because it was at their instance the Commission was appointed. Before the Commission was appointed, though the Maharashtra Eikarana Samity people were agitating for the last 10 years, they had come to the conclusion to stop the agitation and end the matter. If the A. I. C. C. had not met in Bombay in 1966, I am sure this Commission would not have been appointed. There, they made a show of bringing Sri Senapati Bapat and made him to fast and forced the Prime Minister to appoint a Commission. After the Commission was appointed every Maharashtrian including the Chief Minister was jubilant. Of course they have to express their satisfaction and they said that this problem would be solved once for all and to the satisfaction of all. Yesterday one of the hon'ble members Sri B. P. Kadam said that Sri Mahajan was not the proper person because he was against linguistic States and he criticised the report on other grounds as well. If Sri Mahajan was not the proper person, the proper time to take objection was when it was announced. On the other hand he was considered to be one of the eminent judges and Chief Justices of the Supreme Court and that is why his name was accepted by one and all. On the other hand, Mysore was not in favour of accepting the Commission. It is well known that Karnataka people including the leaders expressed their dissatisfaction at the appointment of the Commission; there were demonstrations and strikes in almost all the states and even in the villages. But when our elders said to end the matter once for all let us abide by the decision and accept the verdict of the commission, we all agreed. But, what have Maharashtrians done? They have now challenged the report. They submitted to the Commission memoranda, led evidence, engaged eminent advocates and put forward their case very ably and when the report was out, of course, they found Belgaum was not coming to them, they began to go behind their words. That is most unfair. It was said that Mahajan simply stayed in his bungalow and did not go to interior. I am sorry. I was one of the persons who moved with him. He not only went interior but he gave surprise visits to villages, into towns and into the lanes and streets of several places and he had his own informal enquiry by putting questions to villagers in their unguarded moments. He went with some officers without the people knowing he was coming. When that is so, how is it that these people including the Central and top leaders and the Chief Minister of Maharashtra say that this report is full of contradictions, illogical and all that? Such responsible people who are at the helm of affairs, and who have to look to the interests of the whole State

have become so parochial minded and interested in the expansionist policy. They think that by agitating they would gain anything and everything. If Belgaum had been given to Maharashtra these people would have praised Mahajan. Simply because it is not given to them, they are condemning the report.

(MR. DEPUTY SPEAKER in the Chair)

Why was not Belgaum recommended for Maharashtra? The Judge has given an elaborate reasoning and he has discussed it at length. So many Committees and commissions have been appointed in these last 20 years and on all those occasions it has been decided that Belgaum is part of Karnatak and cannot be claimed by Maharashtra. In spite of all this they say they want Belgaum and it is part of Maharashtra. I want to tell them that Belgaum can never be claimed for Maharashtra. The unfortunate thing is, on each occasion they asked the Commission or the Committee to tackle the question of Belgaum, they adduced different criteria. Before the States Reorganisation Commission their case was different. They said bare majority should be applied because accordidg to the 1951 census it was favourable to them. Now they ask for relative majority. So they are changing their stand from time to time and there is no consistency in what they say. Sri Y. B. Chavan says he will take the consensus of leaders or even a poll may be held. This is quite contradictory. When they submitted the question to the Commission, its words should be accepted and now they cannot go against it. Even in the case of Goa they said that it should be merged immediately in spite of the promise given to them at the time of the independence. They insisted for poll and it was taken and the verdict went against them. It has been reported in the papers that the Chief Minister of Goa has said that the verdict is not binding on them and whatever resolution that has taken place in the House will have to be taken into consideration. So, if the verdict or decision goes against them, they do not accept it. If it is in their favour, they praise it. This is their tendency. They think that by agitating, making hue and cry or creating trouble, they would get something because they were successful in getting Bombay. It has encouraged them and unfortunately the top leaders also are encouraging them. I come from Belgaum District and I know every village in Khanapur and Chikodi and most of the Maharashtrians are my good friends and I know them very well. So far as these are concerned the people or the common man is not at all concerned with the agitation. Unfortunately it is the people coming from outside and a handful of politicians that want to keep this agitation alive. I say that if this commission had not been appointed, this Belgaum problem would have been solved long back. Simply because outsiders help them and got this commission appointed, they have some encouragement. I am sure these people are quite happy with where they are. If we go to the villages and talk to them, they say that they are quite happy. Before 1956 Belgaum District was part of Bombay State.

(SRI H. V. KOUJALGI)

In Bombay State the Kannada people were in a minority and their voice was not heard at all. The Belgaum City proper was so backward that even supply of water or expansion of hospital was not cared for. The present Home Minister at the Centre was the Minister for Local Self-Government there and when we placed this problem before him and the then government they were not caring for the improvement or development of Belgaum and city. Their attitude was that one day or the other it will go to Karnatak and why they should spend money.

Sri B. P. KADAM.—Was Sri Y. B. Chavan independent to grant any scheme or whether it is the Government of Bombay that should grant?

Sri H. V. KOUJALGI.—He was part of the Government and his voice was effective. He did not care for the city because he thought that it is a part of Karnatak and the advantage would go to Karnatak. After integration what are the conditions in Belgaum District and Khanapur? During these 10 years so many developmental works have been started and it has become altogether a new city and the whole atmosphere is changed. That is why I say the common man is satisfied and wants to be there only. As I said earlier it is the outsiders especially the politicians of Bombay and Poona calling themselves as Maharashtra Ekikarana Samithi for their own political ends, are agitating. With that object in view they are creating trouble here.

Yesterday Sri Kadam stated that during these 10 years agitation is going on and even elections were fought out on this basis. I tell him: he fought elections in 19..6. Why did he lose? Elections were not fought on that basis. This time from Belgaum rural Sri Pattanshetty came in the place of Sri Somji. This time in the same constituency a Kannada man is elected. More than half the villages are Kannada speaking and they have voted a Maharashtrian because he is the local man and not on other considerations. So, the report though it is not in our favour in some respects—because we are losing a very valuable part of tobacco growing area, forest area, and a rich paddy growing area—we are still agreeing. But unfortunately the Maharashtrian people are saying that Mysore has got everything? What have we got we have got barren lands like Akkalkot and Jath. In fact we are the losers. But, somehow or other, taking language as main consideration the Commission has come to its conclusion. Since this report is given by an impartial and eminent judge and since we have agreed to abide by it though not openly said but indirectly that was the understanding, we should accept it in the interest of the nation and oneness of the country. I know that all these Maharashtrians are good people and they are also interested in the oneness of the country. In their own interest they should accept the report. I know if they go to Maharashtra they will be nowhere; at least here their voice will be heard and I know in the heart of hearts they do not want to go. It is better they accept the report.

Sri G. CHANDRAKANTH (Bidar).—Sir, I rise to make a few observations on the motion moved by the Hon'ble Minister for Food and Civil Supplies with regard to the Mahajan Commission Report on Mysore-Maharashtra boundary disputes and Mysore Kerala boundary disputes. Many Hon'ble Members from this side as well as from that side have spoken at great length and therefore I do not wish to take much of the precious time of the House and I shall restrict myself to the District of Bidar alone.

Bidar is also a disputed area wherein they have claimed about 146 villages—28 from Humnabad Taluka, 49 from Bhalki and 69 from Santpur. The total population of this disputed area comes to 1,16,000 and the total area to about 510 acres. Before they claim this area, they would remember that a unanimous resolution was passed in the Hyderabad Legislature to which they were a party, and still today they are raising the problem again and again. The people in the villages claimed by them are quite happy where they are now. As we are all aware, Bidar District formed a district in the erstwhile Hyderabad State. Then it consisted of 9 taluks and after the trifurcation of Hyderabad, Bidar came to be formed as a part of Mysore State. When Hyderabad was trifurcated, Bidar was also trifurcated. Three of the taluks of Bidar went to Maharashtra and Telangana and the remaining four taluks came to the Mysore State. Then, the elected representatives of Bidar District consisting of the representatives of the Marathawada areas, Telengana and Karnatak have unanimously resolved that Bidar should continue as a district with Bidar as the headquarters and this unanimous resolution was further sent to Parliament where it was approved and passed without any dissenting voice. This unanimous resolution was referred to the Parliament by the then Chief Minister of Hyderabad Sri B. Ramakrishna Rao and then the Union Home Minister G. B. Pant. Even after this unanimous resolution was passed by the Parliament, these leaders in furtherence of their interest continued the agitation only with the intention of keeping the problem alive and they were thus getting the people agitated for nothing. Mr. Mahajan who was entrusted with this job of giving a verdict with regard to this border dispute has very rightly dealt with the problem. He has not followed the guidelines set by the Four-Man Commission. Bare language alone cannot be considered while dealing with this problem. We have also got to look to geographical contiguity, economic considerations and other factors that are essential and particularly with regard to Bidar District he has been very kind enough to follow the guidelines that have been set and there has been little deviation. Therefore, in the interest of the people, in the interest of the country and in the interest of keeping the unity of the country, it is high time they accepted the Mahajan Commission Report, without any further agitation.

Sri V. P. Naik, the Chief Minister of Maharashtra, while talking to pressmen on September 14, 1967 in Bombay said:

"This point was not officially made public at the time of the appointment of the Commission for the simple reason that

(SRI G. CHANDRAKANTH)

> constitutionally it is Parliament which takes final decision on such issues. Copies of the Mahajan Report have not reached us so far. However, whatever the recommendations might be, they are binding on us."

So, well in advance of the copies of Mahajan Commission Report being available, he was prepared to accept it and he said that whatever the recommendations might be, they are binding on them. So, there is hardly any room for not accepting this report. Therefore, in the interest of the people it is high time that they accepted it. I would therefore once again appeal to the members of the M.E.S. to accept this report and put an end to the problem once for all. Thank you.

MR. DEPUTY SPEAKER.—The House will now adjourn to meet again at 3 P.M.

The House rose at One of the Clock to re-assemble at Three of the Clock.

The House re-assembled at Five Minutes past Three of the Clock.

[MR. SPEAKER in the Chair]

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ : ಮೈಸೂರು ಮಹಾರಾಷ್ಟ್ರಗಳ ಗಡೀ ವಿಚಾರದಲ್ಲಿ ಮಹಾಜನ್ ಸಮಿತಿಯು ಒಪ್ಪಿಸಿರತಕ್ಕ ವರದಿಯನ್ನು ನಾನು ಒಟ್ಟಾರೆ ಸ್ವಾಗತಿಸುತ್ತೇನೆ. ಆದರೆ ಈ ಮಹಾಜನ್ ಸಮಿತಿಯ ವರದಿಯು ನಮಗೇಕೆ ಬರಬೇಕಾಗಿತ್ತೋ ಅದು ನನಗೆ ತಿಳಿಯದಾಗಿದೆ. ಏತಕ್ಕೆಂದರೆ ಬೆಳಗಾಂ ಮತ್ತು ಇನ್ನಿತರೇ ಭಾಗಗಳು ಮೊದಲಿಂದಲೂ ಕರ್ಣಾಟಕದ ಭಾಗಗಳೇ ಆಗಿದ್ದು ಅವು ನಮ್ಮಲ್ಲೇ ಇದ್ದಾಗ್ಯೂ ಮಹಾರಾಷ್ಟ್ರ ಏಕೀಕರಣ ಸಮಿತಿಯವರೂ ಇನ್ನಿತರೇ ಮಹಾರಾಷ್ಟ್ರೀಯರೂ ಏಕೆ ಹಟಸಾಧನೆ ಮಾಡುವುದಕ್ಕೆ ಹೊರಟರೋ ಅದನ್ನು ಹೇಳುವುದಕ್ಕೇ ಬರುವುದಿಲ್ಲ. ಮಹಾಜನ್ ಸಮಿತಿಯವರಾದರೂ ನಾಡಿನ ಎಲ್ಲಾ ಭಾಗಗಳಲ್ಲೂ ಸುತ್ತಾಡಿ, ಗಡೀ ಸರಹದ್ದಿನಲ್ಲೂ ತಿರುಗಾಡಿ ಸಂಪೂರ್ಣ ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಇನ್ನುಳಿದ ಇತರೇ ಮಹಾರಾಷ್ಟ್ರದ ಎಲ್ಲಾ ಮುಖಂಡರುಗಳನ್ನೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನೂ ಹಾಗೂ ಕರ್ಣಾಟಕದ ಮುಖ್ಯಮಂತ್ರಿಗಳನ್ನೂ ಮತ್ತು ಕರ್ಣಾಟಕದ ಮುಖಂಡರುಗಳನ್ನೂ ಭೇಟಿಮಾಡಿ ಅನೇಕ ಸಂಘ ಸಂಸ್ಥೆಗಳನ್ನೂ ಭೇಟಿಮಾಡಿ ಹಾಗೂ ಜನಸಾಮಾನ್ಯರ ಅಭಿಪ್ರಾಯಗಳೇನೆಂಬುದನ್ನು ಗ್ರಹಿಸಿ ಅವರು ಕೊನೆಗೊಂದು ನಿರ್ಣಯಕ್ಕೆ ಬಂದಿದ್ದಾರೆ. ಅವರ ವರದಿಯಲ್ಲಿ ಹೇಳಿರುವಂತೆ ಅವರು ಸುಮಾರು 2,240 ಮೆಮೋರಾಂಡಂಗಳನ್ನು ಸ್ವೀಕರಿಸಿದ್ದಾರೆ, 7,572 ಜನರನ್ನು ಒಂಟೊಂಟಿಯಾಗಿಯೂ ಮತ್ತು ಸಾಮೂಹಿಕವಾಗಿಯೂ ಭೇಟಿಮಾಡಿದ್ದಾರೆ. ಇಷ್ಟೆಲ್ಲಾ ಅವರು ತಿರುಗಾಡಿ ಪ್ರವಾಸ ಮಾಡಿ ಜನರನ್ನು ಭೇಟಿಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದನ್ನು ನಮ್ಮ ಮುಖ್ಯಮಂತ್ರಿಗಳಾದರೂ ಏತಕ್ಕೆ ಒಪ್ಪಬೇಕೆಂದು ಹೇಳಿದರೆಂದರೆ—ಹೀಗೆ ನಾವು ಮೇಲಿಂದ ಮೇಲೆ ಕಿತ್ತಾಡುತ್ತಾ ಇದ್ದರೆ ದೇಶದಲ್ಲಿ ಹಾಗೂ ರಾಷ್ಟ್ರದಲ್ಲಿ ಜನರ ಸೌಹಾರ್ದ ಭಾವನೆಗಳು, ಬಾಂಧವ್ಯಗಳು ಕಲಕುತ್ತವೆ, ಆದ್ದರಿಂದ ಅಕ್ಕಪಕ್ಕದ ನಮ್ಮ ಸಹೋದರರಲ್ಲಿ ಅವರ ನಮ್ಮ ಬಾಂಧವಗಳು ಉತ್ತಮ ರೀತಿಯಲ್ಲಿರುವಂತೆ ಆಗಲೆಂದು ಇದನ್ನು ಒಪ್ಪಬೇಕೆಂದು ಹೇಳಿದ್ದಾರೆ. ಆದರೆ ಅವರು ಇದರಿಂದ ಕರ್ಣಾಟಕಕ್ಕೆ ಲಾಭವಾಗಿದೆ ಎಂದೇನೂ ಇದನ್ನು ಒಪ್ಪಿರುವುದಿಲ್ಲ. ಹಾಗೆ ನೋಡುವುದಾದರೆ ಈ ವರದಿಯಿಂದ ನಮ್ಮ ಕರ್ಣಾಟಕಕ್ಕೆ ಬಹಳ

ನಷ್ಟವಾಗಿದೆ. ಒಳ್ಳೆಯ ಫಲವತ್ತಾದ ಕಬ್ಬು, ತಂಬಾಕ ಮತ್ತು ಜೋಳ ಬೆಳೆಯತಕ್ಕ ಪ್ರದೇಶ ವಾದ ನಿಪ್ಪಾಣಿ ಮತ್ತು ಅಪಾರ ಅರಣ್ಯ ಸಂಪತ್ತಿನಿಂದ ಕೂಡಿರತಕ್ಕ ಖಾನಾಪುರ ಹಾಗೂ ಬತ್ತದ ಕಣಜವಾಗಿದ್ದ 152 ಹಳ್ಳಿಗಳು ಹೋಗುತ್ತಿರುವುದರಿಂದ ಕರ್ನಾಟಕಕ್ಕೆ ಬಹಳ ನಷ್ಟವಾಗಿದೆ. ಖಾನಾಪುರದಿಂದ ಸಾಕಷ್ಟು ಬತ್ತ ಕೊಡುತ್ತಿದ್ದರು ಮತ್ತು ನಮ್ಮಲ್ಲಿ ಸಾಕಷ್ಟು ಮಳೆ ಕೂಡ ಆಗುವುದರಿಂದ ಇಲ್ಲಿ ಬತ್ತ ಕಬ್ಬು ಇತ್ಯಾದಿಗಳನ್ನು ಬೆಳೆಯುವಂತಹ ಫಲವತ್ತಾದ ಭಾಗಗಳನ್ನು ಈಗ ನಾವು ಕಳೆದುಕೊಳ್ಳಬೇಕಾಗಿದೆ. ಇಂತಹ ಕನ್ನಡದ ಭಾಗಗಳನ್ನು ಯಾವ ಕನ್ನಡಿಗನೂ ಬಿಟ್ಟುಕೊಡಲು ಒಪ್ಪಲಾರರು. ಬೆಳಗಾವಿಗೆ ಪಶ್ಚಿಮದಲ್ಲಿ 52 ಹಳ್ಳಿಗಳನ್ನು ಕಳೆದುಕೊಳ್ಳ ಬೇಕಾಗಿದೆ. ಈ ಭಾಗಗಳಲ್ಲಿ ಬಹು ಫಲವತ್ತಾದ ಭಾಗಗಳು ಇವೆ. ಇಲ್ಲಿ ಬತ್ತ, ಕಬ್ಬು ಬಟಾಟೆ ಇತ್ಯಾದಿ ಬೆಳೆಯುವಂತಹ ಉತ್ತಮವಾದ ಪ್ರದೇಶಗಳು ನಮ್ಮ ಕರ್ನಾಟಕವಲ್ಲದ್ದುದನ್ನು ಈಗ ಕಳೆದುಕೊಳ್ಳಬೇಕಾಗಿದೆ. ಇವೆಲ್ಲ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಹಿಂದೆ ಎಸ್.ಆರ್.ಸಿ. ರಿಪೋರ್ಟು ಬಂದಾಗ ಮಾಡಿರಲಿಲ್ಲ. ಆದರೆ ಇಂದು ಈ ಕಮಿಷನ್ನಿನವರು ಬಂದಾಗ ಇದನ್ನೆಲ್ಲಾ ಪುನಃ ವಿಚಾರ ಮಾಡಿ ಈ ರೀತಿಯಾಗಿದೆ. ಅದರಲ್ಲೂ ನಮ್ಮ ಭಾಗದಲ್ಲಿ ನೂರಕ್ಕೆ ಎಪ್ಪತ್ತು ಭಾಗ ಜನರು ಕನ್ನಡ ಮಾತಾಡುವವರು ಇದ್ದರೂ ಖಾನಾಪುರದಲ್ಲಿ ಶೇಕಡ 50ಕ್ಕಿಂತ ಹೆಚ್ಚು ಇದೆ ಎಂದು ಮತ್ತು ನಿಪ್ಪಾಣಿಯಲ್ಲಿ ಕಡಿಮೆ ಜನ ಇದ್ದಾರೆ ಎಂದು ಹೀಗೆ ಮಾಡಿದ್ದಾರೆ. ಬೆಳಗಾಂನಲ್ಲಿ ಇರುವವರಲ್ಲಿ ಮರಾಠಿ ಮಾತಾಡುವವರ ಸಂಖ್ಯೆ ಕಡಿಮೆ ಇದೆ ಎಂದು ಅದನ್ನು ಈಗ ಕರ್ನಾಟಕದಲ್ಲಿ ಇಟ್ಟಿದ್ದಾರೆ. ಆದರೆ ಇದರಲ್ಲಿ ಏನಾಗಿದೆ ಎಂದರೆ, ಬೆಳಗಾವಿಗೆ ಪಶ್ಚಿಮದಲ್ಲಿರುವ ಖಾನಾಪುರ ಹಾಗೂ ನಿಪ್ಪಾಣಿ ಇವುಗಳನ್ನು ಮತ್ತು ಇನ್ನೂ ಕೆಲವು ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಕೊಡ ಬೇಕೆಂದು ಈ ಕಮಿಷನ್ನಿನವರು ಮಾಡಿದ್ದಾರೆ. ಇದರಿಂದ ಮಹಾರಾಷ್ಟ್ರದವರಿಗೆ ಬೆಳಗಾಂ ನಮಗೇಕೆ ಕೊಡಲಿಲ್ಲ ಎನ್ನುವ ಶಂಕೆ ಇವರಿಗೆ ಬಂದಿದೆ. ಅಲ್ಲದೆ ಬೆಳಗಾಮಿನಲ್ಲಿರುವ ಜನತೆಯೂ ಕೂಡ ಮಹಾರಾಷ್ಟ್ರದಲ್ಲಿರುವುದಕ್ಕೆ ಇಷ್ಟಪಡುತ್ತಿಲ್ಲ. ಮಹಾರಾಷ್ಟ್ರದಲ್ಲಿರುವ ಕೆಲವರು ಸಮಿತಿ ಎಂದು ಮಾಡಿಕೊಂಡು ಕಾಂಗ್ರೆಸ್ಸಿನವರನ್ನು ನಿರ್ಮೂಲ ಮಾಡಿ ತಾವು ನಂತರ ಅಧಿಕಾರ ಪಡೆಯ ಬೇಕೆಂಬ ಹಂಬಲ ಇಟ್ಟುಕೊಂಡು ಈ ರೀತಿಯಾಗಿ ಮಹಾರಾಷ್ಟ್ರ ಸಮಿತಿ ಎಂದು ಮಾಡಿಕೊಂಡು ಬರುತ್ತಿದ್ದಾರೆ. ವಾಸ್ತವವಾಗಿ ಈ ಸಮಿತಿಯವರು ಕಾಂಗೆಸ್ ಪರವಾಗಿ ಇಲ್ಲ ಎನ್ನುವುದು ಅವರು ಮಾಡುತ್ತಿರುವ ಗಲಭೆಗಳಿಂದಲೇ ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ. ಇವರ ಉದ್ದೇಶ ಕಾಂಗ್ರೆಸ್‌ನ್ನು ನಿರ್ನಾಮ ಮಾಡಿ ಅಧಿಕಾರವನ್ನು ಹೇಗಾದರೂ ಪಡೆಯಬೇಕೆಂಬ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರದಲ್ಲಿರುವ ಗೃಹಮಂತ್ರಿಗಳೇ ಆಗಲೀ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ನಾಯಕರೇ ಆಗಲೀ ಅಥವಾ ಇನ್ನಾವ ಕಾಂಗ್ರೆಸ್ ಧುರೀಣರೇ ಆಗಲೀ ಮಹಾರಾಷ್ಟ್ರದ ಸಮಿತಿಯವರು ಮಾಡುತ್ತಿರುವ ಪ್ರಚಾರಗಳು ಹುರುಳಿಲ್ಲದವುಗಳು ಎಂದು ತಿಳಿದಿದ್ದಾರೆ. ಸಂಪೂರ್ಣ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಗೋವಾದಲ್ಲಿ ಯಾವ ರೀತಿಯಾಗಿ ಅಪಪ್ರಚಾರ ಮಾಡಿದರು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ವಾಸ್ತವ ವಾಗಿ ನೋಡಿದರೆ ಏನಾಕಾರಣ ಈ ಸಮಿತಿಯವರು ಇಲ್ಲದ ಗೊಂದಲಗಳನ್ನು ಎಬ್ಬಿಸುತ್ತಿದ್ದಾರೆ. ಕೇಂದ್ರದ ಗೃಹಮಂತ್ರಿಗಳು ಈಚೆಗೆ ಒಂದು ಸಂದರ್ಭದಲ್ಲಿ ಸಾಂಗ್ಲಿಗೆ ಖಾಸಗಿ ಕೆಲಸದ ಮೇಲೆ ಬಂದಿದ್ದಾಗ ಅವರು ಏನು ಹೇಳಿದರು ಎಂದರೆ, ಮರಾಠಿಗರು ಕನ್ನಡಿಗರನ್ನು ಸುಮ್ಮ ಸುಮ್ಮನೆ ಬಗ್ಗಿಸುವುದಕ್ಕೆ ಸಾಧ್ಯವಿಲ್ಲ. ಇವರುಗಳನ್ನು ಕಾನೂನಿಗೆ ಅನ್ವಯಿಸಿ ಒಪ್ಪಿಸಬೇಕೇ ಹೊರತು ಈ ರೀತಿ ಘೆರಾವೋಗಳನ್ನು ಮಾಡಿದರೆ ಯಾರೂ ಸಹಿಸುವುದಿಲ್ಲ ಮತ್ತು ಮಹಾರಾಷ್ಟ್ರದವರ ಉದ್ದೇಶ ಸಫಲವಾಗುವುದಿಲ್ಲ ಎಂತಲೂ ಹೇಳಿದರು. ಈ ರೀತಿ ಮಾಡುವುದರಿಂದ ಕಾಂಗ್ರೆಸ್ ಸಂಸ್ಥೆಯನ್ನು ನಿರ್ಮೂಲ ಮಾಡಿ ಈಗ ದೇಶದಲ್ಲಿ ಅಲ್ಲಲ್ಲಿ ವಿರೋಧ ಪಕ್ಷಗಳವರ ಸರಕಾರಗಳು ಕೆಲವು ರಾಜ್ಯಗಳಲ್ಲಿ ಬಂದಿವೆ. ಅದರಂತೆ ಈ ಗುರಿ ಇಟ್ಟುಕೊಂಡು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಈ ರೀತಿ ಒತ್ತಾಯ ತರುತ್ತಿದ್ದಾರೆ. ಈ ಸಮಿತಿಯ ಮುಖಂಡರಾದ ಶ್ರೀ ಬೇಡೇಯವರು ಹಾಗೂ ವಿರೋಧ ಪಕ್ಷದ ನಾಯಕರಾದ ಧುಲಪ್‌ರವರು ಇಲ್ಲದ ಚಳುವಳಿಗಳನ್ನು ಮಾಡಬೇಕೆಂದು ಇಂತಹ ಒಂದು ನಾಟಕವನ್ನು ಮಾಡುತ್ತಿದ್ದಾರೆ. ಇದು ಬರೀ ನಾಟಕವಲ್ಲದೇ ಬೇರೇನಲ್ಲ. ಇಂತಹವರು ಮಾಡುವ ಮಹಾರಾಷ್ಟ್ರದ ನಾಟಕಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮೊದಲಿಗೇನೇ ಒನ್ ಮ್ಯಾನ್ ಕಮಿಷನ್ ಬೇಡ ಎಂದು ಹೇಳಿದ್ದರು. ಆದರೂ ಗಡಿ ಹೊಂದಾಣಿಕೆ ಮಾಡಲೇಬೇಕು ಈ ಹೊಂದಾಣಿಕೆ ಯಾಗದಿದ್ದರೆ ಸರಿಯಾಗಿರುವುದಿಲ್ಲ ಎಂದು ಆಗ ಇದ್ದ ಪ್ರಧಾನ ಮಂತ್ರಿಗಳು ನಮ್ಮ ಮುಖ್ಯ ಮಂತ್ರಿ ಗಳನ್ನು ಬಹಳ ಒತ್ತಾಯದಿಂದ ಒಪ್ಪಿಸಿ ಈ ಕಮಿಷನ್ನಿನವರ ತೀರ್ಪನ್ನು ಇಷ್ಟರೂ ಏನಾದರೂ ಆಗಲಿ ಒಪ್ಪಲೇಬೇಕು ಎಂದು ಹೇಳಿದ್ದರು. ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಬಹಳ ಕಷ್ಟಪಟ್ಟು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪದೇ ಇದ್ದರೂ ಒಪ್ಪಿಸ ಬೇಕಾಗಿ ಬಂತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಅವರು ಮೊದಲಿಂದಲೂ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಆಯೋಗಕ್ಕೆ ಒಪ್ಪುವುದಿಲ್ಲ ಎಂದು ಇದ್ದರೂ ಕೊನೆಯ ಗಳಿಗೆಯಲ್ಲಿ ಒಪ್ಪಬೇಕಾಗಿ ಬಂತು. ಆಗಲೇ ನಮ್ಮ ಮುಖ್ಯ ಮಂತ್ರಿಗಳು ಮಹಾಜನ್ ವರದಿ ಏನೇ ಬರಲಿ ಅವರೇನೇ ಹೇಳಲಿ ಅದರಿಂದ ಅನುಕೂಲವೇ ಆಗಲಿ ಪ್ರತಿಕೂಲವೇ ಆಗಲಿ ಅದನ್ನು ಒಂದು ತತ್ವದ ದೃಷ್ಟಿಯಿಂದ ಎಲ್ಲರೂ ಒಪ್ಪಬೇಕೆಂದು ಹೇಳಿದ್ದರು. ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದಂತಹ ಶ್ರೀಮಾನ್ ಮಹಾಜನ್‌ರವರು ಈಗ ಕೊಟ್ಟಿರುವಂತಹ ತೀರ್ಪನ್ನು ಎಲ್ಲರೂ ಒಪ್ಪಬೇಕು. ಆದರೆ ಈ ಮಹಾಜನ್ ತೀರ್ಪಿನ ವಿರುದ್ಧ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತಿದ್ದಾರೆ. ಆದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಈ ರೀತಿ ಈಗ ವಿರೋಧ, ಮಾಡುವದು ಸರಿಯಿಲ್ಲ ಮತ್ತು ಯಾವ ರೀತಿಯಾಗಿ ಮಹಾಜನ್ ವರದಿ ಬಂದಿದೆಯೋ ಅದು ಸರಿಯೋ ತಪ್ಪೋ ಹೇಗಿದ್ದರೂ ಸರಿ ಅದನ್ನು ಪೂರ್ತಿಯಾಗಿ ಒಪ್ಪಬೇಕೆಂದು ಪದೇ ಪದೇ ಹೇಳುತ್ತಲೇ ಬರುತ್ತಿದ್ದಾರೆ.

ಈ ತೀರ್ಪಿನಂತೆ ನೋಡುವುದಾದರೆ ಸಾಕಷ್ಟು ಪ್ರದೇಶಗಳು ನಮ್ಮ ರಾಜ್ಯದಿಂದ ಹೊರಕ್ಕೆ ಹೋಗುತ್ತವೆ. ಅದರಲ್ಲೂ ಬಹು ಮುಖ್ಯ ಪ್ರದೇಶಗಳಾದ ಖಾನಾಪುರ ಹಾಗೂ ತಂಬಾಕು ಬೆಳೆಯುವಂತಹ ಉತ್ತಮ ಭಾಗಗಳು ಅದರಲ್ಲೂ ಸುಮಾರು ಮೂರು ಕೋಟಿಯಷ್ಟು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಕೊಡತಕ್ಕಂತಹ ನಿಪ್ಪಾಣಿ ಕೂಡ ಈಗ ಮಹಾರಾಷ್ಟ್ರದವರಿಗೆ ಕೊಡಬೇಕೆಂದು ಇದರಲ್ಲಿ ಹೇಳಲಾಗಿದೆ. ಹೇಗಾದರೂ ಇರಲಿ ಇದನ್ನು ಒಪ್ಪಬೇಕು ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ಈಗ ಮಹಾರಾಷ್ಟ್ರದವರು ಇದನ್ನು ವಿರೋಧ ಮಾಡಬೇಕೆಂದು ಹೇಳುವುದು ಎಷ್ಟು ಮಾತ್ರಕ್ಕೂ ಸರಿಯಿಲ್ಲ. ಶ್ರೀ ಮಹಜನ್‌ರವರು ತಮ್ಮ ವರದಿಯಲ್ಲೇ ಹೇಳಿದ್ದಾರೆ ಬೆಳಗಾಂ ನಗರ ಕರ್ಣಾಟಕದಲ್ಲಿ ಏಕೆ ಇರಬೇಕು ಎನ್ನುವುದಕ್ಕೆ ಕಾರಣಗಳನ್ನೂ ಕೊಟ್ಟಿದ್ದಾರೆ. ಅವರೇ ಹೇಳಿರುವಂತೆ 1961ರ ಗಣತಿಯ ಪ್ರಕಾರ ಬೆಳಗಾಂನಲ್ಲಿ ಮರಾಠಿಗಳ ಸಂಖ್ಯೆ ಬಹಳ ಕಡಿಮೆ ಇದೆ ಮತ್ತು ಕನ್ನಡಿಗರ ಸಂಖ್ಯೆ ಹೆಚ್ಚಾಗಿದೆ ಎಂದರೆ ನೂರಕ್ಕೆ 46 ರಷ್ಟು ಮರಾಠಿಗರು ಇದ್ದಾರೆ ಮತ್ತು ನೂರಕ್ಕೆ 56 ರಷ್ಟು ಜನ ಕನ್ನಡಿಗರು ಇದ್ದಾರೆ ಎಂದು ಕನ್ನಡಿಗರೇ ಹೆಚ್ಚಾಗಿರುವುದರಿಂದ ಬೆಳಗಾಂ ಕರ್ಣಾಟಕದಲ್ಲೇ ಇರಬೇಕೆಂದು ಮಹಜನ್‌ರವರು ಅವರ ವರದಿಯಲ್ಲಿ ಹೇಳಿದ್ದಾರೆ. ಬೆಳಗಾಂನಲ್ಲಿ ಸುಮಾರು ಒಂದು ಲಕ್ಷದ ಎಪ್ಪತ್ತೆರಡು ಸಾವಿರದಷ್ಟು ಜನಸಂಖ್ಯೆ ಇದೆ. ಇದರಲ್ಲಿ ಸುಮಾರು ತೊಂಬತ್ತು ಸಾವಿರ ಜನ ಕನ್ನಡಿಗರೇ ಇದ್ದಾರೆ ಸುಮಾರು 25 ಸಾವಿರದಷ್ಟು ಸಂಖ್ಯೆಯಲ್ಲಿ ಮರಾಠಿಗರು ಇದ್ದಾರೆ. ಇದರಿಂದಲೇ ಬೆಳಗಾಂ ಕರ್ಣಾಟಕದಲ್ಲಿ ಇರಬೇಕೆಂದು ಮಾಡಿದ್ದಾರೆ. ಆದರೆ ಈಗ ಮಹಾರಾಷ್ಟ್ರದವರು ಬೆಳಗಾಂ ನಮಗೆ ಕೊಡಬೇಕು ಎಂದು ಹೇಳುವುದು ನೋಡಿ ನಮಗೆ ಆಶ್ಚರ್ಯವಾಗುತ್ತಿದೆ. ಇದನ್ನು ಸರಕಾರದವರು ಹಾಗೂ ಎಲ್ಲರೂ ಗಮನಿಸಬೇಕಾದದು ಅಗತ್ಯ. ನಿಜವಾಗಿಯೂ ಬೆಳಗಾಂನಲ್ಲಿ ಕನ್ನಡಿಗರ ಸಂಖ್ಯೆಯೇ ಬಹಳ ಹೆಚ್ಚಾಗಿದೆ. ಅದರಲ್ಲೂ ಇಲ್ಲಿ ಕೆ ಎಲ್.ಇ. ಸೊಸೈಟಿ ಹಾಗೂ ಇತರ ಸೊಸೈಟಿಗಳು ಕನ್ನಡಿಗರಿಂದಲೇ ಆರಂಭವಾಗಿ ಇಂದಿಗೂ ಚೆನ್ನಾಗಿ ನಡೆಯುತ್ತಿವೆ. ಮತ್ತು ಇನ್ನೂ ಕೆಲವು ಸೊಸೈಟಿಗಳಲ್ಲಿಯೂ ಕನ್ನಡಿಗರೇ ಕೆಲಸ ಮಾಡುತ್ತಿದ್ದಾರೆ. ಬೆಳಗಾಂ ಸುಮಾರು 18ನೇ ಶತಮಾನದಿಂದಲೂ ಕರ್ಣಾಟಕಕ್ಕೆ ಸೇರಿದ ಭಾಗವೇ ಆಗಿದೆ ಎನ್ನುವುದನ್ನು ಎಲ್ಲ ಇತಿಹಾಸಗಳಿಂದಲೂ ನಾವು ನೋಡಿದರೆ ಗೊತ್ತಾಗುತ್ತದೆ. ಅಲ್ಲದೆ ನಮ್ಮ ಬೆಳಗಾಂನಲ್ಲೇ ಎಲ್ಲ ಹೆಡ್ ಕ್ವಾರ್ಟರುಗಳೂ ಇವೆ. ರವೆನ್ಯೂ, ಫಾರೆಸ್ಟು ಹೆಡ್ ಕ್ವಾರ್ಟರುಗಳು ಇಲ್ಲೇ ಇವೆ. ಹಾಗೂ ಡಿಸ್ಟ್ರಿಕ್ಟ್ ಬ್ಯಾಂಕುಗಳ ಹೆಡ್ ಕ್ವಾರ್ಟರುಗಳು ಇಲ್ಲೇ ಇದೆ. ಪಿ ಡಬ್ಲ್ಯು.ಡಿ ಹೆಡ್ ಕ್ವಾರ್ಟರುಗಳೂ ಇಲ್ಲೇ ಇವೆ, ಹಾಗೂ ದೇಶದ ಎಲ್ಲ ಹೆಡ್ ಕ್ವಾರ್ಟರುಗಳೂ ಇಲ್ಲೇ ಇವೆ. ಕರ್ಣಾಟಕ ಏಕೀಕರಣ ಸಮಿತಿಯ ಸಭೆ ಇಲ್ಲಿ ಒಮ್ಮೆ ಸೇರಿದಾಗ ಇವೆಲ್ಲಾ ವಿಚಾರಗಳೂ ಕೂಡ ಚರ್ಚೆಯಾಗಿ ಬೆಳಗಾಂ ಕನ್ನಡಿಗರದು ಎನ್ನುವುದು ಗೊತ್ತಾಗಿದೆ. ಹೀಗಿರುವಾಗ ಮಹಾರಾಷ್ಟ್ರದ ಸಮಿತಿಯವರು ಈಗ ಈ ರೀತಿ ಹೇಳುತ್ತಿರುವುದು ನೋಡಿ ಆಶ್ಚರ್ಯವಾಗುತ್ತಿದೆ. ಇದನ್ನು ಯಾರೂ ಒಪ್ಪುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಬೆಳಗಾಂ ಈ ರಾಜ್ಯಕ್ಕೆ ಸೇರಿದ್ದು ಎನ್ನುವುದು ಎಲ್ಲ ಆಧಾರಗಳಿಂದಲೂ ನಿರ್ಧಾರವಾಗಿದೆ. ಇದರ ಬಗ್ಗೆ ಕೆಲವು ಮರಾಠಿಗರು ಈಗ ತೀರ್ಪು ಬಂದ ಮೇಲೆ ಈ ರೀತಿಯಾಗಿ ಹೇಳುತ್ತಿರುವುದು ನೋಡಿ ನಮಗೆ ಬಹಳ ವ್ಯಸನವಾಗುತ್ತಿದೆ. ಬೆಳಗಾಂ ಎಂದಿದ್ದರೂ ಕರ್ಣಾಟಕಕ್ಕೆ ಸೇರಿದುದು, ಇದು ಕರ್ಣಾಟಕದಲ್ಲೇ ಉಳಿಯಬೇಕು ಎಂದು ಹೇಳಿರುವುದು ನ್ಯಾಯವಾಗಿಯೇ ಇದೆ. ಅದರಲ್ಲೂ ಕನ್ನಡಿಗರೇ ಆದ ಶ್ರೀ ಭೀಮರಾವ್ ಪೊತ್‌ದಾರ್ ಈ ಬೆಳಗಾಂನಲ್ಲಿದ್ದ ಬ್ಯಾಂಕಿನಲ್ಲಿ ಬಹು ದಿನದಿಂದಲೂ ಅಧ್ಯಕ್ಷರಾಗಿದ್ದಾರೆ ಮತ್ತು ಇಲ್ಲಿರುವ ಜಿಲ್ಲೆಯ ಡಿಸ್ಟ್ರಿಕ್ಟ್ ಬ್ಯಾಂಕುಗಳಲ್ಲಿ ಹಾಗೂ ಸೆಂಟ್ರಲ್ ಬ್ಯಾಂಕಿನಲ್ಲಿ ಚೇರ್ಮನ್‌ರಾಗಿರುವವರೆಲ್ಲಾ ಕನ್ನಡಿಗರೇ ಆಗಿದ್ದಾರೆ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಈ ಪ್ರಕಾರ ಕನ್ನಡಿಗರೇ ಪ್ರಧಾನವಾಗಿರುವ ಬೆಳಗಾಂ ಯಾವ ಆವೇಶವೇ ಬರಲಿ ಬೇರೆ ಕಡೆಗೆ ಹೋಗುವುದು ನ್ಯಾಯವಲ್ಲ. ಇದನ್ನು ಈ ತೀರ್ಪಿನಲ್ಲೇ ಹೇಳಿದ್ದಾರೆ. ಕಮಿಷನ್ನಿನವರು ಪ್ರತಿಯೊಂದು ವಿಚಾರವನ್ನೂ ಗಮನದಲ್ಲಿಟ್ಟುಕೊಂಡು ನಮ್ಮ ಮಾನ್ಯ ನಿಜಲಿಂಗಪ್ಪನವರು ಹೇಳಿದ ಹಾಗೆ ಇಂತಹ ಒಳ್ಳೆಯ ತೀರ್ಪನ್ನು ಅವಾರ್ಡ್ ಎಂದೇ ಪರಿಗಣಿಸಿ ಎಲ್ಲರೂ ರಾಷ್ಟ್ರದ ಹಿತದೃಷ್ಟಿಯಿಂದ ಸಂಪೂರ್ಣವಾಗಿ ಒಪ್ಪಲೇಬೇಕು. ಇದರ ಬಗ್ಗೆ ಬೇರೆ ಬೇರೆ ರೀತಿಯ ಶಂಕೆಗಳನ್ನು ತಂದು ಒಡ್ಡುವುದು ಸರಿಯಲ್ಲ. ಇದರ ಬಗ್ಗೆ ಶರಾವತಿಯಿಂದ ಸಹನೆಯಿಂದ ಇದರ ತತ್ವವನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸರಕಾರದವರು ಮಹಾರಾಷ್ಟ್ರದ ಒತ್ತಡಕ್ಕೆ ಮಣಿಯದೆ ತೀರ್ಪನ್ನು ಹಾಗೆಯೆ ಒಪ್ಪಬೇಕು. ಮಹಾರಾಷ್ಟ್ರ ಸಮಿತಿಯ ಧುರೀಣರೂ ಕೂಡ ಬೆಳಗಾಂ ಬೇಕೇ ಬೇಕು ಎಂದು ಕೇಳುತ್ತಿಲ್ಲ. ಈ ಸಮಸ್ಯೆಯನ್ನು ಎಲ್ಲರ ಹಿತದೃಷ್ಟಿಯಿಂದ ಬಗೆಹರಿಸಬೇಕಾದರೆ ಇದನ್ನು ಒಪ್ಪಬೇಕೆಂದು ನಾನು ಧೈರ್ಯದಿಂದ ಹೇಳುತ್ತೇನೆ. ನಾನು ಖಾನಾಪುರ ತಾಲ್ಲೂಕಿನಿಂದ ಬಂದಿದ್ದೇನೆ. ಇಂಥಹ ಪ್ರಶ್ನೆ ಬಂದಾಗ ಏನೋ ಸ್ವಲ್ಪ ತಿಕ್ಕಾಟ ಇರಬಹುದು. ಬೆಳಗಾಂ ಮೇಲೆ ಖಾನಾಪುರದ ಪಶ್ಚಿಮ ಭಾಗದವರು ಅವಲಂಬಿಸಿದ್ದಾರೆ. ಅವರೇನೂ ಕೊಲ್ಹಾಪುರಕ್ಕೆ ಹೋಗಬೇಕು, ಮತ್ತೊಂದು ಕಡೆ ಹೋಗಬೇಕು ಎಂದು ಹೇಳುವುದಿಲ್ಲ. ಅವರಿಗೆ ಬೇಕಾದಂಥ ಜೋಳ, ರಾಗಿ, ಬೆಲ್ಲ, ಅಕ್ಕಿ ಪೂರ್ವಭಾಗದಿಂದ ಬರುತ್ತದೆ. ಅವರು ಗುಡ್ಡಗಾಡು ಪ್ರದೇಶಗಳಿಂದ ಖಾನಾಪುರ ಮುಖಾಂತರ ಹಾಗೂ ಬೆಳಗಾಂ ಮುಖಾಂತರ ಕೊಲ್ಹಾಪುರಕ್ಕೆ ಹೋಗಲು ರಸ್ತೆ ಸಾರಿಗೆ ವ್ಯವಸ್ಥಿತರೀತಿಯಲ್ಲಿ ಮಾಡಬೇಕಾಗಿದೆ. ಶೇಕಡ 70ರಷ್ಟು ಮರಾಠಿ ಭಾಗಗಳನ್ನು ಕೊಲ್ಹಾಪುರಕ್ಕೆ ಸೇರಿಸಿದ್ದರೂ ಅವರು 15 ಮೈಲಿಗಳಲ್ಲಿನ ಬೆಳಗಾಂ ಬಿಟ್ಟು 100 ಮೈಲಿಗಳಲ್ಲಿರುವ ಕೊಲ್ಹಾಪುರಕ್ಕೆ ಹೋಗುವುದು ಸರಿಯಲ್ಲವೆಂದು ಅವು ಬೆಳಗಾಂನಲ್ಲಿಯೇ ಇರಬೇಕೆಂಬ ಮಾತನ್ನು ಆಡುತ್ತಿದ್ದೇನೆ. ಇಷ್ಟೆಲ್ಲಾ ಪರಿಸ್ಥಿತಿ ಇರುವಾಗ ಈ ತರಹ ಬೇಡಿಕೆಗಳನ್ನು ಖಡಾಖಂಡಿತವಾಗಿ, ಇನ್ನೊಂದು ಕಮಿಷನ್ನಿನ ಮುಂದೆ ಇಡುವುದಕ್ಕೆ ಅಥವಾ ಕೇಂದ್ರಸರ್ಕಾರದವರು ಇದರ ಬಗ್ಗೆ ಪುನರಾಲೋಚನೆ ಮಾಡುವುದಕ್ಕಾಗಲಿ ಅವಕಾಶ ಕೊಡಬಾರದು. ಮಹಾಜನ್ ಅವರ ವರದಿಯನ್ನೇ ನಾವು ಒಪ್ಪಬೇಕು ಮತ್ತು ಜಾರಿಗೆ ತರಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಬೇರೆ ಯಾವುದೇ ಕಮಿಷನ್ನಿಗೂ ಒಪ್ಪಬಾರದು ಇದೇ ಕೊನೆಯ ಸಂದರ್ಭವೆಂದು ಹೇಳಬೇಕು. ನಾವೆಲ್ಲರೂ ನಮ್ಮ ಮುಖ್ಯಮಂತ್ರಿಗಳ ಹಿಂಬಾಲಕರಾಗಿ ನಡೆಯುತ್ತೇವೆ. ಈ ನಿರ್ಣಯಕ್ಕೆ ಕೊನೆಗೊಳ್ಳಬೇಕು. ಕೇಂದ್ರದವರು ಈಗ ಬೇರೆ ರೀತಿಯಲ್ಲಿ ಹೇಳುವುದನ್ನು ಬಿಡಬೇಕು. ಒಟ್ಟಿನಲ್ಲಿ ಎಲ್ಲರೂ ಈಗ ಮಹಾಜನ್ ಅವರ ವರದಿಯನ್ನು ಒಪ್ಪಬೇಕು ಎಂದು ಹೇಳಿ ನನಗೆ ಈ ವಿಚಾರವಾಗಿ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I will refer the House to a similar situation on a prior occasion where a similar motion saying that 'A' matter be taken into consideration came up and amendments were given notice of and I dealt with it and it is in the proceedings of 22nd July 1966. I referred to all the procedures followed and ultimately ruled that these matters are not as in the case of the other motion but this is a peculiar procedure that is provided under 279 and the matter on which opinion is to be discussed as a result of the debate is one to be framed as the Speaker feels that it would be an appropriate question in order that the whole debate may not restart. But the point is whether facility could or could not be given. I may refer to the proceedings of the Lok Sabha where all these have been put and discussed because subjects are common and the main motion, *viz.*, that it can be taken into consideration, cannot be put because it has been taken into consideration. Now, is there not an agreed motion ? Matter of the substitute resolution is also there and ultimately while putting to vote, I will put that. There are two or three small amendments and if necessary, that can be made and I will put the amendment to the substitute motion first and then the substitute motion.

SRI B. D. JATTI (Minister for Food).—Sir, I beg to move: For the original motion moved on 15th December 1967, the following motion be substituted:

"That this House, having considered the Report of the Mahajan Commission on Maharashtra-Mysore-Kerala Boundary Disputes urges upon the Central Government to immediately implement the recommendations of the Commission in spite of the fact that the Commissfon has failed to recognise the just claims of the State of Mysore and that some of its recommendations are quite injurious to the legitimate interests of the State of Mysore, and also vehemently opposes any proposal or suggestion for obtaining 'National consensus' or taking 'Opinion Poll'."

MR. SPEAKER.—Motion moved for the original motion moved on 15th December 1967, the following motion be substituted:

"That this House, having considered the Report of the Mahajan Commission on Maharashtra-Mysore-Kerala Boundary Disputes urges upon the Central Government to immediately implement the recommendations of the Commission in spite of the fact that the Commission has failed to recognise the just claims of the State of Mysore and that some of its recommendations are quite injurious to the legitimate interests of the State of the Mysore, and also vehemently opposes any proposal or suggestion for obtaining 'National consensus' or taking 'Opinion Poll'.

(Copies will be distributed)

SRI H. SIDDAVEERAPPA (Harihar).—Mr. Speaker, Sir, I rise to offer a few observation regarding Mahajan Commission Report and also the substitute motion just now moved. Before I proceed further I consider it as my duty to refer to the sad demise of that great, respected person, Sri Mehr Chand Mahajan, the ex-Chief Justice of the Supreme Court of India. I had the privilege of knowing him personally. He was the Chief Justice while I was the Home Minister of Mysore and on one or two occasions I had the opportunity of meeting him. Even after his retiring from service, he was a practical farmer. He was engaged in agriculture. He was writing a series of articles as to how agriculture can develop in our country. He was the one respected leader who can be classed among the dyoens of India and as one of our eminent men. Sir, we may or may not agree with his proposals; that is a different matter. On both the sides of the House and with regard to various sections, there may be differennce of opinion as to his recommendations. They might be pleasing or may not be pleasing; that is not the point I am stressing. What I would like to stress is, here was a man with his unflinching loyalty to the country, with his integrity and character, second to none in his patriotism and his zeal to serve the country.

3-30 P.M.

I had heard that he was averse to take up this thankless job. He knew there would be very sharp clevages and differences. I have also heard that he had the prior consent of all the parties concerned that whatever his recommendations would be, they would be implemented in toto and in full. It is a very curious situation here. The contending parties except Kerala, all belong to one party, namely the Congress party. Everyone was eager that this problem should be settled once and for all. When such was the position, Sri Mahajan took greatest and minutest care to see that every aspect of the problem was examined in detail. He went round the country, collected all data and if anybody can go through this report, one will see that with minutest care he has examined every question that was referred to him. Now the Maharashtrian friends feel that their claims have been overlooked. They might be right in their conclusions but to attribute any motive to him is, in my opinion uncharitable. With regard to this position who is responsible for continuing this agonising situation in the country? In our border, our people on whatever side they may be, have been treated like chattels. How long this situation should continue? We see here a sort of balkanisation. The balkanised States continued like that in Europe for nearly two to three centuries until they were liquidated once and for all after the first and second world wars and the whole situation was brought to normalcy. Are we aiming at this situation? I would like to read a few sentences from the States Reorganisation Act when the proceedings were on the anvil of the Parliament. Even then quite a large number of members of this House said, settle here and once for all Sri Gurupadaswamy who was a member of the cabinet a member of the Parliament then is now a member of the central cabinet prophetically said until and unless you settle the problem now by establishing or setting up boundary commission as is necessary, this is bound to continue for long. This is bound to create more problems instead of solving any. For reasons best known to himself the hon'ble the then Home Minister Sri G. B. Pant—I am not attributing any motive—pinned his faith in what are called the Zonal Councils. He said after all the border dispute is a minor affair and we are all members of one nation and these border disputes can be settled by amicable settlements, by talk, discussion and what not in the Zonal Councils. This is what he said:

> "Zonal Councils have been authorised to deal with these boundary matters pertaining to regions of territories lying on the common borders of these States. Even if we establish boundary commissions those commissions may not be able to solve the problem".

He assured the Parliament then that even if the Zonal Council failed to take up any final decision, the Central Government is in duty bound to interfere and settle them once for all. This problem is kept alive for a period of 10 years. What for? I believe the Congress party wants this

(SRI H. SIDDAVEERAPPA)

struggle, strife and strain because they feel that they can thrive only under conflicts and struggles. Otherwise I cannot think of any other explanation. Had they only minded this problem it could have been settled long ago. What do we find today? The cross sections of the society went to the Commission and many types of people have gone and given evidence. Every conceivable section of the society has gone and given evidence. The most poignant of it is, ladies from Belgaum went and gave evidence that their husbands have gone on duty as Government servants in some parts of Karnataka, we cannot go. "We are in Belgaum for the sake of education of our children here. Therefore, in order to see that our children's education is not hampered we may be asked to join Maharashtra". That is what they say. What is all this? Supposing today this problem is settled, what is the sort of bitterness that is left in this country? We once prided that Bombay is one of the cosmopolitan cities in the country. Alas, what is it today? Is it not the direct result of Boundary dispute that we see what it is today? Is it not what we call anti-national or harmful in the interests of this country? Who is responsible? Why is your Central Government keeping quiet? Why is the Congress Working Committee keeping mum? It has been said that the Chief Minister in the dead of night was made to get up and ultimately was prevailed upon to agree to some resolution for setting up this commission.

SRI S. D. KOTHAVALE.—The responsibility lies in the linguistic principle.

SRI H. SIDDAVEERAPPA.—That is because of weak-kneed attitude of the Congress organisation or unstable mind and they are responsible and none else. The Chief Minister of Mysore was prevailed upon. Here is our doubt; the Chief Minister of Mysore is now said to have been elevated to a greater place as the head of an organisation, President of the Congress organisation. I have doubts that he will be prevailed upon to sacrifice the interests in different capacities. That doubt can be strengthened by the way in which he has acted here by having agreed to this Commission. Whatever may be the background of it, whatever may be the previous history, where is it stated that you gentlemen will not repeat the same thing? After this report came there are rumblings from the other States and you will be again prevailed upon to lower down your demand so that ultimately you will say that you were prevailed to agree for something else. Please, for heavens sake, don't treat this border problem as a chattel, as a pawn in the game. If you are to do it, a day may come—you had a taste of it in Hubli; what people had done—when this question was taken up—please do not do any such thing and try to water down the situation. You must be firm in your mind; either do this or that. There is a proverb in Kannada "ಸೂಳೆಯ ಪಾಪ ಸನ್ಯಾಸಿಯ ತಲೆಯ ಮೇಲೆ".

We do not want to be a party to it. If at all there is anything, you better take courage.

Sri D. M. SIDDIAH (Beligere).—It is a bad simile.

Sri H. SIDDAVEERAPPA.—It is not so; it is a good simile. For the sins of omissions and commissons of your party, we cannot be made responsible. You must not take the literal sense of it.

Therefore what I am saying is, if at all you believe in this, please tell us. We on this side were eager to go the whole hog and to support you in this very important State problem. We had our grievances. These gentlemen in the first place half-heartedly, hesitantly and in an unwilling manner said that because the Leader of the Opposition wanted, you called the Assembly. Do you want promptings for this, wigging for this? Sir, there is a precedent in the year 1956, when the States Reorganisation Report came in. The then Chief Minister, Mr. Hanumanthaiah was cautious enough, careful enough and prudent enough to call a meeting of all parties and discuss it. He himself initiated the discussion. Then in the form of a resolution the wholething was brought up. What do we find here? Mr. Nijalingappa thinks he epitomises the entire public opinion in Mysore. We could have been very much grateful if he did it provided he was a strong man who could translate into action what he says about it. We have got our own misgivings about it. Then Sir, the Cabinet okeyed it and the MPCC dittoed it. One fine morning he thinks there is need for a semblance of cousultation with the Opposition parties. He invites us. How can we say anything unless the legislature is summoned and their opinion is elicited. Then in a half-hearted manner this session is summoned. Sir, be that as it may, whatever it may be, now it is our duty as my friend Mr. Ghorpade said. What is the altrenative we have? We have to support this report because it is one of paramount importance to the State. Whatever may be our differences with the Government, whatever may be our complaints against them, we must set them aside and go the whole hog with them in supporting it, though friends like Mr. Gopala Gowda think otherwise. I share his views, that if only those gentlemen were vigilant and minded their business irrespective of what their heirarchy at Delhi would speak of them, they could have done far better and argued their case much better and then perhaps the position of Karnatak would have much more improved than what it is today. That is what Mr. Mahajan himself says in a few words. This is what he says:

"The Mysore Government despite their willingness to adjust within ten mile limit of Maharashtra any predominantly Marathi-speaking areas have now claimed additional areas from Maharashtra, *i.e.*, the city of Sholapur, the whole taluka of Akkalkot and certain other areas, though their main case was that *status quo* should be maintained. Consistently with their stand of *status quo* it seems rather strange that they are claiming a very large Kannada speaking area from Maharashtra

(SRI H. SIDDAVEERAPPA)

and are also willing to make minor adjustments on the border within a ten-mile deep belt in the Mysore State. Consistency, however, is a virtue which cannot be insisted in matters political.'

Much more so with regard to the gentlemen sitting here. Consistency is a rare virtue with them. They never think of it. Take for instance Maharashtra. They have claimed border areas of 500 miles. You may agree with them or you may not agree with them. They are vigilant; they are careful; they are cautious. On the other hand you are slumbering in the beautiful climate of Bangalore; you never care to know what is happening and how things have to be safeguarded. Therefore, as put by the Hon'ble Leader of the Opposition, whatever may be the gains or losses, whatever may be plus or minus, because every part of it remains with mother India, we have to agree with the recommendations of Mahajan Commission. I am perfectly convinced there is no bias or no prejudice. The only bias is impartially attending to the problem. He has done it. I therefore feel we must agree with his recommendations. A word to our Maharashtrian friends. I may request them; I may appeal to them. This sort of thing cannot be carried on ad infinitium. It leads us nowhere. We have to live together. If at all any problems are there about linguistic minorities, educational and cultural activities and various others, it shall be the duty of the Government whatever the Government is here, to see that their interests are safeguarded. It cannot be done in the way some friends on the other side tried to do by using harsh words, because harsh words do not break any bones. I appeal to Maharashtra Ekikaran Samiti friends not carry the struggle any further. The more the struggle, the greator will be the agony. It is not good to have any sabre-rattling. It does not solve any problem. It does not lead us any further. The Government of the day, whatever Government it be, should see that their apprehensions and misgivings are met completely. I therefore feel I am in full agreement with the recommendations of Mahajan Commission and I support it.

† ಶ್ರೀ ಬಿ. ವಿಠ್ಠಲದಾಸಶೆಟ್ಟಿ (ಪುತ್ತೂರು).—ಸನ್ಮಾನ್ಯ ಸಭಾಪತಿಗಳೇ, ಈ ಮಹಾಜನ್ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಅಲ್ಲದೆ ನಮ್ಮ ಮುಂದಿರುವ ಶ್ರೀ ಜತ್ತಿಯವರು ಮಂಡಿಸಿರುವ ಠರಾವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಎರಡು ಮಾತಗಳನ್ನು ಹೇಳಲು ಇಚ್ಛಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನದ ಆಟವಾಗುತ್ತದೆ. ಯಕ್ಷಗಾನದಲ್ಲಿ ಆಟದವನಿಗೆ ದೇವಟಿಗೆಯವನ ಮೇಲೆ ಕಣ್ಣು ಇರುತ್ತದೆ. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ, ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಎಲ್ಲಾ ತೊಂದರೆಗಳಿಗೂ, ಎಲ್ಲಾ ತಪ್ಪುಗಳಿಗೂ ಕಾಂಗ್ರೆಸ್‌ನವರೇ ಕಾರಣವೆಂದು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಇಂತಹ ವಿಚಾರಗಳಲ್ಲಿ ಕಾಂಗ್ರೆಸ್‌ನವರು ಕಾರಣ, ವಿರೋಧಪಕ್ಷದವರು ಕಾರಣ, ಅವರು ಕಾರಣ, ಇವರು ಕಾರಣ ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ಗಡಿ ವಿಚಾರವಲ್ಲಿ ನಾನಾ ಪಕ್ಷಗಳು ನಾನಾ ರೀತಿಯ ಧೋರಣೆ ಹೊಂದಿದ್ದವು ಎಂಬುದು ಶ್ರೀ ಸಿದ್ದವೀರಪ್ಪನವರಿಗೆ ಗೊತ್ತಿರಬಹುದು. ಭಾಷಾವಾರು ದೃಷ್ಟಿಯಿಂದ ಕಲವು ಭಾಗಗಳು ಬೇರೆ ರಾಜ್ಯಗಳಲ್ಲಿ ಉಳಿದಿವೆ. ಎಲ್ಲಾ ತೊಡಕುಗಳನ್ನೂ

ಕಾಂಗ್ರೆಸ್ ಪಕ್ಷದ ಮೇಲೆ ಹೊರಿಸುವುದು ಸರಿಯಲ್ಲ. ಶ್ರೀಯುತರುಗಳಾದ ಫಜಲ್ ಆಲಿ, ಫಣೀಕರ್ ಮತ್ತು ಕುಂಜ್ರೂ ಅವರುಗಳು ಏನೂ ಕಾಂಗ್ರೆಸ್‌ನವರಲ್ಲ. ಈ ಗಡಿ ಬಗ್ಗೆ ಹಿಂದೆ ಫಜಲ್ ಆಲಿ ಕಮೀಷನ್ ಕೇಂದ್ರ ಸರ್ಕಾರದಿಂದ ನೇಮಕವಾಯಿತು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳುವುದು ಇಷ್ಟೇ : ಈ ಗಡಿ ಪ್ರಶ್ನೆಯನ್ನು 10 ವರ್ಷದಿಂದ ಮುಂದುವರಿಸಿಕೊಂಡು ಬಂದಿದ್ದೀರಿ, ಹಿಂದೆಯೇ ಬಗೆಹರಿಸಿದ್ದರೆ ಈಗ ಈ ಪ್ರಶ್ನೆಯೇ ಬರುತ್ತಿರಲಿಲ್ಲವೆಂದು.

ಶ್ರೀ ಬಿ. ವಿಠಲ್‌ದಾಸಶೆಟ್ಟಿ.—ಸರ್ದಾರ್ ಫಣೀಕರ್ ಅವರು ಕೇರಳಾ ಪ್ರದೇಶಕ್ಕೆ ಸೇರಿದವರು. ಅವರು ಗಡಿ ಬಗ್ಗೆ ಸಾಕ್ಷಿ ತಗೆದುಕೊಳ್ಳಲು ಮಂಗಳೂರಿಗೆ ಬಂದಾಗ ನಾವು ಸಾಕ್ಷಿ ಕೊಡುವುದಕ್ಕೆ ಹೋಗಿದ್ದೆವು. ಆಗ ಅವರು ಹೇಳಿದರು, ಚಂದ್ರಗಿರಿಯ ದಕ್ಷಿಣ ಭಾಗ ತಾನಾಗಿಯೇ ಮೈಸೂರು ರಾಜ್ಯಕ್ಕೆ ಹೋಗುತ್ತದೆ, ಆ ಬಗ್ಗೆ ಸಾಕ್ಷಿ ಪಡೆದುಕೊಳ್ಳುವುದು ಅವಶ್ಯಕತೆ ಇಲ್ಲವೆಂದು. ಚಂದ್ರಗಿರಿ, ಕಾಸರಗೋಡು, ದಕ್ಷಿಣ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರುತ್ತವೆಂದು ನಾವು ತಿಳಿದಿದ್ದೆವು. ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೂ ಸಹ ಗೊತ್ತಿರಬಹುದು, ದಕ್ಷಿಣ ಕನ್ನಡ ಜಿಲ್ಲೆ ಆಗ ಮದ್ರಾಸ್ ರಾಜ್ಯದಲ್ಲಿತ್ತು. ಶ್ರೀ ಕಾಮರಾಜರು ಗುಡ್ಲೂರ್ ಪ್ರದೇಶವು ಮದ್ರಾಸ್‌ಗೇ ಸೇರಬೇಕೆಂದು ಒತ್ತಾಯ ಮಾಡಿದಾಗ, ಕಾಸರಗೋಡನ್ನು ಕೇರಳಾದಲ್ಲೇ ಉಳಿಸಿದರು. ದಕ್ಷಿಣ ಕನ್ನಡ ಜಿಲ್ಲೆಗೆ ಕಾಸರಗೋಡು ಆಗಲೇ ಸೇರಬೇಕಾಗಿತ್ತು. ಈಗ ಮಹಾಜನ್ ಅವರು ತಮ್ಮ ವರದಿಯಲ್ಲಿ ಕಾಸರಗೋಡು ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಹೇಳಿರುವಂಥದ್ದು ಸ್ವಾಗತಾರ್ಹವಾಗಿದೆ. ಈಗ ನಮ್ಮ ಮಿತ್ರರಾದ ಶ್ರೀಮಾನ್ ಕದಂ ಅವರು ಹೇಳಿದರು, ಕೊಂಕಣೀ ಭಾಷೆ ಮರಾಠಿ ಭಾಷೆಗೆ ಹತ್ತಿರವಾಗಿದೆಯೆಂದು. ಕಾಸರಗೋಡಿನಲ್ಲಿ 58 ಪರ್‌ಸೆಂಟ್‌ವರೆಗೆ ಕೊಂಕಣಿ ಮಾತನಾಡುತ್ತಾರೆ. ಅಲ್ಲಿ ಮಲೆಯಾಳಿ ಮಾತನಾಡುವವರೂ ಸಹ ಇದ್ದಾರೆ. ಅವರ ಮನೆಯ ಮಾತನಾಡುವ ಮಲೆಯಾಳಿ ಭಾಷೆಗೂ ಮಲಬಾರಿನಲ್ಲಿ ಮಾತನಾಡುವ ಮಲೆಯಾಳ ಭಾಷೆಗೂ ವ್ಯತ್ಯಾಸವಿದೆ. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ನನ್ನ ಸ್ನೇಹಿತರಾದ ಶ್ರೀ ಇಡಿನಬ್ಬ ಅವರಿಗೆ ಮಲೆಯಾಳಿ ಬರುತ್ತದೆ. ಕೊಯಮತ್ತೂರ್ ಮತ್ತು ಕೊಚ್ಚಿನ್‌ಗೆ ಇವರು ಹೋದರೆ ಅವರು ಮಾತನಾಡುವ ಮಲೆಯಾಳಿ ಭಾಷೆ ಇವರಿಗೆ ಅರ್ಥವಾಗುವುದಿಲ್ಲ. ಅಲ್ಲಿ ಮನೆಯಲ್ಲಿ ಜನರು ಮಾತನಾಡುವುದು ಮಲೆಯಾಳಿಯಾದರೂ ಅಲ್ಲಿಯ ವ್ಯವಹಾರದ ಭಾಷೆ ಕನ್ನಡವಾಗಿದೆ. ಆದರೆ ಅಲ್ಲಿ ಅನೇಕ ಜನ ಅಧಿಕಾರಿಗಳು ಆ ಭಾಗದಲ್ಲಿ ಮಲಬಾರಿಗಳು ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರ ಕೂಡ ಮಲಬಾರ್‌ಗೆ ಹೋಗುತ್ತಿದ್ದಾರೆ. ಮಲೆಯಾಳಿ ಆಫೀಸರುಗಳು ಮುಸಲ್ಮಾನರು ಆಗಿದ್ದು ಅವರು ಮಾತನಾಡುವುದು ಮಲೆಯಾಳಿಯಲ್ಲಿ. ಈ ತುಳು ಭಾಷೆಯಲ್ಲಿ ಮಲೆಯಾಳ ಬೆರೆತ ಭಾಷೆ ಅದು. ಈ ಮಲೆಯಾಳ ಭಾಷೆ ಕನ್ನಡ ಭಾಷೆ ಎಂದು ಕರೆಯಬಹುದು. ಅಂಥವರು ಎಷ್ಟೇ ಇರಲಿ ಅವರು ಮಲೆಯಾಳಿಗಳು ಎಂದು ಕರೆದರು. ಕೊಂಕಣಿ ಭಾಷೆ ಮಾತನಾಡುವವರು ಮರಾಠಿ ಭಾಷೆ ಎಂದು ಸಂಬಂಧ ಇದ್ದುದಾದರೆ ಇಡೀ ದಕ್ಷಿಣ ಕನ್ನಡ ಜಿಲ್ಲೆಯನ್ನು ಮುಂಬಯಿ ರಾಜ್ಯ ತೆಗೆದುಕೊಳ್ಳಬೇಕು ಎಂದು ಕಾಣುತ್ತದೆ ಅಲ್ಲವೇ? ಕೊಂಕಣಿ ಭಾಷೆ ಮಾತನಾಡುವವರು ಎಷ್ಟೇ ಪರ್ಸೆಂಟ್ ಇರಲಿ ಕೊಂಕಣಿ ಒಂದು ಪ್ರತ್ಯೇಕವಾದ ಭಾಷೆ. ಕೊಂಕಣಿ ಭಾಷೆ ಕನ್ನಡ ಭಾಷೆಗೆ ಹತ್ತಿರ ಇರತಕ್ಕಂಥ ಭಾಷೆ, ತುಳು ಭಾಷೆಗೆ ಹತ್ತಿರ ಇರತಕ್ಕಂಥ ಭಾಷೆ ಅದು. ಈ ಭಾಷೆ ಮಾತನಾಡತಕ್ಕಂಥವರು ಎಂಡೂವರೆ ಪರ್ಸೆಂಟ್ ಇರಲಿ, ಗೋವಾದಲ್ಲಿ ಇದು ಒಂದು ಪ್ರತ್ಯೇಕವಾದ ಭಾಷೆ ಎಂದು ತೋರಿಸಿಕೊಂಡಿದ್ದಾರೆ. ಕೊಂಕಣಿ ಪರಿಷತ್ತು ಪೇಪರ್ ಪರಿಷತ್ತು ಎಂದು ಅವರು ಹೇಳಿದರು. ಅವರ ಆ ಮಾತಿಗೆ ಅರ್ಥವಿಲ್ಲ. ಕೊಂಕಣಿ ಪರಿಷತ್ತುಗಳಿಗೆ ನಾನು ನನ್ನ ಸ್ನೇಹಿತರೊಡನೆ ಅನೇಕ ಸಲ ಪ್ರತ್ಯಕ್ಷವಾಗಿ ಹೋಗಿದ್ದೇನೆ. ಈ ಕೊಂಕಣಿ ಪರಿಷತ್ತಿಗೆ ಬೇಕಾದಷ್ಟು ಜನ ಬಂದಿದ್ದರು. ಮರಾಠಿ ಜನ ಮಾಡತಕ್ಕಂಥ ಯಾವುದೇ ಇರಲಿ ಅದು ನ್ಯಾಯವಾದುದು ಸರಿಯಾದ ಪರಿಷತ್ತು, ಕೊಂಕಣಿ ಮಾತನಾಡುವವರು ಮಾಡಿದ್ದು ಕನ್ನಡ ಮಾತನಾಡುವವರು ಮಾಡಿದ್ದು ಅದು ನ್ಯಾಯವಲ್ಲ ಎಂದು ಅವರು ಹೇಳುವುದರಲ್ಲಿ ಯಾವ ತಿರುಳೂ ಇಲ್ಲ. ಆದುದರಿಂದ ಶ್ರೀಮಾನ್ ಕದಂ ಅವರು ಹೇಳುವುದರಲ್ಲಿ ಯಾವ ಅರ್ಥವಿಲ್ಲ. ಕೊಂಕಣಿ ಮಾತನಾಡುವವರು ಮಲೆಯಾಳಿ ಪ್ರದೇಶದಲ್ಲಿ ಮಲೆಯಾಳಿಗಳೆಂದು ಸೆನ್ಸಸ್ ಫಿಗರ್ಸ್ ತೋರಿಸಿರುವುದರಲ್ಲಿ ಅವರು ಮಲೆಯಾಳಿಗಳಲ್ಲ. ಈಡಿಗರು ಎಂದು ಕಾಸರಗೋಡಿನಲ್ಲಿ ಅನೇಕ ಜನ ಇದ್ದಾರೆ. ಅವರು ಮಾತನಾಡುವುದು ತುಳು ಹಾಗೂ ತುಳು ಮಲೆಯಾಳಿ ಬೆರಕೆಯಾದ ಭಾಷೆ ಮಾತನಾಡುತ್ತಾರೆ. ವ್ಯವಹಾರದಲ್ಲಿ ಅವರಿಗೆ ಮಲೆಯಾಳಿಯಲ್ಲಿಯ ಒಂದು ಅಕ್ಷರ ಕೂಡ ಗೊತ್ತಾಗುವುದಿಲ್ಲ. ಮಕ್ಕಳು ಹೋಗುವುದು ಕನ್ನಡ ಶಾಲೆಗಳಿಗೆ. ಕಾಸರಗೋಡಿನಲ್ಲಿ ಇರತಕ್ಕ 36 ಪಂಚಾಯತಿಗಳಲ್ಲಿ 35 ಪಂಚಾಯತಿಗಳು ಮೈಸೂರು ರಾಜ್ಯಕ್ಕೆ ಸೇರುತ್ತೇವೆ ಎಂದು ನಿರ್ಣಯ ಮಾಡಿದ್ದಾರೆ. ಅಲ್ಲಿರುವ 75 ಶಾಲೆಗಳಲ್ಲಿ ಸುಮಾರು 10 ಶಾಲೆಗಳು ಮಾತ್ರ ಮಲೆಯಾಳಿ ಶಾಲೆಗಳಿವೆ. ಕಾಸರ

(ಶ್ರೀ ಬಿ. ವಿಠಲದಾಸಶೆಟ್ಟಿ)

ಗೋಡನ್ನು ಪುನಃ ಕೇರಳದಲ್ಲಿ ಇರುವ ಹಾಗೆ ಹೇಳುವುದಕ್ಕೆ ಮಹಾಜನ್ ಕಮಿಷನ್ ಮುಂದೆ ಸಾಕ್ಷ್ಯ ಹೇಳುವುದಕ್ಕೆ ಬರುವುದಿಲ್ಲ ಹಾಗೂ ಸಾಕ್ಷ್ಯ ಹೇಳುವುದಕ್ಕೆ ಆಧಾರವಿಲ್ಲ ಎಂದು ಕೇರಳದವರು ಮಹಾಜನ್ ಕಮಿಷನ್ ಮುಂದೆ ಸಾಕ್ಷ್ಯ ಹೇಳಲು ಬರಲಿಲ್ಲ. ಎ. ಕೆ. ಗೋಪಾಲನ್ ಅವರು ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ್ಗೆ ಕಾಸರಗೋಡನ್ನು ಮೈಸೂರಿಗೆ ಕೊಡುವುದಕ್ಕೆ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಕಾಸರಗೋಡು ಪ್ರದೇಶ ಸಂಪೂರ್ಣವಾಗಿ ಮೈಸೂರಿಗೆ ಸೇರಿದ್ದು ಎಂದು ಹೇಳಿದ್ದಾರೆ. ಈ ರೀತಿ ಬಹಿರಂಗವಾಗಿ ಎಲ್ಲರೂ ಹೇಳಿಕೆ ಕೊಟ್ಟಿದ್ದಾರೆ. ಆದರೆ ಇವತ್ತಿನ ದಿವಸ ಬೇರೆ ರೀತಿ ಹೇಳುವುದು ತೀರ ಅನ್ಯಾಯವಾದುದು ಮತ್ತು ಆಶ್ಚರ್ಯವಾಗುತ್ತದೆ. ನಂಬೂದ್ರಿಪಾದ್ ಅವರು ಕೇರಳದ ಮುಖ್ಯ ಮಂತ್ರಿಗಳಾಗಿದ್ದಾಗ್ಗೆ 1952ನೇ ಇಸವಿಯಲ್ಲಿ ಒಂದು ಪುಸ್ತಕ ಬರೆದಿದ್ದಾರೆ. ಅದರಲ್ಲಿ ಕಾಸರಗೋಡು ಮೈಸೂರಿಗೆ ಸೇರಬೇಕು ಎಂದು ಹೇಳಿದ್ದನ್ನು ಕಾಣಬಹುದು. ಆದುದರಿಂದ ಇಂದು ಕೇರಳ ಸರಕಾರ ಈ ಮಹಾಜನ್ ಸಮಿತಿ ವರದಿ ಒಪ್ಪಬೇಕಾಗಿಲ್ಲ, ಅದು ಸರಿಯಲ್ಲ, ಅದು ನ್ಯಾಯವಲ್ಲ, ಎಂದು ಅವರು ಹೇಳುವುದರಲ್ಲಿ ಏನೇನೂ ತಿರುಳು ಇಲ್ಲ. ಕಾಸರಗೋಡು ತಾಲ್ಲೂಕು ಅಷ್ಟಾಗಿ ಕೇರಳದ ಭಾಗವಾಗಲಿಕ್ಕೆ ಕಾರಣ ಏನೂ ಇರುವುದಿಲ್ಲ. ಅಲ್ಲಿಯ ಜನ ಮುಸಲ್ಮಾನರನ್ನು ತೆಗೆದುಕೊಳ್ಳಿ ಮಲೆಯಾಳಿಗಳನ್ನು ತೆಗೆದುಕೊಳ್ಳಿ, ಕೇರಳಕ್ಕೆ ಸೇರುತ್ತೇವೆಂದು ಯಾರೂ ಹೇಳುವುದಿಲ್ಲ. ಮಲೆಯಾಳಿಗಳು ಅಲ್ಲಿ ದಬ್ಬಾಳಿಕೆ ನಡೆಸಿದ್ದಾರೆ. ಕನ್ನಡ ಭಾಷೆ ತೆಗೆದುಕೊಂಡರೆ ಸ್ಕಾಲರ್‌ಷಿಪ್ ಕೊಡುವುದಿಲ್ಲ, ಮಲೆಯಾಳಿಗೆ ಅಷ್ಟೇ ಕೊಡುತ್ತೇವೆ ಎಂದು ವಿದ್ಯಾ ಇಲಾಖೆಯಲ್ಲಿ ದಬ್ಬಾಳಿಕೆ ನಡೆಸಿದ್ದಾರೆ. ಕನ್ನಡ ಶಾಲೆಗಳಿಗೆ ಕನ್ನಡ ಟೀಚರ್ಸ್ ನೇಮಕ ಮಾಡುತ್ತಿಲ್ಲ ಇಂಥ ದಬ್ಬಾಳಿಕೆಯ ಗುಂಡು ಅವರು ಹೊಡೆದಿದ್ದಾರೆ. ಕಾಸರಗೋಡನ್ನು ಏನಾದರೂ ಮಾಡಿ ಒಳಗೆ ಹಾಕಿಕೊಳ್ಳಬೇಕು ಎಂದು ಕೇರಳ ಸರಕಾರ ಹಂಚಿಕೆ ಮಾಡುತ್ತಿದೆ. ಇದು ನ್ಯಾಯವಲ್ಲ. ಕಾಸರಗೋಡು ನಮ್ಮ ರಾಜ್ಯಕ್ಕೆ ಬರಲಿಕ್ಕೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ಸಿನವರು ಬಹಳ ದುಡಿದಿದ್ದಾರೆ. ಕಾಸರಗೋಡು ಪ್ರದೇಶಕ್ಕೆ ಹೋದರೆ ಅಲ್ಲಿ ಇದು ಗೊತ್ತಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ಸಿನವರು ಬೇಕಾದಷ್ಟು ಜನ ಅಲ್ಲಿಗೆ ಹೋಗಿ ಕೆಲಸ ಮಾಡಿದ್ದಾರೆ. ಬೇರೆ ಪಕ್ಷದವರ ಹಾಗೆ ಬರೀ ಭಾಷಣ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಕಾಸರಗೋಡು ಪ್ರಶ್ನೆಯನ್ನು ಮಹಾಜನ ಕಮಿಷನ್ ವರದಿಯಲ್ಲಿ ಸೇರಿಸಬೇಕು ಮತ್ತು ಇದನ್ನು ಇತ್ಯರ್ಥ ಮಾಡಬೇಕು ಎನ್ನುವುದನ್ನು ಮಾಡುವುದಕ್ಕೆ ಕಾರಣಕರ್ತರು ನಿಜಲಿಂಗಪ್ಪನವರು ಅಲ್ಲ, ಮೈಸೂರು ಕಾಂಗ್ರೆಸ್ಸಿನವರು ಅಲ್ಲ ಎಂಬುದು ಗೊತ್ತಿದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದನ್ನು ಸೇರಿಸಲಿಕ್ಕೆ ಕಾರಣ ಯಾರು ಎಂದು ಹೇಳುವುದು ಇತ್ಯರ್ಥ ಮಾಡುವುದಕ್ಕಲ್ಲ. ಮಹಾಜನ್ ಕಮಿಷನ್ ಸಾಕ್ಷಿ ಪಡೆದುಕೊಂಡಿದ್ದಾರೆ. ಮಹಾಜನ್ ಕಮೀಷನ್ ವರದಿ ಪ್ರಕಾರ ಕಾಸರಗೋಡನ್ನು ಮೈಸೂರಿಗೆ ಸೇರಿಸಬೇಕು ಎಂಬ ಅಭಿಪ್ರಾಯ ಆಗಿದೆ. ಯಾರಾದರೂ ಇಂಥ ಪ್ರದೇಶ ಇಲ್ಲಿಗೆ ಸೇರಿಸಬೇಕು ಇಂಥ ಪ್ರದೇಶ ಬಿಡಬೇಕು ಎಂದು ಸಾಕ್ಷಿ ಹೇಳುವುದಕ್ಕೆ ಉದ್ದೇಶವಿಲ್ಲ. ಕಮ್ಯುನಿಸ್ಟ್ ಸರಕಾರದಲ್ಲಿ ಒಂದು ಸಮಿತಿ ನೇಮಕ ಮಾಡುವುದಕ್ಕೆ ಅಂಥಾದ್ದೇ ಧೋರಣೆ ಇರಬೇಕು. ಈ ರೀತಿ ಹೇಳುವುದು ಅವರಿಗೆ ರೂಢಿಯಾಗಿದೆ. ಈಗ ಕೇಂದ್ರ ಸರಕಾರದಲ್ಲಿ ಗೃಹ ಮಂತ್ರಿಗಳಾಗಿರುವ ಚವಾಣರು ಈ ವರದಿ ಒಪ್ಪುವುದಿಲ್ಲ ಎಂಬ ಅಭಿಪ್ರಾಯ ಇರತಕ್ಕಂತಾದ್ದು ವ್ಯಸನಪಡುವುದಕ್ಕೆ ಕಾರಣವಾಗಿದೆ. ದೇಶದ ಏಳಿಗೆ ದೃಷ್ಟಿಯಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಹಾಗೆ ಐಕ್ಯರು ತೀರ್ಮಾನ ಮಾಡುವುದಕ್ಕೆ ಈ ವರದಿಯನ್ನು ಎಲ್ಲರೂ ಒಪ್ಪಬೇಕು ಹಾಗು ಯಾವ ಭೇದಭಾವ ಇಲ್ಲದೆ ಒಪ್ಪಿಕೊಂಡು ಸ್ವೀಕರಿಸಬೇಕು ಎಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಈ ಮಾನ್ಯ ಸಭೆ ಕೆಲವು ದಿವಸದಿಂದ ಮಹಾಜನ್ ಕಮಿಷನ್ ವರದಿ ಮೇಲೆ ಚರ್ಚೆ ಪ್ರಾರಂಭಿಸಿದೆ. ಮೇಲ್ಮನೆಯಲ್ಲಿ ಕೂಡ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ನನಗೆ ಅನಿಸುತ್ತನೆ, ಈ ವರದಿ ಮೇಲೆ ಚರ್ಚೆ ಮಾಡುವುದು ಬರೀ ಕಂಠ ಶೋಷಣೆ ಮಾಡಿದ ಹಾಗೆ ಆಗಿದೆ. ಬರೀ ನಿದ್ದೆಗೇಡು ಆದ ಹಾಗೆ ಆಗಿದೆ. ಇದರಿಂದ ಏನೇನೂ ಸಾಧಿಸುವುದಕ್ಕೆ ಸಾಧ್ಯವಿಲ್ಲ. ಕೇಂದ್ರದಲ್ಲಿ ನಮ್ಮ ಹಿತ ಸಾಧನೆ ಮಾಡುವವರು ಯಾರೂ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಉದಾಹರಣೆ ಕೊಡುವುದಾದರೆ ಮಹಾಜನ್ ಕಮಿಷನ್ ನೇಮಕವಾದಾಗ ಇಡೀ ಮೈಸೂರು ರಾಜ್ಯದ ಕನ್ನಡ ಜನತೆ ಇದನು ವಿರೋಧಿಸಿದ್ದೇವೆ.

ಈ ಕಮಿಷನ್ ನೇಮಕವಾಗಬಾರದು ಎಂದು ಮೇಲ್ಮನೆಯಲ್ಲಿರತಕ್ಕ ಸದಸ್ಯರು ಕಾಂಗ್ರೆಸ್ಸಿನ ಮಿತ್ರರು, ಈ ಸಭೆಯಲ್ಲಿ ಇದ್ದವರೂ ದೊಡ್ಡದಾಗಿ ಬೇಕಾದಷ್ಟು ಗಲಾಟೆ ಮಾಡಿದರು. ಈ ಕಮಿಷನ್ ನೇಮಕವಾಗಬಾರದು ಎಂದು ಹೇಳಿದರು.

4.00 P.M.

ಆದರೆ ಏನಾಯಿತು ? ಅಲ್ಲಿ ಹೋದಮೇಲೆ ಡೆಲ್ಲಿಯಲ್ಲಿ ಚವಾಣರ ಮತ್ತು ಮಹಾರಾಷ್ಟ್ರಿಯರ ಒತ್ತಡ ಹೆಚ್ಚಾಗಿ ಮಹಾಜನ್ ಕಮಿಷನ್ ನೇಮಕವಾಯಿತು. ಸಮಿತಿ ನೇಮಕವಾದ ಮೇಲೆ ಮಹಾಜನ್ ಅವರು ತಮ್ಮಿಂದ ಆದ ಎಲ್ಲ ಪ್ರಯತ್ನಗಳನ್ನೂ ಮಾಡಿ, ಎಲ್ಲ ಕಡೆಗೂ ಹೋಗಿ, ಕೆಲವು ಮೈಸೂರು ಭಾಗಗಳು ಬಿಟ್ಟು ಹೋದರೂ ಕೂಡ, ಸಾಧ್ಯವಾದಷ್ಟು ಮಟ್ಟಿಗೆ ಒಂದು ಉತ್ತಮವಾದ ವರದಿಯನ್ನು ಅವರು ಕೊಟ್ಟಿದ್ದಾರೆ. ಈ ವರದಿ ಬಂದಮೇಲೆ ಯಾರು ಮಹಾಜನ್ ಕಮಿಷನ್ ಆಗಬೇಕೆಂದು ಒತ್ತಾಯ ಮಾಡಿದರೋ ಅವರೇ ಇದನ್ನು ಒಪ್ಪುವುದಿಲ್ಲ ಎಂದು ಹೇಳಿದರು. ಅವರ ಮಾತು ನಡೆಯುತ್ತದೆ. ನಮ್ಮ ರಾಜ್ಯದ ಮಾನ್ಯ ಕಾಂಗ್ರೆಸ್ಸಿನ ಮಿತ್ರರುಗಳೇನಿದ್ದಾರೆ, ಮುಖಂಡರುಗಳೇನಿದ್ದಾರೆ ಅವರು ಆಕಾಶಕ್ಕೆ ಹಾರಿ ವಿಮಾನಗಳನ್ನು ತಡೆದರೂ ಕೂಡ, ನೀರಿಗೆ ಧುಮುಕಿ ಸ್ಟೀಮರುಗಳನ್ನು ತಡೆದರೂ ಕೂಡ ಮಹಾಜನ್ ಕಮಿಷನ್ ವರದಿ ಕಾನೂನಾಗಿ ಬರುವುದಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಖಂಡಿತವಾಗಿ ಹೇಳುತ್ತೇನೆ. ಏಕೆಂದರೆ, ಮೈಸೂರು ಸರ್ಕಾರದ ನಪುಂಸಕತೆಯನ್ನು ನಮ್ಮ ಕೇಂದ್ರ ಸರ್ಕಾರದವರು ಬಹಳ ಹಿಂದೆಯೇ ಕಂಡುಕೊಂಡಿದ್ದಾರೆ. ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾದ ಮೇಲೆ ಕೇಂದ್ರ ಸರ್ಕಾರದವರು ನಮ್ಮ ದೇಶದ ಬಗೆಗೆ ಮಲತಾಯಿ ಧೋರಣೆಯನ್ನು ತೋರಿಸಿದ್ದಾರೆ. ಕೇಂದ್ರ ಸರ್ಕಾರದವರು ಟ್ಯುಟಿಕೋರಿನ್ ಬಂದರಿಗೆ 30 ಕೋಟಿ ರೂಪಾಯಿಗಳನ್ನು ಕೊಟ್ಟು ಮೈಸೂರು ಸರ್ಕಾರದ ಮಂಗಳೂರು ಬಂದರಿಗೆ ಒಂದು ಪೈಸೆ ಸಹ ಕೊಟ್ಟಿಲ್ಲ ಎಂದರೆ, ಇವರ ನಪುಂಸಕತೆಯನ್ನು ಅವರು ಎಷ್ಟರಮಟ್ಟಿಗೆ ಅರಿತಿದ್ದಾರೆ ಎನ್ನುವುದನ್ನು ನೋಡಿಕೊಳ್ಳಿ. ಈ ವರದಿಯನ್ನು ನಾವು ಒಪ್ಪಿಕೊಳ್ಳಬೇಕೆಂದು ಒಂದು ಸಬ್ಸ್ಟಿಟ್ಯೂಟ್ ಮೋಷನ್ ಅನ್ನು ಶ್ರೀಮಾನ್ ಜತ್ತಿ ಅವರು ತಂದಿದ್ದಾರೆ. ತಾವು ಇಂಥ ನೂರು ಸೂಚನೆಗಳನ್ನು ತಂದರೂ ಕೂಡ ಕೇಂದ್ರ ಸರ್ಕಾರ ನಿಮ್ಮ ಮಾತಿಗೆ ಮಣಿಯುವುದಿಲ್ಲ, ನಿಮ್ಮ ಮಾತಿಗೆ ಬೆಲೆ ಕೊಡುವುದಿಲ್ಲ, ಈ ಮಹಾಜನ್ ಕಮಿಷನ್ ವರದಿ ಕಾರ್ಯಗತವಾಗುವುದಿಲ್ಲ ಎಂದು ನಾನು ಇನ್ನೂ ಒಮ್ಮೆ ಒತ್ತಿ ಒತ್ತಿ ಹೇಳುತ್ತೇನೆ.

ನಾನು ಈ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಬೇಕಾಗಿದೆ. ನಮ್ಮ ನತದೃಷ್ಟ ಕಾಸರಗೋಡಿನ ಕನ್ನಡಿಗರಿಗೆ ಸಮಾಧಾನವಾಗಲಿ ಎಂದು ಒಂದೆರಡು ಮಾತುಗಳನ್ನು ಈ ಸಮಸ್ಯೆಯ ಮೇಲೆ ಮಾತನಾಡಬೇಕಾಗಿದೆ, ಅದನ್ನು ಹೇಳುತ್ತೇನೆ.

ಸ್ವಾಮಿ, ಕಾಸರಗೋಡಿನ ಕನ್ನಡಿಗರಿಗೆ ಎಸ್. ಆರ್. ಸಿ. ರಿಪೋರ್ಟ್ ಬಹಳ ಅನ್ಯಾಯ ಮಾಡಿದೆ. ಎಷ್ಟರಮಟ್ಟಿಗೆ ಅನ್ಯಾಯ ಮಾಡಿದೆ ಎಂದರೆ, ಅದರಲ್ಲಿ ಇದ್ದ ಓರ್ವ ಮಾನ್ಯ ಸದಸ್ಯರಾದ ಪಣಿಕ್ಕರ್ ಅವರು ಕನ್ನಡ ಜನತೆಯನ್ನು ನಂಬಿಸಿ ವಂಚನೆ ಮಾಡಿದ್ದಾರೆ. ಚಂದ್ರಗಿರಿ ಹೊಳೆಯ ಉತ್ತರ ಭಾಗದ ಗ್ರಾಮಗಳೇನಿವೆ ಅವು ನಿಜವಾಗಿಯೂ ಕರ್ಣಾಟಕಕ್ಕೆ ಸೇರಬೇಕು ಎಂದು ಮಂಗಳೂರಿನಲ್ಲಿ ಅವರು ಪ್ರಥಮ ಬಾರಿಗೆ ಕುಳಿತಾಗ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರಿಗೆ ಆಶ್ವಾಸನೆಯನ್ನು ಇತ್ತಿದ್ದಾರೆ :

> "The 'Kasaragod' is the creation of the States Reorganisation Commission. The suggestion that in the reorganisation of States Chandragiri River should be the boundary line between Karnataka and Kerala had first come from Sardar Panicker, one of the members of the States Re-organisation Commission, at the sitting of the Commission in Mangalore, and he proceeded to state that he was very well aware that this has been the traditional boundary line between Kerala and Tulunad, which no Nayar woman of Kerala was permitted to cross for fear of loss of caste."

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಮೊದಲು ಏನು ಹೇಳಿದ್ದಾರೆಂದರೆ, ಚಂದ್ರಗಿರಿ ಹೊಳೆಯನ್ನು ದಾಟಿ ಉತ್ತರಕ್ಕೆ ಬಂದರೆ ಕೇರಳದ ನಾಯರ ಜಾತಿಯ ಹೆಂಗಸರು ಅವರ ಜಾತಿಯನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಇದು ನಿಜವಾಗಿಯೂ ಕರ್ಣಾಟಕಕ್ಕೆ ಸೇರಲೇಬೇಕು ಎಂದು ಸರ್ದಾರ್ ಫಣಿಕ್ಕರ್ ಅವರು ಪ್ರಥಮತಃ ಹೇಳಿದ್ದಾರೆ. ಆಮೇಲೆ ಮುಂದೆ ಹೋಗುತ್ತ ಅವರು ಆಡಳಿತೆಯ ಸೌಕರ್ಯಕ್ಕಾಗಿ ಜಿಲ್ಲೆಯನ್ನು ಘಟಕವಾಗಿ ಇಟ್ಟುಕೊಂಡು ರಿಪೋರ್ಟನ್ನು ತಯಾರು ಮಾಡುತ್ತೇನೆ ಎಂದು ಹೇಳಿ ಇನ್ನೂ ಅನ್ಯಾಯ ವನ್ನು ಮಾಡಿದ್ದಾರೆ :

"In our scheme of re-organisation we have adopted the District as the basic unit for making territorial readjustments. This is because we feel that Districts have developed an organic and administrative unity and an economic life of their own, and any adjustments below the district level, therefore should normally be avoided."

ಹೀಗಿರುವಾಗ ಕಾಸರಗೋಡು ತಾಲ್ಲೂಕು ಆಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿತ್ತು. ಜಿಲ್ಲೆಯನ್ನು ಘಟಕವಾಗಿ ತೆಗೆದುಕೊಂಡರೂ ಕೂಡ ಕಾಸರಗೋಡು ಆಗ ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ರಿಂದ ಕರ್ಣಾಟಕಕ್ಕೆ ಹೋಗಬೇಕಾಗಿತ್ತು. ಇಷ್ಟೆಲ್ಲ ಕನ್ನಡಿಗರನ್ನು ಸಮಾಧಾನಪಡಿಸಿ ರಿಪೋರ್ಟನ್ನು ತಯಾರು ಮಾಡಿ ಕೊಡುವಾಗ ಕಾಸರಗೋಡು ತಾಲ್ಲೂಕನ್ನು ಅವರು ಕೇರಳಕ್ಕೆ ಸೇರಿಸಿದರು. ಈಗ ಕೂಡ ಕೇರಳದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಂಬೂದಿರಿಪಾಡ್ ಅವರು ನಾವು ಕಮಿಷನ್ ಅನ್ನು ಬಾಯ್‌ಕಾಟ್ ಮಾಡುತ್ತೇವೆ, ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಕೆಲವು ವರ್ಷಗಳ ಹಿಂದೆ, ನನ್ನ ಮಾನ್ಯ ಮಿತ್ರರಾದ ವಿಟ್ಠಲದಾಸ ಶೆಟ್ಟಿ ಅವರು ಹೇಳಿದಹಾಗೆ, 1952 ರಲ್ಲಿ ಶ್ರೀ ನಂಬೂದಿರಿಪಾಡ್ ಅವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಅವರು ಏನು ಹೇಳಿದ್ದಾರೆಂದರೆ :

"Sri E. M. S. Namboodripad, who was the first Chief Minister of Kerala in 1957–59, and who is heading the Government in Kerala once again since the second week of March after the General Elections in 1967, in his book "The National Question in Kerala" published in 1952 in describing the limits of Kerala State at pages 2 and 3, that "to the west of Kerala lies the Arabian sea, and to the east the western ghats. On its immediate south lie parts of Tamilnad and on its north live the Tulu, Coorg and other peoples who are generally considered to be part of Karnataka."

ಸ್ವಾಮಿ, ಇನ್ನೂ ಒಂದು ವಿಷಯವನ್ನು ಅವರು ಹೇಳಿದ್ದಾರೆ :

"The part of the South Kanara and Neelagiri Districts, that form part of Kerala do not form one whole Taluk, only about half the Kasargod Taluk in South Kanara and part of Gudulur Taluk in Nilgiri District being part of Kerala."

ಅವರೇ ಒಪ್ಪಿದ್ದಾರೆ, ಕಾಸರಗೋಡು ತಾಲ್ಲೂಕಿನ ಅರ್ಧ ಭಾಗ ಮಾತ್ರ ಕೇರಳ ರಾಜ್ಯಕ್ಕೆ ಸೇರ ಬೇಕು, ಉಳಿದ ಅರ್ಧ ಭಾಗ ನಿಜವಾಗಿಯೂ ಕರ್ಣಾಟಕಕ್ಕೆ ಹೋಗಬೇಕು ಎನ್ನುವ ಅರ್ಥದಲ್ಲಿ ಅವರ ಪುಸ್ತಕದಲ್ಲಿ ಬರೆದಿದ್ದಾರೆ.

ಸ್ವಾಮಿ, ಕಾಸರಗೋಡಿನಲ್ಲಿ ಆಗಿನ ಲೆಕ್ಕಾಚಾರವನ್ನು ನಾವು ತೆಗೆದು ನೋಡಿದರೂ ಕೂಡ, ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಕಾಸರಗೋಡಿನ ಜನತೆಯನ್ನು ತಮ್ಮ ಮೋಸಕ್ಕೆ ಗುರಿ ಮಾಡಿ ದ್ದಾರೆ ಎಸ್. ಆರ್. ಸಿ. ರಿಪೋರ್ಟಿನಲ್ಲಿ. ಸ್ವಾಮಿ, ಕಾಸರಗೋಡಿನ ಮೂರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ 1-11-56 ರಿಂದ 31-12-66ರ ವರೆಗೆ ಏನು ಡಾಕ್ಯುಮೆಂಟ್‌ಗಳು ರಿಜಿಸ್ಟರಾಗಿವೆ

ಅದರ ಲೆಕ್ಕಾಚಾರವನ್ನು ತಮಗೆ ಕೊಡುತ್ತೇನೆ. 1956ರಿಂದ 1966ನೇ ಇಸವಿಯವರೆಗೆ 22,549 ಡಾಕ್ಯುಮೆಂಟ್ಸ್ ಕಾಸರಗೋಡು ಸಬ್ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ರಿಜಿಸ್ಟರಾಗಿವೆ. ಅದರಲ್ಲಿ 22,140 ಕನ್ನಡದಲ್ಲಿವೆ, 270 ಇಂಗ್ಲಿಷಿನಲ್ಲಿವೆ 138 ಮಾತ್ರ ಮಲೆಯಾಳ ಭಾಷೆಯಲ್ಲಿವೆ. ಇನ್ನೊಂದು ಸಬ್ ರಿಜಿಸ್ಟ್ರಾರ್ ಆಫೀಸು ಮಂಜೇಶ್ವರದಲ್ಲಿದೆ. ಅಲ್ಲಿ 10,124 ಡಾಕ್ಯುಮೆಂಟುಗಳು ರಿಜಿಸ್ಟರಾಗಿವೆ. ಇದರಲ್ಲಿ 10,092 ಕನ್ನಡದಲ್ಲೂ, 32 ಮಲೆಯಾಳದಲ್ಲೂ ಆಗಿವೆ. ಬದಿಯಡಕ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ 4,685 ಡಾಕ್ಯುಮೆಂಟುಗಳು ರಿಜಿಸ್ಟರಾಗಿರುವುದರಲ್ಲಿ 4,249 ಕನ್ನಡದಲ್ಲಿಯೂ, 131 ಮಳೆಯಾಳಂನಲ್ಲಿಯೂ, 305 ಇಂಗ್ಲೀಷಿನಲ್ಲಿಯೂ ಇವೆ. ಈ 131 ಕೂಡ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಕನ್ನಡದ ಫಾರಂಗಳು ಸಿಕ್ಕದೆ ಮಲೆಯಾಳ ಭಾಷೆಯ ಫಾರಂಗಳು ಇದ್ದುದರಿಂದ ಅವರು ರಿಜಿಸ್ಟರ್ ಮಾಡಿರುವ ಡಾಕ್ಯುಮೆಂಟುಗಳೂ ಆಗಿವೆ. ಇನ್ನೂ ಶಾಲಾ ಲೆಕ್ಕಾಚಾರವನ್ನು ತೆಗೆದು ಹೇಳುವುದಾದರೆ. 1960ರಲ್ಲಿ ಚಂದ್ರಗಿರಿ ಹೊಳೆಯ ಉತ್ತರ ಭಾಗಕ್ಕೆ 30,080 ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಇವರಲ್ಲಿ 20,943 ಶಾಲಾ ಮಕ್ಕಳು ಕನ್ನಡಿಗರು, ಕನ್ನಡವನ್ನು ಕಲಿಯುತ್ತಿದ್ದರು, 7,036 ಜನ ಮಾತ್ರ ಮಲೆಯಾಳಿ ಮಕ್ಕಳಿದ್ದರು. ಆ ಭಾಗದಲ್ಲಿರುವ 164 ಶಾಲೆಗಳಲ್ಲಿ 144 ಕನ್ನಡ ಶಾಲೆಗಳು, 20 ಮಲೆಯಾಳಿ ಶಾಲೆಗಳು ಆಗಿದ್ದವು, ಹೀಗಿದ್ದೂ ಕೂಡ ಎಸ್.ಆರ್.ಸಿ. ರಿಪೋರ್ಟ್ ಮುಂದೆ ಬಂದಾಗ ಕಾಸರಗೋಡಿನ ಕನ್ನಡಿಗರಿಗೆ ಅತೀವ ವೇದನೆಯಾಯಿತು. ಅವರು ಬಂದವೇಳೆ ದೊಡ್ಡ ವಂಚನೆಮಾಡಿದ್ದಾರೆ ಎಂದು 1956ರಲ್ಲಿ ಗಡಿ ವರದಿ ಬಂದಮೇಲೆ ಮದರಾಸು ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಕಮಿಟಿಯಲ್ಲಿ ನಿರ್ಣಯಮಾಡಿ ಬಹಳವಾಗಿ ವಿರೋಧಿಸಿದರು. ಆದರೆ ಎಸ್. ಆರ್. ಸಿ. ವರದಿ ಕಾರ್ಯಗತವಾಯಿತು. ಕಾಸರಗೋಡಿನ ಕನ್ನಡಿಗರು ಸಾಧಾರಣವಾಗಿ 11 ವರ್ಷಗಳಿಂದ ಕೇರಳದ ಜನರ ಕಿರುಕುಳ ತಡೆಯಲಾರದೆ ಒದ್ದಾಡುತ್ತಿದ್ದಾರೆ. ಯಾವುದೇ ಸಹಾಯವಾಗದಿದ್ದರೂ ಕೂಡ ಗಡಿಯಲ್ಲಿರುವ ಮತ್ತು ಪರ ರಾಜ್ಯಗಳಲ್ಲಿರುವ ಕನ್ನಡಿಗರ ಹಿತ ದೃಷ್ಟಿಯಿಂದ ನಾವು ಈ ಕಮಿಷನ್ ವರದಿಯನ್ನು ಒಪ್ಪುವಹಾಗೆ ಒತ್ತಾಯಮಾಡಬೇಕು, ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡುವಹಾಗೆ ನೋಡಬೇಕು ಎಂದು ಸರಕಾರದಲ್ಲಿ ತಮ್ಮ ಮೂಲಕ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ಆದರೆ ನನಗೆ ಈ ವರದಿ ಕಾರ್ಯಗತವಾಗುತ್ತದೆಂಬ ಧೈರ್ಯವಿಲ್ಲ ಎಂದು ಆಗಲೇ ಹೇಳಿದ್ದೇನೆ. ಇಲ್ಲೊಂದು ಮೋಷನ್ ಮೂವ್ ಮಾಡಿ ಕೇಂದ್ರ ಸರಕಾರ ಇನ್ನೊಂದು ಸೂಚನೆ ಮಂಡಿಸಿದರೆ ಸಾಲದು. ಈಗ ಲೋಕಸಭೆ ನಡೆಯುತ್ತಿದೆ, ಅಲ್ಲಿ ನಿರ್ಧಾರವಾಗಿ ಕಾನೂನಾಗಿ ಜಾರಿಗೆ ಬರಬೇಕು. ಒಂದುವೇಳೆ ಹಾಗಾಗಿ ಜಾರಿಗೆ ಬರದಿದ್ದರೆ ಮೈಸೂರು ಮಂತ್ರಿಮಂಡಲ ರಾಜೀನಾಮೆ ಕೊಡಬೇಕು, ನಾವೂ ಕೊಡುತ್ತೇವೆ. ಇದಕ್ಕೆ ತಕ್ಕಂತೆ ಒಂದು ನಿರ್ಣಯವನ್ನು ಈ ಮಾನ್ಯ ಸಭೆಯಲ್ಲಿ ಒಮ್ಮತದಿಂದ ಮಾಡೋಣ. ಈಗ ಹಾಗೆ ಮಾಡದಿದ್ದರೆ ಪ್ರಯೋಜನವಾಗುವುದಿಲ್ಲ. ಈಗ ನಾವು ಮಾಡುವ ನಿರ್ಣಯ ಕಾರ್ಯಗತವಾಗದಿದ್ದರೆ ನಾವೆಲ್ಲರೂ ಒಟ್ಟಿಗೆ ರಾಜೀನಾಮೆ ಕೊಡೋಣ ಇದಕ್ಕೆ ಈ ಸಭೆ ಬೆಂಬಲ ಕೊಡುತ್ತದೆ, ಆ ವಿಶ್ವಾಸ ನನಗಿದೆ. ನಿಮಗೆ ಆ ಧೈರ್ಯವಿಲ್ಲ. ನಮ್ಮ ರಾಜ್ಯದಲ್ಲಿ ಭಾಷಾ ಸಮಸ್ಯೆ, ಗಡಿ ಸಮಸ್ಯೆ ಮುಂತಾದ ಅನೇಕ ಸಮಸ್ಯೆಗಳಿವೆ, ಜಾದುಗಾರರ ಹಾಗೆ ಜನರನ್ನು ಕಟ್ಟಿಕೊಂಡು ಓಟು ಕೇಳಿದರೆ ಸಾಲದು, ಪುರುಷತ್ವವಿರಬೇಕು. ಈ ವರದಿ ಜಾರಿಗೆ ಬರುತ್ತದೆಂಬ ನಂಬಿಕೆ ನನಗಿಲ್ಲ.

ಮಹಾರಾಷ್ಟ್ರದಲ್ಲಿರುವ ಮತ್ತು ಗಡಿ ಪ್ರದೇಶಗಳಲ್ಲಿರುವ ನಮ್ಮ ಕನ್ನಡಿಗರ ಪರಿಸ್ಥಿತಿ ನೋಡಬೇಕು. ಅಲ್ಲಿ ಶಿವಸೇನೆ ಎಂಬುದು ನಿರ್ಮಾಣವಾಗಿ ದಕ್ಷಿಣ ಭಾರತದವರನ್ನು ಅಲ್ಲಿಂದ ಹೊರಡಿಸಲು ತೊಡಗಿದೆ. ಅದನ್ನು ನಾನು ನೋಡಿದ್ದೇನೆ* * * * * * *.

Sri S. R. KANTHI.—I rise to a point of order. The Hon'ble Member has stated names. Those persons are not here to defend themselves. That is why I suggest that names that are quoted here may be expunged from the records. A very serious charge is made against one of the important citizens ef the country. That is why I say that it is not fair that any remarks should be made against a person who is not a Member of this House and who cannot defend himself.

Mr. DEPUTY SPEAKER.—Members have been requested several times not to bring in names into discussion.

* * *Matter expunged as ordered by the Chair.

ಶ್ರೀ ಬಿ. ಭಾಸ್ಕರಶೆಟ್ಟಿ.—ಇದುವರೆಗೆ ಮಾನ್ಯ ಸದಸ್ಯರು ಎಷ್ಟೋ ಜನರ ಹೆಸರುಗಳನ್ನು ಹೇಳಿದ್ದಾರೆ, ಪ್ರೊಸೀಡಿಂಗ್ಸ್ ನೋಡಬಹುದು, ಯಾರೂ ಹೇಳದಿದ್ದರೆ ನಾನೂ ಹೇಳುವುದಿಲ್ಲ. ಶಿವಸೇನೆಗೆ ಅಪ್ರತ್ಯಕ್ಷವಾಗಿ ಮುಂಬಯಿ ಮುಖ್ಯ ಮಂತ್ರಿಗಳು ಮತ್ತು ಚವಾಣರು ಬೆಂಬಲ ಕೊಡುತ್ತಿದ್ದಾರೆ. ಶಿವಸೇನೆಗೆ ಸಂಬಂಧಪಟ್ಟ ಒಂದು ಪುಸ್ತಕವಿದೆ. ಅದರಲ್ಲಿ ಹೀಗಿದೆ; ಬಾಲ್ ಥಕ್ಕರೆಯವರು ಹೀಗೆ ಬರೆದಿದ್ದಾರೆ :

"A few days back Mr. Ramakrishna Hegde, Mysore State Finance Minister, while on tour to Goa, addressed a public meeting. Without reason or rhyme he dragged in a reference to Shiv Sena and uttered aveiled thread of retaliation. 'Suppose,' said he, 'if alike the intent of Shiv Sena to drive out South Indians from Maharashtra State, all other States mean to expel Maharashtrian colonists, what would be the consequences ? ' *Absolutely nothing* ! Mr. Hegde seems to have overlooked the fact that alike the States of Madras, Andhra, Mysore, Kerala and others, Maharashtra has not sent out gangs of beggars, freebooters, exportees, criminals, habitual convicts. bootleggers and marauders."

ಇಲ್ಲಿ ಎಷ್ಟೋ ತುಚ್ಛವಾದ ಶಬ್ದಗಳನ್ನು ಉಪಯೋಗಿಸಿದ್ದಾರೆ. ಬೇರೆ ದಕ್ಷಿಣ ರಾಜ್ಯಗಳಹಾಗೆ ಕ್ರಿಮಿನಲ್ಸ್, ಬೂಟ್‌ಲೆಗರ್ಸ್ ಮುಂತಾದವರನ್ನು ಕಳಿಸಿಲ್ಲವೆಂದು ಥಕ್ರೆಯವರು ಹೇಳಿದ್ದಾರೆ. ಮತ್ತೊಂದು ಕಡೆ ಅವರು ಹೀಗೆ ಹೇಳಿದ್ದಾರೆ :

"We point our finger at Ud ipi Hotels and Zopadpatties as the dens of numerous crimes."

ಈ ಹೋಟಲುಗಳಲ್ಲಿರುವವರು ಕ್ರಿಮಿನಲ್ಸ್ ಎಂದು ಗೊತ್ತಾಗಿರುವುದಾಗಿ ಹೇಳಿದ್ದಾರೆ.

ಈ ಶಿವಸೇವೆ 30-10-1966ರಲ್ಲಿ ಶಿವಾಜಿ ಪಾರ್ಕಿನಲ್ಲಿ ಪ್ರಥಮವಾಗಿ ಸಾರ್ವಜನಿಕ ಸಭೆಯನ್ನು ಮಾಡಿತು, ಆ ದಿವಸ ಲಕ್ಷಾಂತರ ಮಂದಿ ಸೇರಿದ್ದರು, ಆ ಸಭೆಯಲ್ಲಿ ದಕ್ಷಿಣ ಹಿಂದೂದೇಶದವರು ಅದರಲ್ಲೂ ಉಡುಪಿ ಹೊಟೇಲ್‌ನವರನ್ನು ಬಯ್ಯಲಾಯಿತು. ಆಗ ಮುಂಬೈನ ತಮ್ಮ ಪಾರ್ಟಿ ಮುಖ್ಯ ಮಂತ್ರಿಗಳಾದ ವಿ. ಪಿ. ನಾಯಕ್‌ರವರೂ ಹಾಜರಿದ್ದರು ಎಂದು ಬೇಕಾದರೆ ನಾನು ನಿಮಗೆ ರುಜುವಾತು ಮಾಡುತ್ತೇನೆ. ಅವರು ಆ ಸಮಯದಲ್ಲಿ ಹಾಜರಿದ್ದರು, ಸಭೆ ಬರಖಾಸ್ತಾಗಿ ಜನ ಹಿಂದಕ್ಕೆ ಹೋಗುವಾಗ 34 ಉಡುಪಿ ಹೊಟೇಲುಗಳ ಮೇಲೆ ಕಲ್ಲುಗಳನ್ನು ಸೋಡಾ ಬಾಟಲುಗಳನ್ನು ಎಸೆದು ಸಾವಿರಾರು ರೂಪಾಯಿಗಳನ್ನು ನಷ್ಟಮಾಡಿದ್ದಾರೆ. ಈ ಒಂದು ತೊಂದರೆ ಉಡುಪಿ ಹೊಟೇಲುಗಳಿಗೆ ಮಾತ್ರವಲ್ಲ ಹೆಂಗಸರು ದಾರಿಯಲ್ಲಿ ಹೋಗುತ್ತಾ ಇದ್ದರೆ ಅವರ ಮೇಲೆ ಕೈ ಹಾಕಿ ಅವರ ಮರ್ಯಾದೆಯನ್ನು ತೆಗೆದಿದ್ದಾರೆ. ಇಂತಹ ಅಮಾನುಷ ರೀತಿಯಲ್ಲಿ ಈ ಶಿವಸೇನೆ ವರ್ತನೆ ಮಾಡುತ್ತಾ ಇದೆ. ನಾನೂ ಕೂಡ ಎರಡು ಮೂರು ಸಲ ಮುಖ್ಯ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ, ಮಾತ್ರವಲ್ಲ, ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೂ ಮತ್ತು ಚವಾನ್‌ರವರಿಗೂ ಈ ವಿಚಾರ ತಿಳಿಸಿದ್ದೇನೆ. ಶಿವಸೇನೆಯವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ನಮ್ಮ ಜನರನ್ನು ಅರೆಸ್ಟ್ ಮಾಡಿ ಎರಡು ಮೂರು ದಿವಸ ಜೈಲಿನಲ್ಲಿ ಹಾಕಿದ್ದಾರೆ. ಇದರಿಂದಾಗಿ ನಮ್ಮ ಜನಕ್ಕೆ ಅಲ್ಲಿ ಕಾನೂನಿನ ರಕ್ಷಣೆ ಇಲ್ಲ. ಮೊನ್ನೆ ಕೇಂದ್ರ ಗೃಹ ಮಂತ್ರಿ ವೈ. ಬಿ. ಚವಾನ್‌ರವರು ಶಿವಸೇನೆಯನ್ನು ಸ್ವಲ್ಪ ಟೀಕಿಸಿದ್ದಾರೆ, ಶಿವಸೇನೆಯವರು ಇಂತಹ ಕೃತ್ಯ ಮಾಡಿದ್ದಾರೆ ; ಇದನ್ನು ಒಪ್ಪುತ್ತೇನೆ ಆದರೆ ಅದರ ಮೇಲೆ ಬ್ಯಾನ್ ಹಾಕಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ, ಇದು ಒಂದು ನಾಟಕ, ನೀನು ಸತ್ತ ಹಾಗೆ ಮಾಡು ನಾನೂ ಸತ್ತ ಹಾಗೆ ಮಾಡುತ್ತೇನೆ. ಅಂತ ಶ್ರೀಮಾನ್ ವೈ. ಬಿ. ಚವಾನ್‌ನವರಿಗೂ ಶಿವಸೇನೆಯ ಸಂಸ್ಥಾಪಕರಾದ ಬಾಲಥಾಕರೆ ಅವರಿಗೂ ಸಂಬಂಧ ಇದೆ. ಅದ್ದರಿಂದ ಶ್ರೀಮಾನ್ ಚವಾನ್‌ರವರಿಗೆ ಒತ್ತಿ ಹೇಳುತ್ತೇನೆ, ಈ ಶಿವಸೇನೆಯನ್ನು ಮುಟ್ಟುಗೋಲು ಹಾಕದಿದ್ದರೆ ದಕ್ಷಿಣ ಹಿಂದೂ ದೇಶದವರು ಮುಂಬೈಗೆ ಹೋಗುವಂತೆಯೇ ಇಲ್ಲ. ಮುಂಬೈನಿಂದ ದಕ್ಷಿಣ ಹಿಂದೂದೇಶದವರನ್ನು ಹೊರಗೆ ಹಾಕಬೇಕೆಂದು ಶಿವಸೇನೆಯವರು ಒಂದೇ ಸಮ ಅಪಪ್ರಚಾರ ಮಾಡುತ್ತಾ ಇದ್ದಾರೆ, ಒಂದು ಉದಾಹರಣೆ : ಅವರು ಎಷ್ಟು ಉಪಟಳ ಕೊಡುತ್ತಾ ಇದ್ದಾರೆ ಎಂಬುದನ್ನು ಹೇಳುವುದಾದರೆ ನಾನು ಮುಂಬೈಗೆ ಹೋದಾಗ

17-8-1967ರಂದು ಗಣೇಶನ ಒಂದು ದೊಡ್ಡ ಮೆರವಣಿಗೆ ಹೋಗುತ್ತಾ ಇತ್ತು, ಅಲ್ಲಿ ಲುಂಗಿ ವಾಲೇ ಕೋ ಹಟಾವ್ ಅಂತ ಘೋಷಣೆ ಮಾಡುತ್ತಾ ಇದ್ದರು. ಯಾರು ದಟ್ಟಿವಸ್ತ್ರವನ್ನು ಉಟ್ಟು ಕೊಂಡಿದ್ದಾರೋ ಅವರನ್ನು ಮುಂಬೈನಿಂದ ಓಡಿಸಿರಿ ಎಂದು ಕೂಗಿಕೊಂಡು ಹೋಗುತ್ತಾ ಇದ್ದರು. ದಕ್ಷಿಣ ಹಿಂದೂ ದೇಶದವರ ಹೋಟೇಲ್ ಸಿಕ್ಕಲಿ, ಅಂಗಡಿ ಸಿಕ್ಕಲಿ ಅದಕ್ಕೆ ಕಲ್ಲು ಹೊಡೆಯುತ್ತಾ ಇದ್ದರು. ಇನ್ನೊಂದು ಸಣ್ಣ ವಿಷಯ ಹೇಳುತ್ತೇನೆ. ಅವರು ಎಷ್ಟು ಸಂಕುಚಿತವಾದ ಮನಸ್ಸು ಹೊಂದಿದ್ದಾರೆ ಎಂದರೆ, ಹೋದ ಗಣೇಶನ ಚತುರ್ಥಿ ದಿವಸ ಕೇರಳದವರು ಮುಂಬೈನಲ್ಲಿ ಸೀಯಾಳ ಮಾರುತ್ತಾ ಇದ್ದರು, ಲಕ್ಷಗಟ್ಟಲೆ ಮಾರಾಟವಾಗುತ್ತಾ ಇತ್ತು, ಈ ಸೀಯಾಳವನ್ನು ಯಾರು ತೆಗೆದು ಕೊಳ್ಳಬಾರದು ಎಂದು ಮಹಾರಾಷ್ಟ್ರಿಯರಿಗೆ ಕಟ್ಟಪ್ಪಣೆ ಮಾಡಿದರು; ಮಾತ್ರವಲ್ಲ, ಅವರಲ್ಲೇ ಯಾರೋ ಕೆಲವರು ಸೀಯಾಳವನ್ನು ಮಾರುವುದಕ್ಕೆ ಶುರು ಮಾಡಿದರು, 20 ನಿಮಿಷ, ಅರ್ಧ ಗಂಟೆ ಯಾದರೂ ಕೂಡ ಅವರಿಂದ ಒಂದು ಸೀಯಾಳವನ್ನು ಕೆತ್ತಲಿಕ್ಕೆ ಬರಲಿಲ್ಲ. ಕೇರಳದವರಾದರೆ ಐದು ನಿಮಿಷಕ್ಕೆ ಐದು ಸೀಯಾಳ ಕೆತ್ತಿ ಕೊಡುತ್ತಾರೆ, ಅದು ಅವರಿಗೆ ಗೊತ್ತು. ಹೀಗಾಗಿ ಆ ದಿವಸ ಮುಂಬೈನಲ್ಲಿ ಗಣೇಶನಿಗೆ ಸೀಯಾಳದ ಅಭಿಷೇಕ ತಪ್ಪಿಹೋಯಿತು. ಈ ರೀತಿ ಗಣೇಶನಿಗೆ ವಿಘ್ನ ವನ್ನು ತಂದಿದ್ದಾರೆ ಈ ಶಿವಸೇನೆಯವರು. ಈ ಮನೆಯಲ್ಲಿ ಈ ಶಿವಸೇನೆಯನ್ನು ಮುಟ್ಟುಗೋಲು ಹಾಕಬೇಕೆಂಬ ಒಂದು ನಿರ್ಣಯವನ್ನು ಸರ್ಕಾರದ ಮುಖಾಂತರ ತಂದು ಅದನ್ನೂ ಕೂಡ ಕೇಂದ್ರ ಸರ್ಕಾರದವರಿಗೆ ಕಳುಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾತ್ರ ವಲ್ಲ ಈ ಶಿವಸೇನೆಗೆ ತಾವು ತಮ್ಮ ಪ್ರತಿಭಟನೆಯನ್ನು ಕೇಂದ್ರ ಸರ್ಕಾರಕ್ಕೂ ಮುಂಬೈ ಸರ್ಕಾರಕ್ಕೂ ಸಲ್ಲಿಸಬೇಕೆಂದು ಹೇಳಿ ಮುಂಬೈನಲ್ಲಿರುವ ದಕ್ಷಿಣ ಹಿಂದೂ ದೇಶದವರ ಪರವಾಗಿ ಅದರಲ್ಲೂ ಮೈಸೂರಿನ ಕನ್ನಡಿಗರ ಪರವಾಗಿ ಒತ್ತಾಯ ಮಾಡಿ ನನಗೆ ಮಾತನಾಡಲು ಸಮಯ ಕೊಟ್ಟದ ಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri S. R. KANTHI (Minister for Law and Parliamentary Affairs).—Sir, I have heard with patience the criticism levelled by the Members of the M.E.S. Group and also the support given by the other Members of the House to whichever side they may belong. Sir, I must say at the outset that the Members of the MES group have not studied the Mahajan Commission Report at all. They have read portions here and there and whatever has suited them, they have said here in this House, and they have called the Report as Black report. I must say that the Mahajan Commission Report was submitted on the 29th of August 1967 or so, and on the 14th September. 1967 the Chief Minister of Maharashtra has made the statement that the Report is binding on them. Though about a fortnight had passed after submission of the report, he made a statement to the effect that the report was binding on all the parties. Sir, he changed his mind only after he came to know all the recommendations made by the Commission between 29th August 1967 and 14th September 1967. Though the report had been submitted, his recommendations had been kept a secret and he did not know that the recommendations were so far-reaching and the opinion of the extremist Maharashtrians was against them. Sir, even now, I would like to refer the Hon'ble Members to the memories. The SRC put as criterion certain elements which they took into consideration. They said that the taluk should be a unit and 70 per cent population should be the criterion. If 70 per cent of the population of a taluk were of one linguistic origin speaking one language, then it would be transferred to that area. Sir, there have been Commissions and Commissions. You know Sir, there was a commission called the Shaw Commission for partitioning the Punjab into two parts, Hariana and Punjab. There they made a slight change and that change was 60 per cent population and a sizeable block

(SRI S. R. KANTHI)

or area where the people speak that language and that block should also contain 20,000 population. These are the criteria which have been taken by the Mahajan Commission. I will read portions where he has said these things:

> "My view is that where there is a sizable compact tract where a language group predominates and the population is at least round about 20,000 that area may be considered as a unit for resolving the boundary dispute. Such an area may well be joined to the unilingual State adjoining it."

4-30 P.M.

That is one criterion.

The second criterion is:

> "On a proper construction of the charter appointing the One-Man Commission the inference is clear that the Commission has been told to settle the disputes principally on the ground of linguistic considerations as the States in India have been broadly reorganised on that basis. However, for reasons to be stated which may be of compelling nature, the Commission may take into consideration other factors, namely, communications, geographical conditions, administrative convenience and economic considerations and these may in some cases overweigh the linguistic considerations."

The first and foremost thing is that linguistic considerations should be taken into consideration. But where there are other factors which outweigh linguistic considerations, then only there should be departure. A departure has been made in the case of Mysore and that of Kasargod. It has been given to us not on the consideration of linguistic basis but on the consideration of homogeneity, of economic viability, of communications and of administrative convenience but in other cases there has been no departure whatsoever. He, however, goes on:

> "This view of the matter was not really disputed by Maharashtra. Therefore, I take it that I have to settle this matter prima facie on considerations of linguistic homogeneity except for compelling reasons."

Just as in the case of Kasargod.

He has said what homogeneity is. He has said that a block, which he calls as tract, should contain a poulation of 20,000 and it should be 60 per cent. I will read that also:

> "My view is that where there is a sizable compact tract where a language group predominates and the population is at least

round about 20,000 that area may be considered as a unit for resolving the boundary dispute."

Then the third criterion is given in the following sentence :

" I have also held that the percentage of population over and above 50 per cent, and ordinarily 60 per cent should be regarded as stable and if the population of the language group is below this percentage no change in the *status quo* should be made."

It should be above 50 per cent and ordinarily 60 per cent. If it is below 60 per cent or 50 per cent, it should not be taken into consideration ; and the case of that area should not be given preference.

Mr. Mahajan has elaborated the criterion as follows :

" Wherever I have recommended change it would be seen that the percentage is much higher than 60 per cent, in some cases over 80 per cent. The State of Maharashtra also gave me percentage of population in villages claimed by them. It comes to over 60 per cent."

These three criteria are the main guiding factors which have been consistently followed by the Mahajan Commission.

SRI B. B. SAYANAK.—What about South Satara ?

SRI S. R. KANTHI.- In South Satara 51 per cent has been taken as criterion. The Maharashtra State has been saying that South Satara, Akkalkot Taluk and various other Taluks pertain to Kannada area. Since the Maharashtra Government have admitted the grounds for transfer, where is the question of Mahajan going back on his criteria ? In respect of the 260 villages the Maharashtra Government offered to Mysore, Mr. Mahajan made a recommendation only in respect of 247 villages. That argument does not hold at all. The criteria which are applied by the esteemed Mahajan, a great man, cannot be challenged at all.

If you take any group of villages (he has called tract), if you take those blocks into consideration, he has completely rejected the principle of village as a unit.

SRI B. P. KADAM.—Please take South Sholapur and Akkalkot area. When compact Kannada Taluks are taken into consideration, Marathi dominated compact areas are excluded. In these Marathi areas, the percentage goes above 60 per cent. It is also admitted on all hands both by the Maharashtra Government and the Mysore Government that those blocks cannot be segregated from the compact Marathi area.

SRI S. R. KANTHI.—Out of 65 villages, 25 villages are below 50 per cent.

(SRI S. R. KANTHI)

I have already stated that these villages have been offered by the Maharashtra Government. Where is the question of allocation in respect of them?

Mr. Mahajan has rejected village as a unit. Even in the Redcliffe Award, village has not been taken as unit. They say that Mahajan was prepared to take village as unit if Redcliffe had taken village as unit. He has not advocated village as unit. The Shaha Commission has not advocated village as unit. It is only Pataskar Award and formula which advocates village as unit. Pataskar formula is to the effect that not merely the majority but single majority should be the guiding factor for transfering villages. It has not been accepted by either the Redcliffe Award or the Shaha Commission or by the Mahajan Commission. I would only request hon. Members to be fair in what they say. Some said, it is a black report. Is it fair? The way in which this Report was criticised in Maharashtra was not in good taste. They not only criticised the Report but also went to the extent of criticising the man behind the Report because it is not entirely in their favour. It is not proper. After all, if we do not agree with the Commission's Report, you can criticise the Report but it is not fair to criticise its author. After having agreed to accept it on 14th September 1967, it does not lie in the mouth of the Maharashtra leaders to say that it is not binding on them. I have got a cutting of the remarks made by the Union Home Minister on 15th August 1966, in which he says: "Both Maharashtra and Mysore should accept the verdict of the Commission." This is a challenge. After all, Mysore did not get more than it deserved. We have lost a good deal here and there. We have lost a good deal. Merely because, justice has been done to a certain extent and not to the fullest extent to Mysore, it does not mean that Mysore got what all it wanted. That is wrong idea. The other point is, they say that different standards have been adopted by the Mahajan Commission. I would ask the hon'ble members to show where different standards are being adopted. The same standard has been adopted but unfortunately, in some areas the Marathi speaking population happens to be more than 60 to 70 per cent. He has applied this formula and in some cases it has been more than 60 per cent, in some cases, it is still more and in some cases 80 per cent. It does not mean that the formula has been abandoned.

I have already said that in the case of Kasargod, there has been some change. Though the Kerala Government did not take part before the Commission, the others took part. I give the statistics as to what happened before the Commission. The total number of memorandums received was 223. These included 44 memorandums from Malayalam speaking community and who also supported the transfer to Mysore. Out of these 223, five contended that the transfer of Kasargod taluk should not be done. Only five contended that it should not be transferred to

Mysore. This being so, I would only request hon'ble members to ponder over what they say. If they read the report in full, they will find that 56 per cent of the population in an area has been transferred to Mysore, where there was 75 to 80 per cent Marathi speaking population has been transferred to Maharashtra.

Hon'ble members also plead for public opinion. Sir, this public opinion is a very elusive thing. All the general elections are public opinion.

[MR. VICE-CHAIRMAN (Sri S. D. KOTHAVALE) in the Chair]

In 1957 Belgaum sent its M. E. S. members and they got 6,000 votes more than the Congress Candidate ; in 1962, 14,000 and in 1967 he got only 3,000 more. So, the public opinion in this way cannot be gauged at all. In Bidar district in 1957 the M. E. S. got three seats; in 1962 they got one seat and in 1967 they got nothing. So, this cannot be taken as the criterion.

Hon. member Sri Kadam argued about Konkani and said that Konkani was a dialect of Marathi. He has been saying this from so many years but still it has not been accepted. Griarson says that Konkani is not a dialect of Marathi. Dr. Katre also says that it is not a dialect of Marathi. Sir C. P. Ramaswami Iyer, Prof. Nigam also say so. Konkani people also say that. I have got the statement of what he has said before the Commission and I will read it:

"Sri Mahajan:—You talk of 1901. I do not want it. In your Memorandum you have given the percentage of Marathi separately and Konkani separately. Why have you drawn a separate percentage of Konkani and Marathi ?"

"Sri B. P. Kadam:—Sir, in the Census of 1951 Konlani has been declared as a separate language and figures of the language have been shown separately."

"Sri Mahajan:—You should have represented to Government against this if you did not like this. In 1951 before merger,Karwar was in Bombay Government and your own man was the Chief Minister."

"Sri Kadam:—Maharashtrians were very honest and therefore they did not like to represent. Apart from this, people had given their verdict that Konkani and Marathi were identical and that Konkani was the dialect of Marathi. Willful entries were made by pressure on the officers. Officers entrusted with the Census work did not make entries properly."

The Commission said that this was not mentioned in the Memorandum and asked Sri Kadam to read it out if it is mentioned in that Memorandum. The Commission further says: Your own Chief Minister Sri Chavan had written in a statement while replying to the Chief

(SRI S. R. KANTHI)

Minister of Mysore that Konkani is a sister of Marathi. Sister may belong to the same family. Hindi, Gujarathi and Marathi belong to the same family.

Sri Mahajan says 'You say that Konkani Conference passed resolution in 1962 that Konkani language is an independent language and I have a copy of that resolution'.

Sri Mahajan further says: 'After 1951 you did not make any representation to Government that enumeration in language was not properly done and that Konkani was not a separate language. Why did you not represent ? If you have represented, give me a copy.'

So, Sir, it seems these people appeared before Sri Mahajan and Sri Mahajan did not uphold that Konkani was a dialect of Marathi.

The position of Konkani has been clearly stated and it has not been challenged after 1956; that is the position. The position of Konkani has been clearly stated and not challenged after 1951. The erstwhile Bombay Government have accepted that position and the Government of India have accepted the position that it is an independent language.

Then, Sir about the terms of reference. The hon'ble member says that there were no terms of reference. It is not a fact. I will read the para appointing the Commission. This is from the Government of India letter dated 25th October 1966 :

> "Taking into consideration the fundamental basis of the reorganisation of States in India and with a view to solving the existing border disputes between the States of Maharashtra and Mysore and Mysore and Kerala, the Government of India hereby appoint a Commission consisting of Shri Mehr Chand Mahajan, former Chief Justice of India, which shall hear the concerned parties and make its recommendations."

What has been referrred to is existing dispute between the parties. The criterion for resolving this dispute is to take into consideration the fundamental basis of reorganisation of States in India. He has taken mainly the principle of linguistic homogeneity. The hon'ble member says that there was no reference. It is not correct. There was only one reference and that was about the distribution of those areas on linguistic basis. Now, I have said what I wanted to say I have not much to say. I only request the friends coming from the M. E. S. group to ponder over what they have said. I want them to realise that they are led away by certain elements and I hope that they will be led away by their clear conscience which they do possess so that this question can be solved. Unfortunately in Maharashtra the extremists are riding the high horse. The reasonable elements in Maharashtra are often cornered and they are helpless. You, Mr. Chairman and I and Sri Jatti

know a number of people in Maharashtra. Many of them are our close friends and we know the predicaments in which they are placed today. This has to be corrected. I only hope that the friends in Maharashtra who are reasonable and who have got their clear heart and conscience will take courage in their hands and see that such things do not go on for ever. People like Dr. Ane have welcomed this report. Sri Patwardhan has stated that it must be accepted. Not only that, the Nagpur P.C.C. President has said that it must be accepted. These people have stated that. There are thousand and millions of people in Maharashtra who are in favour but they are silent because of extreme elements there. I hope that a time will come when they will assert themselves. I have questioned friends including the Union Minister and I know that they are reasonable people on the face of this earth. I only pity. I hope they will rise above these small considerations and like the ex-Chief Minister of Andhra Sri Sanjeeva Reddy they will come forth with bold statements. We may remember that Sri Sanjeeva Reddy. referring to Bellary said that Andhra has no case whatsoever for Bellary He had the courage to say that. Like that I hope the other friends also will say and I hope the millions of reasonable people who are in the Government as well as outside will assert themselves and say that they will accept this award. Of course there have been unkind remarks not only against Maharashtra but also against Mysore. A judge is not swayed by these remarks. We have all practised before Judges and we know judges often make some remark or the other. Those remarks cannot be taken as swinging to this or that side. Their sense of justice is so high and they come to proper conclusions. One more thing I should say about my Hon'ble friend Sri Banakar. He referred to Bharatha. It is said in Kannada: ರವಿ ಕಾಣದ್ದನ್ನು ಕವಿ ಕಾಣುತ್ತಾನೆ. ಆದರೆ ಕವಿಯಾದ ಶ್ರೀ ಬಣಕಾರರವರು ಏನನ್ನೂ ಕಂಡಿಲ್ಲ. That means, the poet sees what the sun cannot see. But unfortunately in the case of Sri Banakar he did not see. But when he saw he saw in the wrong way. He says that again Bharatha is coming. It may be a wrong judgment. Bharatha disappeared in 1962 and Rama is going to disappear in 1968. These are not the times of Rama or Bharatha. I believe now it is Lava and Kusha. These are changing times. I only pray that Lava and Kusha will not forget Rama and they will remember on occasions Bharatha also.

With these words, I hope the House will unanimously adopt the resolution borought by my Hon'ble friend Sri B. D. Jatti, the Minister for Food.

Thank you.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನಾನು ಈ ಮಹಾಜನರ ವರದಿಯ ಮೇಲೆ ಹೆಚ್ಚಾಗಿ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕಾರಣವೇನೆಂದರೆ, ಇದರ ಬಗ್ಗೆ ಸಾಕಷ್ಟು ಈಗಾಗಲೇ ಇಲ್ಲಿ ಚರ್ಚೆಯಾಗಿದೆ, ಹಾಗೂ ಎಲ್ಲ ವಿಷಯಗಳನ್ನೂ ಹೇಳಿದ್ದಾರೆ. ಆದರೆ ಇದರ ಬಗ್ಗೆ ಒಂದು ವಿಷಯವನ್ನು ನಾನು ಇಲ್ಲಿ ಹೇಳದೇ ಇರಲಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಕಡೆ ಕೊಟ್ಟಿರುವ ಹೇಳಿಕೆಗಳನ್ನು ಓದಿದಮೇಲೆ ನಮ್ಮ ರಾಜ್ಯಕ್ಕೆ ಏನೋ ಬರಬೇಕಾಗಿರುವುದು ಬಾರದೆ ಇದ್ದರೂ ಲಾಭದಾಯಕವಾಗದೇ ಇದ್ದರೂ ಅಂತಹುದನ್ನು ನಾವು ಏನಾದರೂ ಮಾಡಿ ಒಪ್ಪುವುದು ನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅವರು ಈ ವರದಿಯನ್ನು

(ಶ್ರೀ ಎಚ್. ಎನ್. ನಂಜೇಗೌಡ)

ಒಪ್ಪುವ ಕಾಲದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಯಾವ ರೀತಿಯಾಗಿ ಮಾಡುತ್ತಿದ್ದಾರೆ ಎಂದರೆ, 'ಮನೆಗೆ ಮಾರಿ ಮತ್ತು ಹೆರರಿಗೆ ಉಪಕಾರಿ' ಎನ್ನುವಂತೆ ಮಾಡಬೇಕೆಂದು ಹೇಳಿರುವುದನ್ನು ನೋಡಿದರೆ ನನಗೆ ಯಾವುದೂ ಅರ್ಥವಾಗುತ್ತಿಲ್ಲ. ಇದನ್ನು ಹೇಗೆ ಅವರು ಹೇಳುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ.

5–00 P.M.

ಇಂಥಾದ್ದರಲ್ಲಿ ಇವರ ಹೇಳಿಕೆಯನ್ನು ನೋಡಿದರೆ ಮಹಾರಾಷ್ಟ್ರದವರಿಗಾಗಲೀ ಅಥವಾ ಇನ್ನು ಯಾರಿಗೇ ಆಗಲೀ ಆ ಅಭಿಪ್ರಾಯ ಬಂದಿದ್ದರೆ ನಾವು ಆಶ್ಚರ್ಯಪಡಬೇಕಾಗಿಲ್ಲ. ಕಾರಣ ವೇನೆಂದರೇ, ವರದಿ ಯಾವ ರೀತಿ ಇದೆಯೆಂಬುದನ್ನು ತಿಳಿಯದೆ ವರದಿಯಲ್ಲಿ ಏನು ನಷ್ಟ ನಮಗೆ ಆಗಿದೆ ಎಂಬುದನ್ನು ತಿಳಿದುಕೊಳ್ಳದೆ ಏಕಕಂಠದಿಂದ ಭಾರೀ ಧೈರ್ಯವಂತರಾಗಿ ಅದನ್ನು ಅವಾರ್ಡ್ ಎಂದು ಪರಿಗಣಿಸುತ್ತೇವೆ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಈ ಮಾತನ್ನು ಅವರು ಹೇಳುವ ಕಾಲದಲ್ಲಿ ಸ್ವಲ್ಪ ಯೋಚನೆಮಾಡಬೇಕಾಗಿತ್ತು. ಇಂತಹ ಒಂದು ಮಾತನ್ನು ನಮ್ಮ ದೇಶದ ಪ್ರಜಾಪ್ರಭುತ್ವ ಮಂತ್ರಿಗಳು ಹೇಳಿದರೆ ನಮ್ಮ ದೇಶಕ್ಕೆ ಲಾಭವಾಗುತ್ತದೆಯೇ, ಮತ್ತು ಆ ವರದಿಗೆ ಗೌರವ ಹೆಚ್ಚಾಗುತ್ತದೆಯೇ ಎಂದು ಕೇಳುತ್ತೇನೆ. ಆ ಮಾತನ್ನು ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಹೇಳಿದ್ದರೆ ಆ ವರದಿಗೆ ತೂಕ ಹೆಚ್ಚಾಗುತ್ತಿತ್ತು. ಪ್ರಧಾನಮಂತ್ರಿಗಳಾದರೂ ಹೇಳಿದ್ದರೂ ಆ ರೀತಿ ಆಗುತ್ತಿತ್ತು. ಮಹಾರಾಷ್ಟ್ರ ಗೃಹಮಂತ್ರಿ ಅಥವಾ ಮುಖ್ಯ ಮಂತ್ರಿಗಳು ಹೇಳುವಂಥಾದ್ದನ್ನು ಕೇಂದ್ರದ ಗೃಹಮಂತ್ರಿಗಳು ಹೇಳಿದರು. ಇಲ್ಲಿ ಈಗ ನಮ್ಮ ಮುಂದೆ ಸಬ್‌ಸ್ಟಿಟ್ಯೂಟ್ ಮೋಷನ್ನನ್ನು ಇಟ್ಟಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳ ಮರ್ಯಾದೆಯನ್ನು ನಾವು ಈಗ ಉಳಿಸಬೇಕಾಗಿದೆ. ಅದನ್ನು ಉಳಿಸುವುದಕ್ಕೋಸ್ಕರ ಈ ಸೂಚನೆಯನ್ನು ಒಪ್ಪಿಕೊಂಡು ನಾವು ಇಲ್ಲಿ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ. ಆ ವರದಿಯನ್ನು ಅವಾರ್ಡ್ ಎಂದು ಪರಿಗಣಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ನಾವು ಒತ್ತಾಯ ಮಾಡಬೇಕಾಗುತ್ತದೆ. ಇಂತಹ ಕೇಂದ್ರ ಸರ್ಕಾರದ ದುರ್ಬಲ ನೀತಿಯಿಂದ ಏನು ಪ್ರಯೋಜನ? ಮಕ್ಕಳಂತೆ ರಂಪಾಟ ಮಾಡುತ್ತಿರುವ ಬಗ್ಗೆ ಒಂದು ಒಲುವನ್ನು ತೋರಿಸುತ್ತಿದ್ದಾರೆ. ಮಹಾರಾಷ್ಟ್ರದವರು ಇದರ ಬಗ್ಗೆ ಚಂಡೀಹಾಗೆ ನಡೆದುಕೊಂಡು ಬಂದಿದ್ದಾರೆ, ಅವರಿಗೇ ಕೇಂದ್ರದವರು ಗೌರವ ಕೊಡುತ್ತಿದ್ದಾರೆ. ಯಾರು ಹಠದಿಂದ ವರ್ತಿಸುತ್ತಾರೋ ಅವರನ್ನು ತೃಪ್ತಿಪಡಿಸುವ ನೀತಿಯನ್ನು ಕೇಂದ್ರಸರ್ಕಾರದವರು ಅನುಸರಿಸಿಕೊಂಡು ಬರುತ್ತಿದ್ದಾರೆ. ಕೇಂದ್ರಸರ್ಕಾರದ ಗೃಹಶಾಖೆಯ ಒಂದು ಹೇಳಿಕೆಯಿಂದ ನಾವು ಇದನ್ನು ತಿಳಿದುಕೊಳ್ಳಬಹುದು. ನಾವು ಈ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಮಹಾಜನ್ ವರದಿಯನ್ನು ಅವಾರ್ಡ್ ಎಂದು ಪರಿಗಣಿಸುತ್ತೇವೆಂದು ಹೇಳಿದರೆ ಕೇಂದ್ರಸರ್ಕಾರ ತದ್ವಿರುದ್ಧವಾಗಿ ಕಾರ್ಯಕ್ರಮ ಕೈಗೊಂಡು, ಅದನ್ನು ಎಲ್ಲಿ ಕಸದಬುಟ್ಟಿಗೆ ಹಾಕುವಂತೆ ಮಾಡಿಬಿಡುತ್ತಾರೋ ಎಂಬ ಸಂಶಯ ನನಗೆ ಇದೆ. ನಾವು ಈ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಮೇಲೆ ಕೇಂದ್ರಸರ್ಕಾರ ಆ ತೀರ್ಮಾನಕ್ಕೆ ಮಾನ್ಯತೆ ಕೊಡದಿದ್ದರೆ ಮಂತ್ರಿಗಳು ಹಾಗೂ ಈ ಸಭೆಯ ಸದಸ್ಯರು ರಾಜೀನಾಮೆ ಕೊಡಬೇಕು. ನಾವು ಇಲ್ಲಿ ಕೈಗೊಂಡ ತೀರ್ಮಾನಕ್ಕೆ ತಕ್ಕ ಬೆಲೆ ಸಿಗದಿದ್ದರೆ ನಾವು ಇಲ್ಲಿ ಇದ್ದಾದ್ದರಿಂದ ಏನು ಪ್ರಯೋಜನ! ನಮ್ಮ ತೀರ್ಮಾನವನ್ನು ಅವಾರ್ಡ್ ಎಂದು ತಿಳಿದುಕೊಳ್ಳದೆ, ಕೇಂದ್ರದ ಗೃಹಮಂತ್ರಿಗಳು ಶಕುನಿ ನೀತಿಗನುಸಾರವಾಗಿ ನಡೆದುಕೊಂಡು ಹೋದರೆ ಆಗ ನಾವೆಲ್ಲರೂ ನಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಈ ಸಭೆಯಲ್ಲಿ ಎಲ್ಲರಿಗೂ ಪ್ರಾರ್ಥನೆ ಮಾಡುತ್ತೇನೆ.

ಇನ್ನು ನಮ್ಮ ಮುಖ್ಯ ಮಂತ್ರಿಗಳು ಇದರಿಂದ ನಮಗೆ ಏನೋ ಅತುಳವಾದ ಲಾಭವಾಗಿದೆ ಯೆಂದು ತಿಳಿದುಕೊಂಡ ಹಾಗೆ ಇದೆ. ವರದಿಯಲ್ಲಿರುವುದು ಒಂದು ಬಹಳ ದುಃಖ ಸಂಗತಿಯಾಗಿದೆ. ಯಾವರೀತಿ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಹೋಗಿದ್ದಾರೆ ಅಂದರೆ, ಆ ಸಮಸ್ಯೆಗಳು ಪರಿಹಾರವಾಗುವ ಬದಲು, ಇನ್ನೂ ಜಾಸ್ತಿ ಆಗಿವೆ. ಖಾನಾಪುರ ತಾಲ್ಲೂಕಿನಲ್ಲಿ ಹೊಸದಾಗಿ ನೀರಾವರಿ ಯೋಜನೆಗಳಿಂದ 90 ಸಾವಿರ ಎಕರೆ ನಮ್ಮ ಮೈಸೂರು ರಾಜ್ಯದಲ್ಲಿ ನೀರಾವರಿ ಆಗಬೇಕಾಗಿದೆ. ಆ ಯೋಜನೆಯ ಸಂಬಂಧ ಡ್ಯಾಂ ಸೈಟುಗಳು ಈಗ ಈ ವರದಿ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗುತ್ತವೆ. ಇದರಿಂದ ನಮಗೆ ಆಗತಕ್ಕ 90 ಸಾವಿರ ಎಕರೆಗಳಷ್ಟು ನೀರಾವರಿ ಹೋಗುತ್ತದೆ. ಆಗ ಇದರಿಂದ ನಮಗೆ ಎಷ್ಟೋ ನಷ್ಟವಾಗುತ್ತದೆ. ಒಬ್ಬ ದೊಡ್ಡ ಮನುಷ್ಯ

ರಾದ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ನಾವೂ ಒಪ್ಪಿಕೊಳ್ಳಬಹುದು. ಆದರೆ ಅದರಲ್ಲಿ ಏನೇನು ತೊಂದರೆಗಳು ಬರುತ್ತವೆ ಎಂಬುದನ್ನು ವಿಚಾರಮಾಡಬೇಕು. ಒಂದು ವೇಳೆ ಇವು ಮಹಾರಾಷ್ಟ್ರಕ್ಕೆ ಹೋದರೆ ಆಮೇಲೆ ನೀರನ್ನು ಉಪಯೋಗಿಸಬೇಕಾದರೆ ನಮಗೆ ಬಹಳ ಕಷ್ಟನಷ್ಟಗಳಾಗುತ್ತವೆ. ಆಮೇಲೆ ಏನೇನೋ ಕರಾರು ಮಾಡಿಕೊಳ್ಳಬೇಕಾಗುತ್ತದೆ. ಇದು ಇಂಟರ್ ಸ್ಟೇಟ್ ರಿವರ್ ವಾಟರ್ ಡಿಸ್‌ಪ್ಯೂಟ್ ಆಗುತ್ತದೆ. ಆದ್ದರಿಂದ ಆ ಡ್ಯಾಂ ಸೈಟುಗಳೂ ಸಹ ನಮ್ಮಲ್ಲಿಯೇ ಉಳಿಯುವಹಾಗೆ ಮಾಡಬೇಕು.

ಇನ್ನೊಂದು ವಿಷಯ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಓದಿ ನಮಗೆ ಏನೋ ಅತಿ ಲಾಭವಾಗಿದೆಯೆಂದು ಹೇಳಿದರು. ನಾನು ಭೂಪಠ ಕೂಡ ನೋಡಿದ್ದೇನೆ. ಈಗ ಗೋವಾಕ್ಕೂ ಮತ್ತು ಮಹಾರಾಷ್ಟ್ರಕ್ಕೂ ಸಾಮಾನ್ಯ ಗಡಿ ಪ್ರಶ್ನೆಯೊಂದಿದೆ. ಮುಂದೆ ಬರಬಹುದಾದಂಥ ಸಾಮಾನ್ಯ ಗಡಿಯ ಬಗ್ಗೆ ಮಹಾರಾಷ್ಟ್ರದವರ ಕಣ್ಣು ಗೋವಾ ಮೇಲೆ ಇದೆ. ಅವರ ಮನವಿ ಪ್ರಕಾರ ಭೌಗೋಳಿಕವಾಗಿ ಭೂಪಠವನ್ನು ಇಟ್ಟುಕೊಂಡು ಪರಿಶೀಲನೆ ಮಾಡಿ ನೋಡಿದರೆ ಗೋವಾ ಪೂರ್ತಿ ಅವರಿಗೇ ಸಿಗಬೇಕೆಂಬುದಾಗಿ ಇದೆ. ಮಹಾರಾಷ್ಟ್ರದ ಕಣ್ಣು ಗೋವಾ ಮೇಲೇ ಇದೆ. ತೋಳದ ಕಣ್ಣು ಕುರಿಯಮೇಲೆ ಇರುವಹಾಗೆ ಅವರ ಮನವಿ ಇದೆ. ಸಾಮಾನ್ಯ ಗಡಿಯಾದ ಈ ಖಾನಾಪುರ ತಾಲ್ಲೂಕು ಅಲ್ಲಿಯೇ ಹೋಗುತ್ತದೆ. ಅದರ ಮಧ್ಯೆ ಇರುವ ರಸ್ತೆಯೂ ಅವರಿಗೆ ಸೇರುತ್ತದೆ. ಕೊಂಕಣಿ ಭಾಷೆ ಮಾತನಾಡುವ ಜನರ ದೃಷ್ಟಿಯೂ ಗೋವಾ ಮೇಲೆಯೇ ಇದೆ.

ಇನ್ನು ಇದರ ಬಗ್ಗೆ ಲಾಭ, ನಷ್ಟದ ವಿಷಯವಾಗಿ ಹೇಳುವುದಾದರೆ, ವಿಶಾಲ ಕರ್ಣಾಟಕವಾದ ಮೇಲೆ ಏನಾಗಿದೆಯೆಂದರೆ, ಆ ಮಾತನ್ನು ಇಲ್ಲಿ ಹೇಳಬಾರದು, ಆದರೂ ಆ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ, ಕೈಲಿ ಬಳೆ ಇಲ್ಲದೆ, ಬಿಳೀ ಸೀರೆ ಉಟ್ಟುಕೊಂಡು, ಹಣೆಯಲ್ಲಿ ಕುಂಕುಮವಿಲ್ಲದೆ ಇರತಕ್ಕವಳ ರೀತಿಯಲ್ಲಿ ಇರುವ ರಾಜ್ಯಗಳು ನಮಗೆ ಈಗ ಸೇರಿವೆ. ಏನೂ ಅನುಕೂಲವಿಲ್ಲದೆ, ಯಾವ ಸೌಲಭ್ಯಗಳಿಲ್ಲದ, ಬರೀ ನೆಗ್‌ಲೆಕ್ಟ್ ಮಾಡಿರುವ ಸ್ಥಳಗಳು ಸೇರಿವೆ. ಇವತ್ತು ನಾನು ಅದರ ಬಗ್ಗೆ ಅಲ್ಪಕಾಲಾವಧಿ ಪ್ರಶ್ನೆಗಳನ್ನೂ ಸಹ ಕಳುಹಿಸಿದ್ದೇನೆ. ಮೈಸೂರು ರಾಜ್ಯ ಮಹಾರಾಷ್ಟ್ರಕ್ಕೆ ವರ್ಗಮಾಡುವ ಏರಿಯಾಗಳಿಗೆ ನಮ್ಮ ರಾಜ್ಯ ವಿಶಾಲವಾದಮೇಲೆ ಎಷ್ಟೆಷ್ಟು ಖರ್ಚುಮಾಡಿದೆ ಎಂಬುದನ್ನೂ ಸಹ ಅದರಲ್ಲಿ ನಾನು ಕೇಳಿದ್ದೇನೆ. ನನಗೆ ಗೊತ್ತಿರುವ ಪ್ರಕಾರ ನೀರಾವರಿ ಸೌಲಭ್ಯವನ್ನು ದೊಡ್ಡ ಊರು, ಸಣ್ಣ ಊರು ಎಂಬ ಭೇದಭಾವವಿಲ್ಲದೆ ಬೇಕಾದಷ್ಟು ಕೊಟ್ಟಿದ್ದಾರೆ. ಸಾರಿಗೆ ಸೌಕರ್ಯ, ಆರೋಗ್ಯ, ವಿದ್ಯಾಭ್ಯಾಸದ ಸೌಕರ್ಯಗಳಿಗಾಗಿ ನಮ್ಮ ರಾಜ್ಯ ಸರ್ಕಾರದವರು ಮಹಾರಾಷ್ಟ್ರ ಭಾಗಕ್ಕೆ ಅತುಳವಾಗಿ ಖರ್ಚುಮಾಡಿದ್ದಾರೆ. ನಮಗೆ ಬಂದಿರುವ ಸ್ಥಳ ಹೇಗಿದೆಯೆಂದರೆ ಯಾರಿಗೂ ಬೇಡವಾದಂಥ ಸ್ಥಳಗಳಾಗಿವೆ. ಅವರು ನಮಗೆ 260 ಹಳ್ಳಿಗಳನ್ನು ಕೊಡುತ್ತೇವೆಂದು ಹೇಳಿದ್ದರೆ 247 ಹಳ್ಳಿಗಳನ್ನು ಕೊಡಬೇಕೆಂದು ಮಹಾಜನ್ ಅವರು ಶಿಫಾರ್ಸು ಮಾಡಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ. ಅವರು ಆ ಪ್ರದೇಶಗಳನ್ನು ನಮಗೆ ಜಾಸ್ತಿ ಕೊಡುವುದಕ್ಕೆ ತಯಾರಾಗಿದ್ದಾರೆಂದು. ಆದ್ದರಿಂದ ಮಹಾರಾಷ್ಟ್ರದಿಂದ ನಮಗೆ ಬರಲಿರುವ ಪ್ರದೇಶಗಳು ಚಿನ್ನ ಕೊಟ್ಟು ಹಿತ್ತಾಳೆ ತೆಗೆದುಕೊಳ್ಳುವಂತಿದೆ. ಅದು ಹಿತ್ತಾಳೆಯೂ ಅಲ್ಲ, ಕಬ್ಬಿಣ. ನಿಪ್ಪಾಣಿಯಿಂದ ಹೊಗೆಸೊಪ್ಪಿನಲ್ಲಿ ವಾರ್ಷಿಕವಾಗಿ ನಮ್ಮ ರಾಜ್ಯಕ್ಕೆ ಬರುತ್ತಿದ್ದ 3 ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಹೇಳಿದ್ದಾರೆ. ಅದಲ್ಲದೆ ಬೇರೆ ರೀತಿಯಿಂದಲೂ ಆ ಪ್ರದೇಶಗಳಿಂದ ನಮಗೆ 3 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಎಂದು ಹೇಳಬೇಕಾಗುತ್ತದೆ. ಇದು ಸರಿಯೋ ತಪ್ಪೋ ಈ ವರದಿಯನ್ನು ಒಂದು ಅವಾರ್ಡ್ ಎಂದು ತಿಳಿದುಕೊಂಡು ಇದನ್ನು ಒಪ್ಪಿಕೊಳ್ಳಬೇಕೆಂದು ನಮ್ಮ ದೇಶದ ನಾಯಕರು, ಮತ್ತು ಈ ಸಭೆಯ ನಾಯಕರು ಹಾಗೂ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಬಾಯಲ್ಲಿ ಹೇಳಿದ್ದಾರೆ. ಆದ್ದರಿಂದ ಅವರು ಹೇಳತಕ್ಕ ಮಾತನ್ನು ಒಪ್ಪಿಕೊಳ್ಳಲು ಈ ಸಭೆಯವರು ಅನುಮೋದಿಸಬೇಕು ಮತ್ತು ಈಗ ನಮ್ಮ ರಾಜ್ಯದಿಂದ ಮಹಾರಾಷ್ಟ್ರಕ್ಕೆ ಹೋಗತಕ್ಕಂಥ ಪ್ರದೇಶಗಳಲ್ಲಿ ನಮ್ಮ ಸರ್ಕಾರದವರು ಅತುಳವಾಗಿ ಖರ್ಚು ಮಾಡಿ ಅಭಿವೃದ್ಧಿಯಾಗಿರುವ ಪ್ರದೇಶಗಳ ಬಗ್ಗೆ ಪರಿಹಾರವನ್ನು ಪಡೆಯಬೇಕು. ನಾನು ಹೇಳಿದ ನೀರಾವರಿ ಪ್ರದೇಶ ಇವುಗಳನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು. ಈ ವರದಿಯಲ್ಲಿರತಕ್ಕ ಸಣ್ಣ ಬದಲಾವಣೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ಕೇಂದ್ರದ ಗೃಹಸಚಿವರು ಹೇಳುವ ಮಟ್ಟದಲ್ಲಿ ಕೇಂದ್ರಸರ್ಕಾರದವರು ವ್ಯವಹರಿಸುವುದಾದರೆ ನಮ್ಮ ರಾಜ್ಯದ ಮಂತ್ರಿಮಂಡಲದವರು ಮತ್ತು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ರಾಜೀನಾಮೆಯನ್ನು ಕೊಡಬೇಕು, ನಮ್ಮ ಪ್ರತಿಭಟನೆಯನ್ನು ತೋರಿಸಬೇಕು. ಮತ್ತೆ ಬೇರೆ ಚುನಾವಣೆ ನಡೆಯಲಿ. ನಮ್ಮ ಅಭಿಪ್ರಾಯಕ್ಕೆ ಕೇಂದ್ರ ಸರ್ಕಾರದವರು ಒಪ್ಪದೇ ಹೋದರೆ ನಾವು ಇಲ್ಲಿ ಇರುವುದರಲ್ಲಿ ಅರ್ಥವಿಲ್ಲ, ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).— ಸನ್ಮಾನ್ಯ ಅಧ್ಯಕ್ಷರೇ, ದಿವಂಗತ ಮಹಾಜನ್ ಅವರ ವರದಿ ಸಾಕಷ್ಟು ಚರ್ಚೆಗೆ ಒಳಪಟ್ಟಿದೆ. ಹಾಗೂ ಇಲ್ಲಿ ನಡೆದಿರತಕ್ಕ ವಿಷಯಗಳನ್ನು ಮತ್ತೆ ಮತ್ತೆ ಪ್ರಸ್ತಾಪಿಸಿ ವಿಶೇಷವಾಗಿ ಚರ್ವಿತಚರ್ವಣ ಮಾಡತಕ್ಕ ಅಭಿಪ್ರಾಯ ನನ್ನದಲ್ಲ. ಆದರೆ ಈ ವರದಿಯನ್ನು ನಾವು ಒಪ್ಪತಕ್ಕಂಥಾದ್ದು ಅಥವಾ ಬಿಡುವುದು ನಮ್ಮ ಮುಂದಿರತಕ್ಕ ಪ್ರಶ್ನೆಯಲ್ಲ. ಈ ವರದಿಯನ್ನು ಒಪ್ಪುತ್ತೇವೆಂದು ಹೇಳಿದರೆ ಒಪ್ಪಲಿ. ಇದನ್ನು ಒಪ್ಪುವುದಕ್ಕೂ ಬಿಡಲಿಕ್ಕೂ ಸ್ವಾತಂತ್ರ್ಯ ಇದೆ. ಆದರೂ ಕೂಡ ಇದನ್ನು ಪರೋಕ್ಷವಾಗಿ ಒಪ್ಪಬೇಕಾಗುತ್ತದೆ. ಈ ವರದಿಯನ್ನು ಯಾವ ಕಮಿಷನ್ ಮತ್ತು ಕೇಂದ್ರ ಸರ್ಕಾರದವರು ನಮ್ಮಮೇಲೆ ಹೊರಿಸಿದ್ದಾರೆಯೋ ಅವರು ತಮ್ಮ ಮಾತನ್ನು ಉಳಿಸಿಕೊಳ್ಳತಕ್ಕಂಥಾದ್ದು ಅವರ ಕರ್ತವ್ಯ. ಮಹಾರಾಷ್ಟ್ರದ ಜನ ಮತ್ತು ಮಹಾರಾಷ್ಟ್ರದ ಸರ್ಕಾರ ವಿಶೇಷವಾದ ಉತ್ಸಾಹವನ್ನು ತೋರಿಸಿ ಈ ಒಂದು ಕಮಿಷನ್ ಅನ್ನು ನೇಮಕ ಮಾಡುವುದರಿಂದ ಈ ಗಡಿ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗುತ್ತವೆ ಎನ್ನುವ ಮಾತನ್ನು ಹೇಳಿದರು. ಆ ಮಾತನ್ನು ಅವರು ಉಳಿಸಿಕೊಳ್ಳಬೇಕು. ಇದನ್ನು ವರದಿಯೆಂದು ಬೇಕಾದರೂ ಕರೆಯಿರಿ, ಅವಾರ್ಡ್ ಎಂದು ಬೇಕಾದರೂ ಕರೆಯಿರಿ; ಅಥವ ಜಡ್ಜ್‌ಮೆಂಟ್ ಎಂದಾದರೂ ಕರೆಯಿರಿ. ಇದೇನು ಹೊಸದಾಗಿರತಕ್ಕ ವಿಷಯವಲ್ಲ. ಹಿಂದೆ ಇದೇ ರೀತಿ ನೇಮಕವಾಗಿದ್ದಂತಹ ಕಮಿಷನ್ನಿನ ವರದಿಗೆ ಏನು ಪ್ರಾಶಸ್ತ್ಯವನ್ನು ಕೊಡಲಾಯಿತೋ, ಎಷ್ಟರಮಟ್ಟಿನ ಪಾವಿತ್ರ್ಯವನ್ನು ಕೊಡಲಾಯಿತೋ ಅದೇ ರೀತಿ ಈಗಲೂ ಈ ವರದಿಗೆ ಪ್ರಾಶಸ್ತ್ಯವನ್ನು ಮತ್ತು ಪಾವಿತ್ರ್ಯವನ್ನು ಕೊಡಬೇಕು ಎನ್ನುವುದು ಬಹುಶಃ ಅತ್ಯಂತ ಸಾಧುವಾದ ಅಭಿಪ್ರಾಯ. ಅವೊತ್ತು ಈ ವರದಿಯನ್ನು ಸರಿಯಾಗಿಲ್ಲ, ಇದರಲ್ಲಿ ಪಕ್ಷಪಾತ ಮಾಡಿದೆ, ಇದು ತಿರುಗುಮುರುಗಾಗಿದೆ ಪರ್ವರ್ಸ್ ಆಗಿದೆ ಎಂದು ಅವರು ಹೇಳುವುದಕ್ಕೆ ಯಾವುದೇ ಆಧಾರ ಇದ್ದ ಹಾಗೆ ಕಾಣುವುದಿಲ್ಲ. ಏನೇನು ಪ್ರಶ್ನೆಗಳನ್ನು ಮಹಾರಾಷ್ಟ್ರದ ಪರವಾಗಿ ಎತ್ತಲಾಯಿತೋ, ಏನೇನು ವಾದಗಳನ್ನು ಮೈಸೂರಿನ ಪರವಾಗಿ ಮಂಡಿಸಲಾಯಿತೋ ಅಷ್ಟೆಲ್ಲಾ ಸಾಕ್ಷಿಗಳು, ಅಭಿಪ್ರಾಯಗಳು ಕಮಿಷನ್ನಿನ ಮುಂದೆ ಬರುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿತ್ತು. ಕಮಿಷನ್ನಿನವರು ಅದನ್ನೆಲ್ಲಾ ಪರಿಗಣಿಸಿ ಎರಡು ರಾಜ್ಯಗಳವರು ಕಮಿಷನ್ನಿನ ಮುಂದೆ ವಿಶೇಷವಾಗಿ ವಾದಿಸಿದಮೇಲೆ, ತಮ್ಮ ತಮ್ಮ ಅಭಿಪ್ರಾಯಗಳನ್ನು ಸಾಕಷ್ಟು ರೀತೀಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ವರದಿಯ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಇರುವುದಕ್ಕೆ ಸಾಧ್ಯ. ಈ ವರದಿ ನಿಷ್ಪಕ್ಷಪಾತವಾಗಿಲ್ಲ, ಯಾವುದೋ ಒಂದು ರೀತಿಯ ಒತ್ತಾಯಕ್ಕೆ ಒಳಪಟ್ಟು ಇದನ್ನು ಕೊಟ್ಟಿದ್ದಾರೆಂದು ಯಾರಾದರೂ ಹೇಳಬಹುದು. ಆದರೆ ಸರಿಯಾದ ರೀತಿಯಲ್ಲಿ ಯೋಚನೆ ಮಾಡತಕ್ಕವರು ಯಾರೂ ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಹಾಜನ್ ಅವರು ಅವರ ವರದಿಯಲ್ಲಿ ಈ ರೀತಿ ಹೇಳಿದ್ದಾರೆ:

"I may add that none of the Governments concerned have on my recommendations got what they claimed and I presume that they will not be satisfied with these recommendations. All that I can say is that I have made my recommendations to the best of my ability and intelligence and without any pressures of any kind."

"Shri Misra appearing for the Samiti very correctly said that the linguistic principle should not be carried to an illogical and absolutely obsured conclusion.

"Therefore, I take it that I have to settle this matter prima facie on considerations of linguistic homogeneity except for compelling reasons.

Shri Misra appearing for the Samiti rightly conceded that a village could not be treated as a unit in isolation.

It seems to me that there is no scientific yardstick in deciding matters which concern huge populations and their well being.

I have not been able to discover any scientific formula evolved by social or other sciences, that a village unit is a proper yardstick for attaining linguistic homogeneity"

ಎಂದು ಹೇಳಿದ್ದಾರೆ. ಬಹುಶಃ ಅವರು ಗದ್ದಲವನ್ನೂ ಕೂಡ ನಿರೀಕ್ಷಣೆ ಮಾಡಿ ಈ ವಾಕ್ಯವನ್ನು ತಮ್ಮ ವರದಿಯಲ್ಲಿ ಸೇರಿಸಿದ್ದಾರೆ. ಮಹಾರಾಷ್ಟ್ರದವರು ಯಾವ ಯಾವ ವಾದಗಳನ್ನು ಹೇಳ ಬಹುದೋ ಆ ವಾದಗಳನ್ನು ಮಹಾಜನ್ ಕಮಿಷನ್ನಿನ ಮುಂದೆ ಮಂಡಿಸಿದ್ದಾರೆ. ಮಹಾಜನ್ ಅವರು ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ಚರ್ಚೆ ಮಾಡಿ ಯಾವ ಯಾವ ಕಾರಣಗಳಿಂದ ಈ ವರದಿಯಲ್ಲಿರತಕ್ಕ ತತ್ವಗಳನ್ನು ಒಪ್ಪುವುದಕ್ಕೆ ಸಾಧ್ಯ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಅದು ಈ ರೀತಿ ಇದೆ :

"No formula can be rigidly implemented and there can be no scientific approach in such matters"

ಎಂದು ಹೇಳಿದ್ದಾರೆ. ಕೇವಲ ಹಳ್ಳಿಗಳನ್ನು ಒಂದು ಘಟಕ ಎಂದು ಪರಿಗಣಿಸಿ ಅವುಗಳ ಆಧಾರದ ಮೇಲೆ ಗಡೀಪ್ರದೇಶಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುವುದಕ್ಕೆ ರೆಕಮೆಂಡ್ ಮಾಡಬೇಕು ಎನ್ನುವ ವಾದಕ್ಕೆ ಸಾಕಷ್ಟು ಚರ್ಚಿಸಿ ಯಾವ ಕಾರಣಕ್ಕಾಗಿ ಅದನ್ನು ಒಪ್ಪುವುದಕ್ಕಾ ಗುವುದಿಲ್ಲ ಎಂಬುದನ್ನು ಹೇಳಿದ್ದಾರೆ. ಎರಡು ಸಾವಿರ ಜನಗಳೂ ಇರತಕ್ಕದ್ದು ಒಂದು ಹಳ್ಳಿ ಯೆಂದು ಕರೆಯುತ್ತಾರೆ. 6 ಸಾವಿರ ಜನಗಳು ಇರತಕ್ಕಂಥಾದ್ದನ್ನು ಒಂದು ಹಳ್ಳಿಯೆಂದು ಕರೆಯುತ್ತಾರೆ. ಆದ್ದರಿಂದ ಹಳ್ಳಿಗಳನ್ನು ಘಟಕಗಳಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬು ದನ್ನು ಸ್ಪಷ್ಟಪಡಿಸಿದ್ದಾರೆ. ಅದು ಈ ರೀತಿ ಇದೆ:

" My view is that where there is a sizable compact tract where a language group predominates and the population is at least round about 20,000 that area may be considered as a unit for resolving the boundary dispute. "

ಈ ರೀತಿಯ ನಿರ್ಬಂಧ ಹಾಕಿರುವುದರಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸವುದಕ್ಕೆ ಏನು ರೆಕಮೆಂಡೇಷನ್ ಮಾಡಬೇಕೋ ಅದಕ್ಕೆ ಅವಶ್ಯಕವಾದ ತತ್ವವನ್ನು ರೂಪಿಸಿಕೊಳ್ಳುವುದಕ್ಕೆ ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟದ್ದರಿಂದ ಅವರು ಅದನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಂಡು ಒಂದು ಶಾಶ್ವತವಾದ ಪರಿಹಾರವನ್ನು ರೆಕಮೆಂಡ್ ಮಾಡಿದ್ದಾರೆ.

ಇವತ್ತು ನಾವು ಮಹಾಜನ್ ವರದಿಯ ಬಗ್ಗೆ ಹೆಚ್ಚು ಬೆಂಬಲ ಮತ್ತು ಗೌರವ ಕೊಡುವುದ ಕ್ಕಿಂತಲೂ ಹೆಚ್ಚಿಗೆ ಇನ್ನೇನನ್ನೂ ಹೇಳುವುದಕ್ಕಾಗುವುದಿಲ್ಲ. ಮಹಾಜನ್ ವರದಿಯಿಂದ ಈ ಗಡಿ ಪ್ರಶ್ನೆ ಶಾಶ್ವತವಾಗಿ ಪರಿಹಾರವಾಗಲೀ ಎಂದು ಆಯೋಗದ ರಚನೆಗೆ ಮುಂಚೆ ಎಲ್ಲರೂ ಒಪ್ಪಿದ್ದರು. ಆದರೆ ಆ ವರದಿ ಬಂದನಂತರ ಮಹಾರಾಷ್ಟ್ರದವರ ನಿಲವು ಬದಲಾಗಿದೆ. ಮತ್ತು ಕೇಂದ್ರಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಜನರ ಮಾತು ಬದಲಾವಣೆಯಾಗಿದೆ. ಕೇಂದ್ರದಲ್ಲಿರತಕ್ಕಂಥ ಕೆಲವು ಮಂತ್ರಿಗಳು ಈ ವರದಿಯ ಬಗ್ಗೆ ಎಲ್ಲ ರಾಜಕೀಯ ಮುಖಂಡರನ್ನು ಕರೆಸಿ ಮಾತನಾಡಿ ನಂತರ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅದೂ ಸಹ ಒಳ್ಳೆಯ ಸ್ವಾಗತಾರ್ಹವಾದ ಅಭಿಪ್ರಾಯ. ಆದರೆ ಆ ಮಾತು ಸ್ವಲ್ಪ ತಡವಾಗಿ ಬಂತು. ಮೊದಲೇ ಈ ಮಾತನ್ನು ಅವರು ಹೇಳಿದ್ದರೂ ಸಹ ನಾವು ವಿರೋಧಿಸುತ್ತಿರಲಿಲ್ಲ. ಈ ವರದಿಯ ಬಗ್ಗೆ ತೀರ್ಮಾನವನ್ನು ಕೈಕೊಳ್ಳಲು ಆದಷ್ಟು ಮುಂದೂಡುವ ಸಲುವಾಗಿ ಮತ್ತು ಈ ವರದಿಯ ಪರಿಣಾಮಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅವರು ಈ ರೀತಿ ಹೇಳುತ್ತಿದ್ದಾರೆ. ಬೀಸುವ ದೊಣ್ಣೆ ಏಟು ತಪ್ಪಿದರೆ ಸಾವಿರ ವರ್ಷ ಆಯುಸ್ಸು ಎಂದು ಹೇಳುವಂತೆ, ಕೇಂದ್ರದ ಮಂತ್ರಿಗಳು ಒಂದಲ್ಲ ಒಂದು ಕಾರಣದಿಂದ ಈ ಪ್ರಶ್ನೆಯನ್ನು ಜೀವಂತವಾಗಿ ಇಟ್ಟುಕೊಂಡು ಸಂದರ್ಭ ಸಾಧಿಸಿ ಮುಂದೆ ತಾವು ಹೇಳುವ ರೀತಿಯಲ್ಲೇ ಬಗೆಹರಿಸಿಕೊಳ್ಳಬೇಕೆಂದು ಆ ರೀತಿ ಹೇಳುತ್ತಿದ್ದಾರೆ. ಎಲ್ಲಾ ಪಕ್ಷಗಳ ಮುಖಂಡರನ್ನು ಕರೆಸಿ ಮಾತನಾಡಬೇಕೆಂದು ಅವರು ಹೇಳುತ್ತಿರುವುದು ಸರಿಯಲ್ಲ. ಆ ರೀತಿ ಕರೆಸಿ ಮಾತನಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುವುದು ಮೂರ್ಖತನವಲ್ಲದೆ ಮತ್ತೆ ಬೇರೇನೂ ಅಲ್ಲ. ಗೋವ ಬಗ್ಗೆ ಕೇಂದ್ರಸರ್ಕಾರದವರು ಈಗಾಗಲೆ ಬಹಳ ತಪ್ಪು ಮಾಡಿ ದ್ದಾರೆಂದು ಹೇಳಬಹುದು. ಇಡೀ ದೇಶದ ಮುಂದೆ ಇಂಟರೆನ್ಯಾಷನಲ್ ಬಾರ್ಡರ್ ಪ್ರಶ್ನೆ ಇದೆ. ಕೇಂದ್ರ ಸರ್ಕಾರದವರು ಎಲ್ಲಾ ಕಡೆಗಳಲ್ಲೂ ಜನಮತಗಣನೆ ಮಾಡುವುದು ಒಳ್ಳೆಯದು ಎಂದು ಹೇಳುತ್ತಾ

(ಶ್ರೀ ಕೆ. ಎಚ್. ಶ್ರೀನಿವಾಸ್)

ಹೋದರೆ, ನಾಳೆ ಕಾಶ್ಮೀರದಲ್ಲೂ ಸಹ ಜನಮತ ಗಣನೆ ಮಾಡುವ ಸಂದರ್ಭ ಬರಬಹುದು, ಲಡಕ್‌ನಲ್ಲಿ ಮಾಡಬೇಕಾದ ಪರಿಸ್ಥಿತಿಯೂ ಬರಬಹುದು. ಇವತ್ತು ಇವರು ಮಾಡತಕ್ಕಂಥ ಕೆಲಸದಿಂದ ನಾಳೆ ಇವರ ಕೈಯನ್ನು ಇವರೇ ಕಟ್ಟಿಕೊಳ್ಳುವ ಸ್ಥಿತಿಗೆ ಬರಬಹುದು. ಗೋವಾದ ಬಗ್ಗೆ ಇವರಿಗೆ ಈಗಾಗಲೇ ಅನುಭವವಾಗಿದೆ. ಅದನ್ನ ಇವರು ಮನಗಂಡರೆ ಸಾಕು.

ಇನ್ನು ಒಂದು ವಿಷಯವನ್ನು ಹೇಳಬೇಕಾಗಿದೆ. ಕಾಸರಗೋಡಿನ ಬಗ್ಗೆ ಮಹಾಜನ್ ಅವರು ತಮ್ಮ ವರದಿಯಲ್ಲಿ ಕಾಸರಗೋಡು ಮೈಸೂರಿಗೆ ಸೇರಬೇಕೆಂದು ಹೇಳಿದ್ದಾರೆ. ಆಯೋಗದವರು ಸಾಕ್ಷಿ ಸಂಗ್ರಹಣೆ ಮಾಡುವ ಕಾಲದಲ್ಲಿ ಕೇರಳಾ ಸರ್ಕಾರದವರು ತಮ್ಮ ಒಂದು ನಿಲುವನ್ನು ಆಯೋಗದ ಮುಂದೆ ಮಂಡಿಸಲಿಲ್ಲ. ಹಿಂದೆ ಎಸ್. ಆರ್. ಸಿ. ಮುಂದೆ ಕೂಡ ಕಾಸರಗೋಡಿನ ಈಚೆ ದಿಕ್ಕಿನ ಜನರು ತಮ್ಮ ಅಭಿಪ್ರಾಯವನ್ನು, ತಮ್ಮ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ವಾಗಲಿಲ್ಲವೆಂದು ದಿವಂಗತ ಫಣೀಕರ್ ಅವರು ಹೇಳಿದ್ದರು. ದಿವಂಗತ ಫಣೀಕರ್ ಈ ರೀತಿ ಹೇಳಿದರು :

> "You can take it for granted that will be left over in Karnatak"

ಈ ರೀತಿ ಹೇಳಿದ್ದರೂ ಸಹ ಕಾಸರಗೋಡಿನ ಬಗ್ಗೆ ಯಾವ ತೀರ್ಮಾನವೂ ಕೂಡ ಆಗಲಿಲ್ಲ. ಮಹಾಜನ್ ಆಯೋಗ ರಚನೆಯಾದಾಗ ಕೇರಳದಲ್ಲಿ ಜನತಾ ಸರ್ಕಾರ ಇರಲಿಲ್ಲ. ಮುಂದೆ ಜನತಾ ಸರ್ಕಾರ ರಚನೆಯಾದ ಮೇಲೆ ಕೇಂದ್ರಸರ್ಕಾರದವರು ಕೇರಳದ ಮುಖ್ಯ ಮಂತ್ರಿಗಳಿಗೆ ಆಯೋಗದ ಮುಂದೆ ತಮ್ಮ ನಿಲುವನ್ನು ತಿಳಿಸಬೇಕೆಂದು ಹೇಳಿದರೂ ಸಹ ಕೇರಳದ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಕೆಲವು ತೊಂದರೆಗಳನ್ನು ಹೇಳಿದರು. ಹಿಂದೆ ರಚನೆಯಾಗಿದ್ದ ಎಸ್. ಆರ್. ಸಿ. ಯವರು ತಮ್ಮ ವರದಿಯಲ್ಲಿ ಚಂದ್ರಗಿರಿ ಮತ್ತು ಪಯಸ್ವಿನಿ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೇಳಿದ್ದಾರೆ. ಆದರೆ ಕೇರಳಾದ ಮುಖ್ಯಮಂತ್ರಿಗಳು ತಮ್ಮ ಪತ್ರದಲ್ಲಿ ಈ ರೀತಿ ಹೇಳಿದ್ದಾರೆ:

> "Our view was that the principle should be language and contiguity with village as the basis. As a matter of fact, during my previous tenure of office as Chief Minister of this State (1957-1959), this very question was raised by the then Home Minister, the late Govind Ballabh Pant. He asked me whether I could concede the claim of the Kannada people. My reply to him was that, believing as I did in the above principles, I would have no objection if the Government of India were to rectify what according to me was a mistake committed in 1956 and could uniformly apply the above principle."

ಕೇಂದ್ರಸರ್ಕಾರದವರು ತಳೆಯಬೇಕಾದಂಥ ತಾತ್ವಿಕ ಧೋರಣೆಯ ಬಗ್ಗೆ ಕೇರಳದ ಮುಖ್ಯ ಮಂತ್ರಿಗಳು ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಒಂದು ದೃಷ್ಟಿಯಿಂದಲೂ ಕೂಡ ಕಾಸರಗೋಡಿನ ಚಂದ್ರಗಿರಿಯ ಕಡೆಯ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಮಹಾಜನ್ ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅದನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ ಯಾವುದೇ ಬಾಧಕವಿಲ್ಲವೆಂದು ಹೇಳುತ್ತೇನೆ. ಅಲ್ಲದೆ ಕೇಂದ್ರಸರ್ಕಾರದವರಿಗೆ ಕಾಸರಗೋಡನ್ನು ಮೈಸೂರಿಗೆ ಸೇರಿಸಿದರೆ ಯಾವುದೇ ತೊಂದರೆ ಬರುವುದಿಲ್ಲವೆಂದು ನಾನು ತಿಳಿದಿದ್ದೇನೆ. ಈ ವರದಿ ಯನ್ನು ಕೇಂದ್ರ ಸರ್ಕಾರದವರು ಒಪ್ಪಿದ್ದರೆ ನಾವು ಏನು ಮಾಡಬೇಕು, ಎಂಬ ಬಗ್ಗೆ ಅನೇಕ ಮಾತು ಗಳಿಂದ ಈ ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿದೆ. ನಾವೇನು ಮಹಾರಾಷ್ಟ್ರದವರಂತೆ ಆಟವಾಡುತ್ತಿಲ್ಲ. ಅವರು ಈ ವರದಿ ಬಗ್ಗೆ ಅನೇಕ ಆಟಗಳನ್ನು ಹೂಡುತ್ತಾರೆ. ಇವತ್ತು ಸರಿ ಎಂದು ಹೇಳಿದ್ದನ್ನು ನಾಳೆ ತಪ್ಪು ಎಂದು ಹೇಳುತ್ತಾರೆ. ಅದು ತಪ್ಪು ಎಂದು ನಾನು ಹೇಳುತ್ತೇನೆ. ಅವರು ನಮ್ಮೊಡನೆ ಔದಾರ್ಯದಿಂದ ವರ್ತಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಂತಹ ಸಂದರ್ಭದಲ್ಲಿ ನಮ್ಮ ನಾಯಕರುಗಳು ಔದಾರ್ಯವನ್ನು ತೋರಿಸಿದ್ದರೆ ಅದು ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು

ಈ ಗಡಿ ಸಮಸ್ಯೆ ಕೊನೆಯಾಗಲೀ ಎಂಬ ಕಾರಣದಿಂದ. ನಮ್ಮ ನಾಯಕರುಗಳು ಮಹಾಜನ್ ವರದಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಹೇಳಿರುವುದರಲ್ಲಿ ತಪ್ಪೇನಿಲ್ಲ. ಇವತ್ತು ಮಹಾರಾಷ್ಟ್ರದವರು ಈ ವರದಿ ಬಗ್ಗೆ ಮಾಡುತ್ತಿರತಕ್ಕಂಥ ಚಳುವಳಿಗಳಾಗಲೀ, ಕೈಕೊಳ್ಳತಕ್ಕಂಥ ಕಾರ್ಯಕ್ರಮಗಳಾಗಲೀ, ಆಡುತ್ತಿರುವ ಮಾತುಗಳಾಗಲೀ, ಹೂಡುತ್ತಿರುವ ಆಟಗಳಾಗಲೀ ಸರಿಯಲ್ಲವೆಂದು ನಾನು ಹೇಳುತ್ತೇನೆ. ನಮ್ಮವರು ಸಹ ಅದೇ ರೀತಿ ಮಾಡಬೇಕಾಗಿತ್ತು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಅವರು ಮಾಡಿದಂತೆ ನಾವೂ ಮಾಡುವುದು ಯಾವ ರೀತಿಯಿಂದಲೂ ಸರಿಯಲ್ಲ. ಆ ರೀತಿ ಮಾಡಿದರೆ ಅದು ದ್ವಂದ್ವ ಭಾವನೆಯನ್ನು ವ್ಯಕ್ತಪಡಿಸುತ್ತದೆ. ನಾವು ಅತಿ ಹೆಚ್ಚು ಔದಾರ್ಯವನ್ನು ತೋರಿಸಿದರೂ ಸಹ ಅದು ಅತಿರೇಕವಾಗುತ್ತದೆ, ಕರ್ನಾಟಕಕ್ಕೆ ದ್ರೋಹ ಮಾಡಿದಂತಾಗುತ್ತದೆ. ವಿವೇಕ ರಹಿತವಾಗುತ್ತದೆ. ಮಹಾರಾಷ್ಟ್ರದವರು ಏನೆಲ್ಲಾ ಚಳುವಳಿಯನ್ನು ಎಬ್ಬಿಸಿದ್ದಾರೆ, ಮಹಾರಾಷ್ಟ್ರದ ಮಂತ್ರಿ ಮಂಡಲದವರು ರಾಜೀನಾಮೆ ಕೊಡಬೇಕೆಂದು ಹೇಳುತ್ತಿದ್ದಾರೆ, ಏನೆಲ್ಲಾ ಗಲಾಟೆ ಮಾಡುತ್ತಿದ್ದಾರೆ, ರಾಜ್ಯಾಂಗದಲ್ಲಿ ಬಿಕ್ಕಟ್ಟನ್ನು ಉಂಟುಮಾಡುತ್ತಿದ್ದಾರೆ, ಅದರಂತೆ ನಾವು ಮಾಡುವುದು ಬೇಡ. ಆದರೆ ಆ ರೀತಿ ಮಾಡಲೇಬೇಕಾದ ಅನಿವಾರ್ಯ ಬಂದರೆ, ಅದಕ್ಕೂ ಸಹ ನಾವು ತಯಾರಾಗಿರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧಪಕ್ಷದವರು ತಮ್ಮ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಚಳುವಳಿ, ರಾಜೀನಾಮೆಗಳಿಂದ ಇಂತಹ ಸಮಸ್ಯೆಗಳು ಬಗೆಹರಿಯುವುದಿಲ್ಲ. ಇವತ್ತಿನ ದಿವಸ ಒಂದು ಗಂಭೀರವಾದ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು ತೆಗೆದುಕೊಳ್ಳುವ ನಿರ್ಣಯ ಎಷ್ಟು ತೀವ್ರಸ್ವರೂಪದ್ದಾಗಿದೆಯೆಂಬುದನ್ನು ದೇಶದಲ್ಲಿರತಕ್ಕಂಥ ಜನರಿಗೆ ತೋರಿಸಿಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆಯೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಅನೇಕ ಮಿತ್ರರು ಮಹಾಜನ ವರದಿ ಮೇಲೆ ಮಾತನಾಡಿದ್ದಾರೆ. ನಾನು ಕೆಲವು ಹೊಸ ವಿಚಾರ ಹೇಳುವ ಇಚ್ಛೆ ಇಟ್ಟುಕೊಂಡು ಈ ಸಭೆಗೆ ಮಹತ್ವದ ವಿಚಾರ ತಿಳಿಸಲು ಇಚ್ಛಿಸುತ್ತೇನೆ. ಈ ಮಹಾಜನ ವರದಿಯಿಂದ ನಮ್ಮ ಕನ್ನಡ ನಾಡಿಗೆ ಅನುಕೂಲವಾಗಿದೆ ಲಾಭವಾಗಿದೆ ಎಂದು ಮಹಾರಾಷ್ಟ್ರದ ಬಂಧುಗಳು ತಿಳಿದುಕೊಂಡಿದ್ದಾರೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಇದನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದ ಮೇಲೆ ಕನ್ನಡ ನಾಡಿಗೆ ಲಾಭವಾಗಿರಬಹುದು ಎಂಬ ವಿಚಾರ ಅನೇಕ ಕನ್ನಡ ನಾಡಿನ ಜನರಲ್ಲಿ ಸುಳಿದು ಹೋಯಿತು. ಈ ರಿಪೋರ್ಟ್ ನೋಡಿದಾಗ ಕನ್ನಡ ನಾಡಿಗೆ ಬರಬೇಕಾದ ಪ್ರದೇಶ ಬಾರದೇ, ಲಾಭವಾಗದೇ, ಕೇವಲ ಕನ್ನಡ ನಾಡಿನ ಒಂದು ವಿಚಾರವನ್ನು ಕೂಡ ವಿವೇಚನೆ ಮಾಡದೇ ನಮ್ಮ ರಾಜ್ಯದ ಬೇಡಿಕೆಯನ್ನು ಕಡೆಗಣಿಸಿ ತೀರ್ಪನ್ನು ಮಹಾಜನ ಕಮಿಷನ್ ಕೊಟ್ಟಿದ್ದಾರೆ. ವೈಯಕ್ತಿಕವಾಗಿ ಅವರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಯಾಕಂದರೆ ಮಹಾಜನ ಅವರು ಮೇಧಾವಿಗಳು ಮಾಜಿ ಶ್ರೇಷ್ಠ ನ್ಯಾಯಾಧೀಶರು ಆಗಿದ್ದರು. ನಮ್ಮ ಬೇಡಿಕೆಗಳ ವಿಷಯ ಈ ರಿಪೋರ್ಟಿನಲ್ಲಿ ನೋಡಿದಾಗ ನಮಗೆ ಲಾಭವಾಗುವುದರ ಬದಲು ಹೆಚ್ಚು ಹಾನಿಯಾಗಿದೆ ಎಂದು ಹೇಳುತ್ತೇನೆ. ಮಹಾಜನ ಕಮಿಷನ್ ನೇಮಿಸುವ ಹಿನ್ನೆಲೆ ನೋಡಿದರೆ ಅಖಂಡ ಕರ್ನಾಟಕದ ಎರಡೂವರೆ ಕೋಟಿ ಜನ ವಿರೋಧ ಮಾಡಿದ್ದಾರೆ. ಕನ್ನಡ ನಾಡಿನ ಅನೇಕ ಭಾಗಗಳಲ್ಲಿ ಚಳವಳಿ ನಡೆದಿದೆ, ಜನ ಪ್ರಾಣ ಕಳೆದುಕೊಂಡಿದ್ದಾರೆ. ಈ ಸಮಿತಿ ನೇಮಕಕ್ಕೆ ವಿರೋಧ ಮಾಡಿದ್ದಾರೆ. ಹಾಗಾದರೆ ಇಂಥ ಸಮಿತಿಯ ವರದಿಯನ್ನು ಒಪ್ಪಿಕೊಳ್ಳತಕ್ಕಂಥ ಪರಿಸ್ಥಿತಿ ಏತಕ್ಕೆ ಬಂತು ? ಈ ಸಮಿತಿ ನೇಮಿಸುವ ವಿಚಾರದಲ್ಲಿ ಕೇಂದ್ರ ಸರಕಾರದ ಗೃಹ ಮಂತ್ರಿಗಳು ಕಾರಸ್ಥಾನ ಕಷ್ಟ ನೋಡಿದರೆ ಇನ್ನೂ ದುಃಖವಾಗುತ್ತದೆ. ಕಾಂಗ್ರೆಸ್ ವರ್ಕಿಂಗ ಕಮಿಟಿಯ ರೆಜಲ್ಯೂಷನ ಪ್ರಕಾರ ಈ ಗಡಿ ವಿವಾದಕ್ಕೆ ಮಹಾಜನ ಅವರನ್ನು ನೇಮಕ ಮಾಡಲು ಅನುಕೂಲ ಮಾಡಿಕೊಂಡಿದ್ದರು. ಈಗ್ಗೆ ಗೃಹ ಮಂತ್ರಿಗಳು ಒಂದು ವಿಚಾರ ತಿಳಿದುಕೊಳ್ಳದೆ ಅಧಿಕಾರ ಪ್ರಭಾವದಿಂದ ಪ್ರಚಾರ ಸುರು ಮಾಡಿ ಒಪಿನಿಯನ್ ಪೋಲ್, ನ್ಯಾಷನಲ್ ಕಾನ್‌ಸೆನಸಸ್ ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರಕಾರದ ಧೋರಣೆಯನ್ನು ಮತ್ತು ಮಹಾಜನ ತೀರ್ಪನ್ನು ಕಡೆಗಾಣಿಸಿ ಯಾರ ಮಾತೂ ಕೇಳದೇ ಪ್ರಚಾರ ಶುರು ಮಾಡಿದ್ದಾರೆ. ಇಂಥ ಸಮಯದಲ್ಲಿ ಕಾಂಗ್ರೆಸ್ ಸಂಸ್ಥೆ ಕಣ್ಣು ಮುಚ್ಚಿಕೊಂಡು ಕೂತಿದೆಯೇ ? ಇದನ್ನು ಹೊರಗೆ ಯಾಕೆ ಹಾಕಬಾರದು ! ಎಂಬುದನ್ನು ವಿಚಾರ ಮಾಡತಕ್ಕಂಥ ಸಮಸ್ಯೆ. ನಮ್ಮದು ಸೆಕ್ಯೂಲರ್ ಸ್ಟೇಟ್ ಆಗಿದ್ದರೂ, ಲೋಕ ಸಭೆಯಲ್ಲಿ ಈ ವಿಚಾರ ತೆಗೆದುಕೊಳ್ಳದೆ ಮಹಾಜನ ವರದಿ ವಿರುದ್ಧ ಪ್ರಚಾರ ಷುರು ಮಾಡಿರುವುದರಿಂದ ನಮ್ಮ ಕನ್ನಡ ನಾಡಿಗೆ ನ್ಯಾಯ ದೊರಕುವುದೇ ? ನ್ಯಾಯವಾದ ನಮ್ಮ ಬೇಡಿಕೆ ಪರಿಗಣಿಸದೆ ಸಮಿತಿ ನೇಮಕ ಮಾಡಿ ಇಲ್ಲಿಯ

(ಶ್ರೀ ಎಸ್. ಎಸ್. ಆರಕೇರಿ)

ವರೆಗೆ ಕೇಂದ್ರ ಸರಕಾರ ಅನ್ಯಾಯ ಮತ್ತು ಉದಾಶೀನ ಮಾಡುತ್ತಿರುವುದನ್ನು ನೋಡಿದರೆ ನಮಗೆ ನ್ಯಾಯ ದೊರಕಿಸಿ ಕೊಡಲು ಅವಕಾಶ ಕೊಡುತ್ತಾರೆಯೇ ? ಎಂದು ಸಂಶಯವಾಗುತ್ತದೆ. ಈಗ ಕೇಂದ್ರ ಸರಕಾರದಲ್ಲಿ ಚವಾಣ ಅವರು ಗೃಹ ಮಂತ್ರಿಗಳಾಗಿರುವುದರಿಂದ ಅವರ ಒತ್ತಾಯದಿಂದ ಮಹಾಜನ ಕಮಿಷನ್ ನೇಮಿಸಲಾಯಿತು ಈ ಮಹಾಜನ ಸಮಿತಿ ನೇಮಕದ ಬಗ್ಗೆ ಮಹಾರಾಷ್ಟ್ರ ಬಹಳ ಸಂತೋಷಪಟ್ಟಿತು. ಚವಾಣರು ತಿಳಿದುಕೊಂಡಿದ್ದಾರೆ, ನಾನು ಗೃಹ ಮಂತ್ರಿಯಾಗಿದ್ದೇನೆ, ಇದರ ಪ್ರಭಾವದಿಂದ ಮಹಾರಾಷ್ಟ್ರಕ್ಕೆ ಅನುಕೂಲ ಮಾಡಿ ಕೊಡುತ್ತೇನೆ ಬೆಳಗಾಂವ ಕಾರವಾರ ಭಾಗಗಳನ್ನು ಮಹಾರಾಷ್ಟ್ರಕ್ಕೆ ಮಹಾಜನರವರು ಕೊಟ್ಟು ಬಿಡಬಹುದು ಎಂದು ಅವರು ತಿಳಿದುಕೊಂಡಿದ್ದರು. ಈ ಅವರ ಕನಸು ಎಂದೆಂದಿಗೂ ನನಸು ಆಗಲಿಲ್ಲ. ಅವರಿಗೆ ಈಗ ನಿರಾಶೆಯಾಗಿದೆ, ತಪ್ಪು ಮಾಡಿದ ಬಗ್ಗೆ ಈಗ ಬುದ್ಧಿ ಬಂದಿದೆ. ನನಗೆ ಅನಿಸುತ್ತದೆ ಅವರ ಒತ್ತಾಯದಿಂದ ಒಂಭತ್ತು ತಿಂಗಳು ಪೂರ್ತಿ ತುಂಬದೆ, ಎಂಟು ತಿಂಗಳಿಗೆ ಈ ಕೂಸು ಹುಟ್ಟಿದೆ. ಇಂದಿರಾ ಗಾಂಧಿಯವರ ಮೇಲೆ ಒಂದು ಕಡೆ ಚವಾಣರ ಒತ್ತಾಯ ಇದೆ. ಒಂದು ವೇಳೆ ಈ ಸಮಯದಲ್ಲಿ ನೆಹರು ಅವರು ಇದ್ದಿದ್ದರೆ ಈ ಸಮಿತಿ ನೇಮಿಸುತ್ತಿರಲಿಲ್ಲ. ಈ ವರದಿ ಎಂಬ ಕೂಸು ಎಂಟು ತಿಂಗಳಿಗೆ ಹುಟ್ಟಿದ್ದು. ಯಾರ ಸಲುವಾಗಿ ಈ ಕೂಸು ಹುಟ್ಟ ಬೇಕಾಗಿತ್ತೋ ಅಂತಹ ಮಹಾರಾಷ್ಟ್ರದ ಜನರಿಗೆ ಈ ಕೂಸು ಹುಟ್ಟಿದ ಮೇಲೆ ಅವರಿಗೇನೇ ಇದು ಬೇಡವಾಗಿದೆ. ಇದರ ಬಗ್ಗೆ ಅವರಿಗೆ ನಿಜವಾಗಿಯೂ ನೈತಿಕ ಧೈರ್ಯ ಇದೆಯೇ ? ಎನ್ನತಕ್ಕಂಥ ಸಮಸ್ಯೆ ಇಂದು ನಮ್ಮ ದೇಶದ ಮುಂದೆ ನಿಂತಿದೆ. ಮಹಾರಾಷ್ಟ್ರದಲ್ಲಿ ವಿರೋಧ ಪಕ್ಷದವರು ಬೆಳಗಾಂವ ಹೋಯಿತು, ಉಳಿದದ್ದು ಹೋದರೂ ಚಿಂತೆಯಿಲ್ಲ. ಬೆಳಗಾಂವಿ ಹೋದದಕ್ಕಾಗಿ ದುಃಖ ಪಟ್ಟರು. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ನಾಯಕರು ವಿರೋಧ ಪಕ್ಷದವರ ಕೈ ಮೇಲೆ ಆದೀತು ಅಂತಾ ತಾವು ಈ ವರದಿ ತೀರ್ಮಾನ ಒಪ್ಪುವುದಿಲ್ಲ ಎಂದು ಹೇಳಿದರು. ಕನ್ನಡ ರಾಜ್ಯದ ಮುಖ್ಯ ಮಂತ್ರಿಗಳು ವಿರೋಧ ಪಕ್ಷದವರನ್ನು ಕೇಳಲಿಲ್ಲ ಜನರನ್ನೂ ಕೇಳಲಿಲ್ಲ ಒಪ್ಪಿಕೊಂಡು ಬಿಡಿ ಎಂದು ಹೇಳಿದರು. ಹಿರಿಯರು ಒಪ್ಪಿಕೊಳ್ಳುವಾಗ ಅವರು ಹೇಳಿದ್ದನ್ನು ನಾವು ಕೇಳುವಂಥ ಸೌಜನ್ಯ ಬೇಡವೇ ? ಎಂದು ಕನ್ನಡ ನಾಡಿನ ಎರಡುವರೆ ಕೋಟಿ ಜನರಲ್ಲಿ ಒಂದುವರೆ ಕೋಟಿ ಜನರ ವಿರೋಧ ಪಕ್ಷದ ಪ್ರತಿನಿಧಿಗಳು ಒಪ್ಪಿಗೆ ಇದೆ ಎಂದು ಹೇಳಲಿಲ್ಲವೇ ? ಈಗ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಮಾಡಿದ್ದನ್ನು ನೋಡಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ವಿರೋಧ ಪಕ್ಷದವರನ್ನು ವಿಚಾರಿಸುವ ಬುದ್ಧಿ ಕಲಿಯ ಬೇಡವೇ ? ಐತಿಹಾಸಿಕವಾಗಿ ಮಹಾರಾಷ್ಟ್ರದವರು ಯಾವಾಗಲೂ ಹಲ್ಲಾ ಮಾಡುವುದನ್ನೇ ಕಲಿತಿದ್ದಾರೆ. ಹೈದರ ಅಲಿ ವಿಜಾಪೂರ ಬಾದಶಹಾ ಇವರ ಕಾಲದಲ್ಲಿ ಮಹಾರಾಷ್ಟ್ರದವರ ದಾಳಿಗಳು ನಡೆದದ್ದು ನೋಡಿದರೆ ಗೊತ್ತಾಗುತ್ತದೆ. ಮಹಾರಾಷ್ಟ ದವರು ಐತಿಹಾಸಿಕವಾಗಿ ನಮ್ಮ ಮೇಲೆ ತೋಳು ಏರಿಸುತ್ತಲೇ ಜಗಳಕ್ಕೆ ಬಂದಿದ್ದಾರೆ. ಐತಿಹಾಸಿಕ ವಾಗಿ ಕನ್ನಡ ನಾಡು ಕಾವೇರಿಯಿಂದ ಗೋದಾವರಿ ವರೆಗೆ ಇದ್ದಿತು ಎಂಬುದನ್ನು ನಾವು ಪ್ರಚಾರ ಮಾಡಬೇಕಾಗಿದೆ ಘಂಟಾಘೋಷವಾಗಿ ಸಾರಬೇಕಾಗಿದೆ. ಹನ್ನೆರಡನೇ ಶತಮಾನದ ನಂತರ ಹುಟ್ಟಿಕೊಂಡ ಮರಾಠಿ ಭಾಷೆಯ ಜನರು ಇಂದು ಎಲ್ಲವೂ ತಮ್ಮದೇ ಎಂದು ಸಾರುತ್ತಿದ್ದಾರೆ. ಅವರ ಆಶೆಗೆ ಕೊನೆ ಇಲ್ಲ. ಗಡಿ ಪ್ರದೇಶದಲ್ಲಿರತಕ್ಕ ಕನ್ನಡ ಮರಾಠಿ ಜನ ಸರಿಯಾಗಿ ತಿಳಿದುಕೊಂಡು ಅದರ ಪ್ರಕಾರ ಹೋಗಬೇಕು. ಬರೀ ಭಾವಾವೇಶದಿಂದ ಒತ್ತಾಯದಿಂದ ಇದು ನಮಗೆ ಬರಬೇಕು ತಂಟೆ ಜಗಳಗಂಟತನದಿಂದ ಪಡೆಯುತ್ತೇವೆ ಎಂದು ಅವರು ತಿಳಿದುಕೊಂಡಿದ್ದಾರೆ ಎಂದು ನನಗೆ ಅನಿಸುತ್ತದೆ. ಇದು ನಮಗೆ ಬರಲಿ ಇದು ನಮಗೆ ಬರಲಿ ಎಂದು ಆಶಾ ಇಟ್ಟುಕೊಳ್ಳುವುದು ಸರಿಯಲ್ಲ. ಭಾರತದ ಮೇಲೆ ಪಾಕಿಸ್ಥಾನ ಯಾವಾಗ ದಾಳಿ ಮಾಡುತ್ತದೋ ಯಾವ ಭಾಗ ತೆಗೆದು ಕೊಳುತ್ತದೋ ಚೈನಾದವರು ಯಾವಾಗ ದಾಳಿ ಮಾಡುತ್ತಾರೋ ಎಂಬುದನ್ನು ಮಹಾರಾಷ್ಟ್ರದ ಚವಾಣ ಅವರು ಗಮನಿಸದೆ ಮಹಾರಾಷ್ಟ್ರದ ಗಡಿಯ ಬಗ್ಗೆ ತಲೆ ಹಾಕುತ್ತಾ ಇದ್ದಾರೆ. ದೇಶದ ಹಿತ ಬದಿಗೊತ್ತಿ ತಮ್ಮ ಪ್ರಾಂತದ ಹಿತ ಸಂಕುಚಿತ ಭಾವನೆಯಿಂದ ನೋಡಿದರೆ ಅಂಥವರ' ಕೇಂದ್ರದಲ್ಲಿ ಇದ್ದುಕೊಂಡು ಅಖಂಡ ಭಾರತದ ಹಿತ ರಕ್ಷಣೆ ಮಾಡುವುದು ಹೇಗೆ ? ತನ್ನ ಪ್ರಾಂತದ ಹಿತ ಮರೆತು ಭಾರತ ಮಾತೆಯ ಹಿತ ರಕ್ಷಣೆ ಮಾಡುವುದಾದರೆ ಕೇಂದ್ರದಲ್ಲಿ ಇರಲು ಯೋಗ್ಯತೆ ಬರುತ್ತದೆ. ಅದು ನ್ಯಾಯವಾದುದು. ಇಲ್ಲದಿದ್ದರೆ ಇಂಥ ಸಂಕುಚಿತ ಮನೋ ಭಾವನೆ ಇಟ್ಟು ಕೊಂಡವರನ್ನು ಸೀದಾ ಮನೆಗೆ ಕಳಿಸಿರಿ ಎಂದು ಇಂದಿರಾ ಗಾಂಧಿ ಅವರಿಗೆ ನಾನು ವಿನಂತಿ ಮಾಡಿ ಕೊಳ್ಳುತ್ತೇನೆ. ಶಿವ ಸೇನೆಗೆ ಆಶೀರ್ವಾದ ಕೊಟ್ಟವರು ಯಾರು ? ಈ ಶಿವ ಸೇನೆ ಅವತಾರ ಭಸ್ಮಾಸುರನ ಅವತಾರವಾಗಿದೆ. ತನ್ನ ತಲೆಯ ಮೇಲೆ ತಾನು ಕೈ ಇಡಲು ಹೋಗುತ್ತದೆ. ಶಿವಾಜಿ ಮಹಾರಾಜರಂಥ ಇತಿಹಾಸ ಪ್ರಸಿದ್ಧ ವ್ಯಕ್ತಿಗಳ ಹೆಸರು ಕೆಡಿಸಲು ಅವರ ಹೆಸರನ್ನು ಇಟ್ಟು

ಕೊಂಡು ಈ ಶಿವಸೇನೆ ಹುಟ್ಟಿದೆ. ಚವಾಣರು ತಾವು ಎರಡನೇ ಶಿವಾಜಿಯಾಗಬೇಕು ಎಂದು ತಿಳಿದು ಕೊಂಡಿದ್ದಾರೆ. ಭಸ್ಮಾಸುರನ ಹಾಗೆ ಅವರ ಸ್ಥಿತಿಯಾಗಿದೆ. ಅವರ ಈ ನೀತಿ ಅವರಿಗೇನೇ ಅಡ್ಡಿ ಯಾಗುತ್ತದೆ ಎಂದು ಅನಿಸುತ್ತದೆ. ನನಗೆ ಯಾರು ಅಡ್ಡಿ ಮಾಡುತ್ತಾರೆ ನಾನು ಕೇಂದ್ರ ಮಂತ್ರಿ ಎಂದು ಅವರು ತಿಳಿದುಕೊಂಡಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ಯಾರೂ ದೊಡ್ಡವರಲ್ಲ. ಇನ್ನಾ ದರೂ ಕೂಡ ಅವರಿಗೆ ಜ್ಞಾನೋದಯವಾಗಲಿ, ಇಂಥ ಕರ್ನಾಟಕ ವಿರೋಧಿ ಪ್ರಚಾರವನ್ನು ನಿಲ್ಲಿಸಲಿ, ತಪ್ಪು ಅಭಿಪ್ರಾಯವನ್ನು ಬಿಟ್ಟು ಕೊಡಲಿ, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಹೇಳುವ ಉತ್ತಮ ವಿಚಾರದಂತೆ ಮಹಾಜನ್ ರಿಪೋರ್ಟ್‌ಗೆ ಕೇಂದ್ರ ಸರಕಾರ ಮನ್ನಣೆ ಕೊಟ್ಟು ಈ ವರದಿಗೆ ಪೂರ್ತಿ ಯಾಗಿ ಒಪ್ಪಿಗೆ ಏತಕ್ಕೆ ಕೊಡಬಾರದು ? ಕೇಂದ್ರ ಸರಕಾರಕ್ಕೆ ಒಳ್ಳೇ ವಿಚಾರಗಳನ್ನು ತಿಳಿಸಿ ನಮ್ಮ ಕನ್ನಡ ನಾಡಿಗೆ ಲಾಭವಾಗಿಲ್ಲ ಅನೇಕ ಭಾಗ ಕಳೆದುಕೊಂಡಿದೆ ಎಂದು ಕೇಂದ್ರ ಸರಕಾರ ಮತ್ತು ಲೋಕ ಸಭೆಯ ಗಮನಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತರಬೇಕೆಂದು ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವರದಿಯ 71ನೇ ಪುಟದಲ್ಲಿ ಮಹಾಜನ ಅವರು ಈ ರೀತಿ ಹೇಳಿದ್ದಾರೆ :

> "Territorial claims on the basis of language or any other religious or non-tangible and unsecular basis is sure to lead to the kind of claim that the Muslim League made for Pakistan."

ಸ್ವಾಮಿ, ಭಾಷೆಯ ಮೂಲ ವಿಚಾರ ಧಾರೆ ಹೇಗೆ ಹರಿಯುತ್ತಿದೆ ಎನ್ನುವುದನ್ನು ನೋಡಿದರೆ ಭಾಷೆಯಿಂದ ಭಾರತ ದೇಶದ ಐಕ್ಯತೆಗೆ ಗಂಡಾಂತರ ಬಂದು ಪಾಕಿಸ್ಥಾನ ಬೇರೆ ಆದ ಹಾಗೆ ಮಹಾರಾಷ್ಟ್ರದ ಹಟಮಾರಿತನದಿಂದ ಇನ್ನೊಮ್ಮೆ ಭಾರತ ದೇಶದ ಹಿತಕ್ಕೆ ಧಕ್ಕೆ ಬರಬಹುದು ಎನ್ನುವ ಅವ್ಯಕ್ತವಾದ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರದ ಹಟಮಾರಿತನದ ಸ್ವಭಾವ ದಿಂದ ಆದಂತೆ ಈ ಭಾಷೆಯಿಂದ ನಮಗೆ ಬರಬಹುದು, ದೇಶಕ್ಕೆ ಗಂಡಾಂತರ ಬರಬಹುದು ಎನ್ನುವ ವಿಷಯವನ್ನು ಮಂಡಿಸಿದ್ದಾರೆ.

ಮಹಾರಾಷ್ಟ್ರದವರು ಕೇಳಿದ್ದ 814 ಹಳ್ಳಿಗಳಲ್ಲಿ ಸುಮಾರು 262 ಹಳ್ಳಿಗಳು ಅವರಿಗೆ ಹೋಗಿವೆ. ನಮಗೆ 514 ಹಳ್ಳಿಗಳಲ್ಲಿ ಒಂದೂ ಬಂದಿಲ್ಲ. ಅವರು ಏನು ಕೊಡುತ್ತೇವೆಂದು ಹೇಳು ತ್ತಿದ್ದರು ಅದರಲ್ಲಿ 247 ಹಳ್ಳಿಗಳು ಕರ್ನಾಟಕಕ್ಕೆ ಬಂದಿವೆ. ನಮ್ಮ ಸರ್ಕಾರ ಏನು ಪಡೆದಿದೆ ಎಂದು ಕೇಳುತ್ತೇನೆ. ಅವರು ಭಿಕ್ಷೆ ಎಂದು ಒಡ್ಡಿದ ಹಳ್ಳಿಗಳು ಮಾತ್ರ ನಮಗೆ ಬಂದಿವೆ. ಕಾರಣ ವೇನೆಂದರೆ ನಮ್ಮ ಸರ್ಕಾರದಲ್ಲಿರುವ ಸಪ್ಪೆತನ. ಷೋಲಾಪುರ, ಉತ್ತರ ಷೋಲಾಪುರ, ಮಂಗಳ ವೇಢೆ ತಾಲ್ಲೂಕು, ಜತ್, ಬೆಳಗಾಂ, ಖಾನಾಪುರ, ಈ ಭಾಗಗಳೆಲ್ಲ ನಮ್ಮವು ಎಂದು ಹೇಳುವಂಥ ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಲಾರದಕ್ಕೆ ಒಂದು ಹೆಚ್ಚು ಹಳ್ಳಿಯು ನಮಗೆ ಸಿಕ್ಕಲಿಲ್ಲ. ಅವರು ಕೊಡುತ್ತೇವೆಂದು ಹೇಳಿದ್ದರಲ್ಲಿ 13 ಹಳ್ಳಿಗಳು ಕಡಮೆಯಾಗಿವೆ. ಇದರಿಂದ ಎಂಥ ಅನ್ಯಾಯ ಕನ್ನಡನಾಡಿಗೆ ಮಹಾಜನ್ ಸಮಿತಿಯ ವರದಿಯಿಂದ ಆಗಿದೆ ಎಂದು ಕಂಡು ಬರುತ್ತದೆ. ನಾವು ಮಹಾಜನ್ ಅವರ ಬಗ್ಗೆ ಏನೂ ಹೇಳಬಾರದು. ಅವರು ಎಲ್ಲ ಕಡೆಯೂ ಅಡ್ಡಾಡಿದ್ದಾರೆ. ಯಾವ ಕಾಲಕ್ಕೆ ಮಹಾಜನ್ ಅವರು ಕೆಲವು ಭಾಗಗಳಲ್ಲಿ ಸಾಕ್ಷ್ಯ ಸಂಗ್ರಹ ಮಾಡಿದರು ಆ ಕಾಲಕ್ಕೆ ಅಲ್ಲಿಯ ಕನ್ನಡ ಜನರು ತಮ್ಮ ವಿಚಾರಗಳನ್ನು ತಿಳಿಸುವುದಕ್ಕೆ ಹೋಗುವಾಗ್ಗ ಪೋಲೀಸರು ಮತ್ತು ಮರಾಠಿ ಜನರು ಅವರಿಗೆ ಅಡ್ಡಿ ಮಾಡಿದ್ದಾರೆ. ಕನ್ನಡ ತಾಯಿಯೊಡನೆ ಒಂದಾಗಬೇಕು ಎನ್ನುವ ವಿಚಾರ ಜನರಲ್ಲಿ ಇದ್ದಾಗ ಅವರು ಸಮಿತಿಯ ಮುಂದೆ ಬರದಂತೆ ಮಾಡಿದ್ದಾರೆ.

1920ರಲ್ಲಿ ಭಾರತ ಸ್ವತಂತ್ರವಾಗಲು ಎಲ್ಲರೂ ಬೆಂಬಲ ಕೊಡಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. ಅದರ ಸಲುವಾಗಿ ಭಾಷಾವಾರು ಪ್ರಾಂತಗಳನ್ನು ಒಪ್ಪಿಕೊಂಡಿದ್ದರು. ಮಹಾ ರಾಷ್ಟ್ರದವರಿರಲಿ, ಕನ್ನಡ ಬಂಧುಗಳಿರಲಿ, ಯಾರೇ ಇರಲಿ ಎಲ್ಲರೂ ಭೇದ ಭಾವವಿಲ್ಲದೆ ರಾಷ್ಟ್ರಕ್ಕಾಗಿ ಕೆಲಸ ಮಾಡಬೇಕೆಂದು ಮೂಲ ತತ್ವಗಳನ್ನು ಇಟ್ಟುಕೊಂಡಿದ್ದರು. ಆಡಳಿತ ದೃಷ್ಟಿ, ಭಾಷೆಯ ದೃಷ್ಟಿ ಮತ್ತು ಅರ್ಥಿಕ ದೃಷ್ಟಿ ಈ ಮೂರು ತತ್ವಗಳನ್ನು ಇಟ್ಟುಕೊಂಡು ಯಾವುದೇ ಗಲಾಟೆ ಅಥವಾ ಸತ್ಯಾಗ್ರಹಗಳನ್ನು ಮಾಡಲಾರದೆ ಶಾಂತ ರೀತಿಯಿಂದ ಗಡಿಸಮಸ್ಯೆ ನಿವಾರಣೆ ಮಾಡಿದ್ದರೆ ಚೆನ್ನಾ ಗಿತ್ತು ಎಂದು ನನಗನ್ನಿಸುತ್ತಿದೆ. ಕನ್ನಡ ನಾಡಿಗೆ ಇನ್ನೂ ಅನೇಕ ಪ್ರದೇಶಗಳು ಬರ ಬೇಕಾಗಿವೆ, ಮಹಾರಾಷ್ಟ್ರ ಬಾಂಧವರಿಗೆ ಏನು ನ್ಯಾಯವಿದೆಯೋ ಅದಕ್ಕಿಂತ ಹೆಚ್ಚಾಗಿ ಹಳ್ಳಿಗಳು ಸಿಕ್ಕುತ್ತಿದೆ. ಅವರಿಗೆ ಬೆಳಗಾಂ ಬಂದರೆ ಸಮಾಧಾನ ಎನ್ನುವ ಯೋಚನೆಯನ್ನು ಇಟ್ಟುಕೊಂಡಿ ದ್ದಾರೆ. ದಕ್ಷಿಣ ಷೋಲಾಪುರದಲ್ಲಿ 57 ಪರ್ಸೆಂಟ್, ಮಂಗಳವೇಢೆಯಲ್ಲಿ 62 ಪರ್ಸೆಂಟ್, ಜತ್‌ನಲ್ಲಿ 72 ಪರ್ಸೆಂಟ್, ಕೊಲ್ಹಾಪುರ ಜಿಲ್ಲೆಯ ಶಿರೋಳ ತಾಲ್ಲೂಕಿನ 19 ಹಳ್ಳಿಗಳಲ್ಲಿ 62 ಪರ್ಸೆಂಟ್ ಕನ್ನಡ

(ಶ್ರೀ ಎಸ್. ಎಸ್. ಅರಕೇರಿ)

ಮಾತನಾಡುವ ಜನರಿದ್ದು, ಇವೆಲ್ಲ ಕನ್ನಡ ಭಾಗಗಳೆಂದು ಮಹಾಜನ್ ಅವರಿಗೆ ಗೊತ್ತಿದ್ದರೂ ಕೂಡ ಅವನ್ನು ಕನ್ನಡ ನಾಡಿಗೆ ಕೊಟ್ಟಿಲ್ಲ. ಒಂದೇ ಒಂದು ದೃಷ್ಟಿಯಿಂದ, ಆಡಳಿತ ತತ್ವದ ಮೇಲೆ ಕನ್ನಡ ಪ್ರದೇಶಗಳನ್ನು ನಮಗೆ ಕೊಟ್ಟಿಲ್ಲ. ಅದನ್ನು ನೋಡಿದಾಗ ಕನ್ನಡ ನಾಡಿಗೆ ಬರಬೇಕಾದ ನ್ಯಾಯವಾದ ಪ್ರದೇಶಗಳು ಬರಲಾರದೆ ಹೋಗಿವೆ. ಅಕ್ಕಲಕೋಟೆ ಪ್ರದೇಶ, ಬಹಳ ಬಡತನದ ಪ್ರದೇಶ ನಮಗೆ ಬಂದಿದೆ. ಸಂತೋಷ, ಬಡತನದ ಪ್ರದೇಶವೆಂದ ಮಾತ್ರಕ್ಕೆ ನಮ್ಮ ಕನ್ನಡಿಗರನ್ನು ನಾವು ಬಿಡುವುದಕ್ಕೆ ಆಗುವುದಿಲ್ಲ. ಮುಖ್ಯವಾಗಿ ಖಾನಾಪುರ, ನಿಪ್ಪಾಣಿ ಈ ಭಾಗಗಳನ್ನು ನೋಡಿದಾಗ ಬಹಳ ಮಹತ್ವದ ಭಾಗಗಳನ್ನು ಕಳೆದುಕೊಂಡಿದ್ದೇವೆಂದು ನಮಗನ್ನಿಸುತ್ತದೆ. ಇದರಿಂದ ನಮಗೆ ಅನ್ಯಾಯವಾಗಿಲ್ಲವೇ? ಬಹಳ ಅನ್ಯಾಯವಾಗಿದೆ. ಇಷ್ಟೆಲ್ಲ ತಿಳಿದುಕೊಂಡಿದ್ದರೂ ಕೂಡ, ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ, ಭಾರತ ದೇಶದ ಹಿತದೃಷ್ಟಿಯಿಂದ, ಭಾರತ ದೇಶವನ್ನು ಸುಭದ್ರವಾದ ರಾಷ್ಟ್ರವಾಗಿ ಕಟ್ಟುವ ದೃಷ್ಟಿಯಿಂದ, ಅಖಂಡ ಭಾರತದ ಹೆಸರನ್ನು ಉಳಿಸುವ ದೃಷ್ಟಿಯಿಂದ, ಗಲಾಟೆ ಅಥವಾ ಜಗಳವನ್ನು, ಭಾಷಾವಾರು ಗಡಿ ವಿವಾದವನ್ನು ಎಲ್ಲವನ್ನೂ ಇವತ್ತಿನ ದಿವಸ ಅಂತಿಮವಾಗಿ, ಪೂರ್ತಿಯಾಗಿ ಮುಗಿಸುವಂಥ ಉತ್ಕಟ ಇಚ್ಛೆಯಿಂದ, ಕನ್ನಡ ನಾಡಿಗೆ ಕೆಲ ಹಳ್ಳಿಗಳೂ ಹೋದರೂ ಸರಿ, ಮಹಾರಾಷ್ಟ್ರಕ್ಕೆ ಹೆಚ್ಚು ಹೋದರೂ ಸರಿ, ನಾವೆಲ್ಲ ಭಾರತ ದೇಶದಲ್ಲಿ ಭಾರತ ನಾಡಿನಲ್ಲಿ ಇದ್ದೇವೆ ಎನ್ನುವ ಒಂದು ಔದಾರ್ಯದಿಂದ ನಾನು ಹೇಳುತ್ತಿದ್ದೇನೆ. ಮಹಾಜನ್ ಸಮಿತಿಯ ವರದಿಯನ್ನು 'ಇನ್ ಟೋಟೋ' ಒಪ್ಪಿಕೊಳ್ಳಲೇಬೇಕು ಎನ್ನುವಂಥ ವಿಚಾರವನ್ನು ಈ ಮಾನ್ಯ ಸಭೆಯಲ್ಲಿ ಇಡುತ್ತಿದ್ದೇನೆ. ಮಹಾರಾಷ್ಟ್ರದವರೂ ಸಹ ಅಷ್ಟೇ ಉದಾರ ಬುದ್ಧಿಯಿಂದ, ಕನ್ನಡ ನಾಡಿನ ಔದಾರ್ಯದಂತೆ ದೇಶದ ಹಿತಕ್ಕಾಗಿ ಮಹಾಜನ್ ವರದಿಯನ್ನು ಒಪ್ಪಿಕೊಳ್ಳಲಿ ಎನ್ನುವ ವಿಚಾರವನ್ನು ಇವತ್ತಿನ ದಿವಸ ನಾನು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ನನಗೆ ಈ ಅವಕಾಶವನ್ನು ಕೊಟ್ಟದ್ದಾಕ್ಕಾಗಿ ತಮಗೆ ಅನಂತವಾದ ಕೃತಜ್ಞತೆಗಳನ್ನು ಅರ್ಪಿಸಿ ಈ ಕನ್ನಡ ನಾಡಿನ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಸಪ್ಪೆತನವನ್ನು ಬಿಟ್ಟು, ದಿಟ್ಟತನದಿಂದ ನಮಗೂ ಗಡಸುತನವಿದೆ, ನಾವು ಧೀರ ಕನ್ನಡಿಗರು ಕನ್ನಡ ನಾಡಿಗೆ ಅನ್ಯಾಯವಾಗಿದ್ದರೂ ಭಾರತ ಐಕ್ಯಕ್ಕಾಗಿ ಈ ವರದಿಯನ್ನು ಪೂರ್ತಿಯಾಗಿ ಒಪ್ಪುತ್ತೇವೆ, ಇದು ವರದಿ ಕೇವಲ ಸಿಫಾರಸು ಇದ್ದರೂ ಕೂಡ ಅವಾರ್ಡ್ ಅಂತಾ ಇದನ್ನು ಪಾರ್ಲಿಮೆಂಟ್ ಒಪ್ಪಬೇಕು, ಪಾರ್ಲಿಮೆಂಟ್ ಒಪ್ಪುವ ಹಾಗೆ ಒತ್ತಾಯ ಮಾಡಬೇಕು, ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri C. L. PATTANA SHETTY (Bagewadi).—Sir, I stand to support the acceptance of the Mahajan Commission Report which has been laid down by the Hon'ble Minister, Food Minister. We Kannadigas have been scattered here and there from times immemorial. Since 1920 many enthusiastic Kannada leaders were trying to bring the people under one fold for cultural, economical and educational and political integration. It came to light to some extent in the year 1924 in the Belgaum AICC session when called by the Karnataka Pradesh Congress Committee of which Mahatmaji was the President. Subsequently in the year 1928 when the All Party meeting was held in Nagpur, there it was assured that the linguistic provinces will be created. The eminent scholar of Marathi Sri N. C. Kelkar in that connection has said that Belgaum belongs to Karnataka. After the lapse of so many years, again it was decided to appoint a high power commission to go into the matter of forming linguistic States. This States Reorganisation Commission consisting of three eminent persons namely Fazlali, Panikkar and H. N. Kunzru was appointed in 1953, which collected all statistics and submitted its report which in turn was passed by the Parliament as an Act. At the passing of that Act, clause

by clause no Maharashtrian Member of the Parliament opposed. But to our surprise they started to object it subsequently after seven or eight months. The States Reorganisation Act brought in all the Kannada parts scattered here and there to a single fold. On 1st November 1956, the new State of Mysore came into cxistence under the able and patriotic leadership of the architect of Karnataka Sriman Nijalingappa.

The Kannadigas are always of law-abiding and peace-loving nature, who went on with existing state of affairs. But the Maharashtrians kept the border agitation alive for ten years continuously to achieve their ulterior motives. The common man in that area is not so much interested in this dispute but the politicians took advantage by appealing to the emotional urges of ignorant people of the area. This has been mentioned in the Report of the Mahajan Commission on page 88, para 262. This appeal is being made with the implied consent and connivance of the Maharashtrians in the Central Home Ministry. They used a leader like Senapathi Bapat to go on fasting when the A. I. C. C. meeting was called at Bombay. They wanted to take that opportunity to impress upon the Prime Minister of India that the situation was grave and had the support of one and all in Maharashtra. She was prevailed upon to appoint a Commission for resolving this border dispute. Accordingly, an urgent meeting of the Congress Working Committee was called at the instance of the Central Home Minister and the Chief Minister of Maharashtra though Sri Nijalingappa, Chif Minister of our State at first opposed it. Subsequently he had to agree to the appointment of a Commision to settle the boundary dispute of Maharashtra, Mysore and Kerala. Accordingly Justice Mahajan was appointed as One-Man Commission. His appointment was welcomed by all the Maharashtrians. They praised him as one having judicious mind. On the other hand, after the A. I. C. C. took a decision to appoint the Commission all the Kannadigas of Mysore State agitated against the appointment of the Commission and in protest went on Satyagraha by stopping railway trains, motor buses and did all that. The agitation was Statewide and there was heavy loss both to the Government as well as to private property. Ultimately, it was decided to accept the appointment of the Commission and co-operate with it. Accordingly, the people of the State put in their claims by way of submission of memoranda, tendering evidence and interviewing the Commission; so many statements and memoranda were laid before the Commission regarding the border disputes. Our hon, Chief Minister, out of a sense of patriotism, said, even before the Report of the Commission was ready, that he will accept the recommendations, whatever they be, in toto, since they would be coming from an eminent person who held the highest position in the judiciary of India and who had vast and varied experience. Our Chief Minister also stated that he would take it as an award. At that time, the Chief Minister of Maharashtra stated that Sri Nijalingappa alone cannot claim the privilege of accepting the Commission's Report and added that the Report was binding on both Maharashtra, Mysore

(SRI C. L. PATTANA SHETTY)

and the Union Government as well. This was stated by the Chief Minister of Maharashtra himself. After the Report was submitted by the Commission on 29th August 1967 to the Minister of Home Affairs in the Central Government, a meeting of the Maharashtra Government. Cabinet was also called and held for this purpose at Bombay; it also decided to accept the Report. Subsequently, the Opposition parties launched an agitation against that view, which made the Maharashtra Government to reject the Report at the Nagpur Session of the Maharashtra Legislature ; which is only a second thought; it was quite evident that it was done under coercion and pressure. This has made them to break the promise which was given by them at the A. I. C. C. meeting. The Central Home Minister's statement in the Parliament regarding a national consensus of all the leaders on this dispute is ununderstandable. The Chief Minister of Maharashtra declared long back that he would accept the Report of Mahajan.

It was stated by some Hon'ble Members of this House that Mr. Mahajan interviewed some persons in the dak bungalows and did not tour in the villages. That is not a correct statement. In fact, Mr. Mahajan practically visited all the rural parts in dispute and interviewed the villagers on the spot. He has treated his assignment with utmost conscience and spared no pains to arrive at justice.

6-00 P.M.

Then it was argued that election results should be taken as criterion. But in our areas, especially the constituency from where I come, the the majority consists of Marathi people. In spite of it, I have been elected.

Sri B. P. KADAM.—I rise to a point of order. The Hon'ble Member is reading. I feel so.

Mr. SPEAKER.—A point of order cannot be founded on imagination. He says, he feels that he is reading. I do not see any paper in front of him. Sri Pattanna Shetti, may kindly conclude.

Sri C. L. PATTANA SHETTY.—In the General Election I have secured 26,000 votes and the M. E. S. candidate who contested against me secured only 15,000 votes, which clearly shows that all the people speaking Marathi do not actually desire to go to Maharashtra. If that was the case, they would have definitely voted for the Samithi candidate.

With special reference to Belgaum, I wish to say that on page 97, Mr. Mahajan has recommended a corridor for the Rakaskop Water Works from which the Belgaum City receives all its water for all purposes. Rakaskop being in Maharashtra area as proposed, I would like to suggest that the area adjoining that corridor or the road may be conveniently

retained in Mysore since it does not make any major loss to the Maharashtra State. I hope Parliament will view it practically. So also the national highways all round the village Honage ; it also needs to be considered from the same point of view.

Finally, I support this Resolution placed by the Hon'ble Chief Minister for acceptance of the Mahajan Report.

MR. SPEAKER.—Now, Sri Jalsatgi may speak. He may speak now if he so desires or tomorrow.

SRI M. M. JALISATGI (Bhatkal).—I shall commence tomorrow.

MR. SPEAKER.—I have got here the names of two members from the Opposition.

SRI B. BHASKAR SHETTY.—There is another list here, Sir.

MR. SPEAKER.—I think about 45 members have participated. We are meeting in the morning tomorrow at 8–30 A.M. and devote morning for this and in the afternoon we shall see how matters develop.

Now the House will stand adjourned and meet tomorrow at 8-30 A.M.

The House adjourned at Five Minues past Six of the Clock to meet again at Thirty Minutes past Eight of the Clock on Wednesday the 20th December 1967.

WD 9747—CPB—600—3-2-1968